# ಬೆಳ್ಳಿ ಮೀನು - ೧೯೮೯

## ಏನ ಹೋಗಿ ಏನ ಬಂತು

ಏನ ಹೋಗಿ ಏನ ಬಂತೋ ಎಂಥಾ ಕಾಲ ಬಂದೀತಣ್ಣ
ದೇಶದಲ್ಲಿ ವಿಷದ ಗಾಳಿ ಬೀಸೀತಲ್ಲ
ಆಹಾ | ಗುಂಡು ತೇಲಿ ಬೆಂಡು ಮುಳುಗಿ ಹೋದೀತಲ್ಲ
ಬುದ್ಧ ಬಸವ ಎಂಕ ನಾಣಿ ಯಾರ್ಯಾರಿಲ್ಲ
ಇಲ್ಲಿ | ಜಾರಿದಷ್ಟು ದಾರಿ ದೂರ ಬೆಳೆದೀತಲ್ಲ
ಉಫೆ ಉಫೆ ಎಂದೇವೋ ಸ್ವಾಮಿ
ಡಿಂಗ್ ಡಾಂಗೆಂದೇವೋ ||

ಹೆಣ್ಣು ಗಂಡು ಕೈಕಾಲೂರಿ ಕತ್ತೀಹಾಂಗ ಕುಣೀತಾರ
ಬಾಡಿಗೆ ಮುಖ ಧರಿಸ್ಯಾರಲ್ಲ ಬುದ್ಧಿವಂತರ
ಬಾಲ | ಮೂಡೇತಿಲ್ಲೊ ಅಂತ ಮುಟ್ಟಿ ನೋಡ್ಯಾರಲ್ಲ
ಕತ್ತೆ ಬಾಲಕ್ಕೆಲ್ಲಾ ದೇವರ ಕಟ್ಯಾರಲ್ಲಾ
ತಾಜಾ | ಚಳ್ಳೆಹಣ್ಣು ತಿಂದು ತಿಂದು ತೇಗ್ಯಾರಲ್ಲ
ಉಫೆ ಉಫೆ ಎಂದೇವೋ ಸ್ವಾಮಿ
ಡಿಂಗ್ ಡಾಂಗೆಂದೇವೋ ||

**(ಸಾಂಬಶಿವ ಪ್ರಹಸನ)**

## ಒಂದಾರೆ ಅರಳಿದ ಹೂವಿರಲಿ ಶಿವನೆ

ಈ ಕಾಡು ನದಿ ಮಣ್ಣು ದೇವರ ಕಾಯಾ
ಏನಂತ ಹಾಡಲಿ ದೇವರ ಮಾಯಾ ||

ಗುಡ್ಡದಂಚಿಗೆ ಬೆಳ್ಳಿ ಚೆಲ್ಲುವ ಚಂದಿರಗೆ
ಬಾನಲ್ಲಿ ಕಣ್ಣು ಹೊಡೆಯುವ ಚಿಕ್ಕೆಗೆ
ಹೊಳೆಯ ನೀರಿನ ಹೊಳೆವ ತೆರೆಗಳ ನಗಿಸುವ
ಕಿರಣಿಸುವ ಸೂರ್ಯನಿಗೆ ಶರಣೆನ್ನುವೆ ||

ಬೆದೆಕುದಿವ ಬೆನ್ನೀನ ಹುರಿ ಬಿಗಿದ ಮಣಕಿಗೆ
ನಡೆಯುವ ನಡೆಯೆಲ್ಲ ಥೈ ಕುಣಿತವೆ

ಹಳೆಯ ದೇವರನೆಲ್ಲ ಪಳಗಿಸಿ ನಗುವಂಥ
ಕೂಸಿನ ಕಣ್ಣೊಳಗೆ ಕಮಲಗಳೆ ||

ಚಿಮ್ಮುವ ಹೂವಿನ ಘಮ್ಮಾನ ವಾಸನೆ
ಸುಮ್ಮಾನ ಸಡಗರಕೇನೆನ್ನಲೇ
ಸುಡುಗಾಡದೊಳಗಡೆ ಹೂಬಿಡುವ ಮುಳ್ಳಿಗೆ
ಏನೆಂಬ ಹೆಸರಿಂದ ಕರೆಯುವೆನೆ ||

ಒಣನೆಲದ ಬಿರುಕಿನಲಿ ಉದ್ಗಾರದುಸಿರೇನ
ಉಸಿರೆಲ್ಲ ಹಸಿರೀರಿ ಲಕಲಕಿಸಿವೆ
ನೆಲದಾಳ ಅಕ್ಕರೆಗೆ ರೆಕ್ಕೆ ಮೂಡಿವೆಯೇನ
ಚಿಟ್ಟೆಗಳು ಚಿಮ್ಮಿವೆ ಹೂ ಹೂವಿಗೆ ||

ಬದುಕಿನ ಈ ಖುಷಿಗೆ ಕುರುಡಾದ ಮಂದಿಗೆ
ಕಿಲುಬಿದ ಮನಸಿಗೆ ಏನೆನ್ನಲೇ ||
ಸೈತಾನನ ಒಕ್ಕಲಾಗಿ ಕೆಟ್ಟಾಸೆಗಳ ಬಿತ್ತಿ
ನರಕಗಳ ಬೆಳೆವವರಿಗೇನೆನ್ನಲೇ ||

ಕಷ್ಟ ಸಾವಿರವಿರಲಿ ದುಃಖ ಸಾವಿರವಿರಲಿ
ಈ ಬದುಕು ನನಗಿರಲಿ ಶಿವದೇವನೇ
ಸಾವಿರ ಮುಳ್ಳಿರಲಿ ಆದರು ಅದರಲ್ಲಿ
ಒಂದಾರೆ ಅರಳಿದ ಹೂವಿರಲಿ ಶಿವನೇ ||

*(ಫಣಿಯಮ್ಮ - ಚಿತ್ರ ಮತ್ತು ಭೋಳೆಶಂಕರ)*

## ಭಾರತಿ

ಏನs ಹೇಳಲೆವ್ವ ಭಾರತಿ
ಇಡೀ ಜಗದಾಗೆಲ್ಲ ಹಬ್ಬೇತವ್ವ ನಿನ್ನ ಕೀರುತಿ||

ಹತ್ತವತಾರಕೆ ಹೆತ್ತವಳಾದಿ
ಚಿಲ್ಲರೆ ದೇವರು ಛತ್ತೀಸಕೋಟಿ
ದೇವರಿಗೊಂದೊಂದ ಜಾತಿಯ ಕಟ್ಟಿ
ಒಬ್ಬರಿಗೊಬ್ಬರ ಎತ್ತೆತ್ತಿ ಕಟ್ಟಿ
ಜನಗಣವೆಲ್ಲಾ
ರಣರಂಗ ಮಾಡಿ |

ಧರ್ಮದ ಮಾರಿ
ದೇವರ ಕೊಂಡಿ ||

ಬಾಳುವ ದಾರಿ ತೋರೇನಂದಿ
ಸತ್ಯ ಸತ್ತರೂ ಸೈ ಸೈ ಅಂದಿ
ತಾಯಿಗಂಡರಿಗಿ ಮಕ್ಕಳು ಅಂದಿ
ಕಸದ ಕಾಯಕದಾಗ ಕೈಲಾಸ ಕಂಡಿ
ತುಮುಲದ ಅಮಲೇ
ನೆತ್ತಿಗೆ ಏರಿ |
ಆತ್ಮವ ಮಾರಿ
ಕೀರ್ತಿಯ ಕೊಂಡಿ ||

ಮತಿವಂತರ ಎದಿ ಮತಿಗಳ ಸುಲಿದಿ
ತಿಳಿದ ಮಂದಿಗಳ ಮಹಿಮೆಯ ಮುರಿದಿ
ಆದರು ಇತಿಹಾಸಕ ಒಳಗಂಜಿ
ಕಾಲಕೋಶದಾಗ ಅದ ಹುಗಿದಿಟ್ಟಿ
ಗಾಳಿಯ ನಿಲಿಸಿ
ಉಸಿರ ಬಿಗಿದಿಟ್ಟಿ |
ಹರಿಯುವ ನೀರಾ
ಕೆರೆಯ ಮಾಡಿಟ್ಟಿ ||

**(ತುಕ್ರನ ಕನಸು)**

## ತಾಯಿಗೆ ಶರಣೆನ್ನಿರೋ

ಉದ್ಧರಿಸು ಉಘೆಎನ್ನಿರೋ
ಉದ್ದಂಡ | ದಿಂಡುರುಳಿ ಶರಣೆನ್ನಿರೋ
ಸುತ್ತೇಳು ಬಳಗsಕ ಸುದ್ದಿಕೊಡಿರೊ
ಮಾತಾಯಿ ಮಹಾಮಾಯಿ ಜಗದಂಬಿ ಬರತಾಳ
ಸಾವಿರದ ಶರಣೆನ್ನಿರೋ ||

ಕೇರಿ ಹಿರಿಯರು ಬನ್ನಿರೋ
ಊರೀನ | ಕಿರಿಯರೆಲ್ಲಾ ಬನ್ನಿರೋ
ಬಲ್ಲೀದ | ಬಡವರೆಲ್ಲಾ ಬನ್ನಿರೋ
ಬೆನ್ನಿಗಂಟಿದ ಹೊಟ್ಟೆ ಅತ್ಮವಾದವರೆಲ್ಲ |
ಕ್ಯೂ ಇಲ್ಲ ಗಡ ಬನ್ನಿರೋ ||

ತಳಿರು ತೋರಣ ಕಟ್ಟಿರೋ
ಎಳೆಯರ | ಕರುಳುಗಳ ತೂಗುಬಿಡಿರೋ
ಮಡದೇರ | ಮೈ ಹಡದಿ ಹಾಸಿರಯ್ಯೋ
ಕಣ್ಣು ಕನ್ನಡಿ, ಕಳಸ ಕನ್ಯೆಯರ ಮಾನಗಳು |
ನಿನ ಪಾಲಿಗುಧೋ ಎನ್ನಿರೋ ||

ಇದ್ದ ವಾದ್ಯಗಳೂದಿರೋ
ಇಲದಿರಕ | ದನಿಯೆತ್ತಿ ಚೀರ್ಯಾಡಿರೋ
ಇಲದಿರಕ | ಬೊಬ್ಬೆಯಾದರೂ ಹೊಡೆಯಿರೋ
ಎಷ್ಟೆಷ್ಟು ಕಿರುಚಿದರ ಅಷ್ಟಷ್ಟು ಖುಷಿಗೊಂಬ |
ತಾಯೀಗೆ ಶರಣೆನ್ನಿರೋ |

ಕೈಯೂರಿ ಕುಣಿದಾಡಿರೋ
ಇಲದಿರಕ | ಕಾಲೆತ್ತಿ ಹಾರ್ಯಾಡಿರೋ
ಬೇಜಾನು | ಬೊಂಬಾಟು ಜಿಗಿದಾಡಿರೋ
ಕುಣಿಯದಿದ್ದರು ನಿಮ್ಮ ಕುಣಿಸುವಂಥಾಕಿಗೆ |
ಮೈಬಗ್ಗಿ ಶರಣೆನ್ನಿರೋ ||

ಬೆನ್ನಲ್ಲಿ ಏನಿರುವುದೋ
ತಾಯೀಗೆ | ಇನ್ನೆಲ್ಲಿ ಮುಖವಿರುವುದೋ
ಕೈಕಾಲು | ಎಲ್ಲೆಲ್ಲಿ ಚಾಚಿರುವವೋ
ಮುಚ್ಚುಮರೆಗಳ ಒಳಗೆ ಮುಖ ಹುಗಿದ ತಾಯಿಗೆ |
ಸುಮ್ಮನೆ ಶರಣೆನ್ನಿರೋ ||

ಕುರಿಕೋಣ ಬಲಿ ತನ್ನಿರೋ
ಇಲದಿರಕ | ನೀವೇನೆ ಬಲಿಯಾಗಿರೋ
ತಾಯಿಗೆ | ತೃಪ್ತೀಯ ಹಾರೈಸಿರೋ
ಒಂಚೂರು ಬಿಡದೇನೆ ಇಂಚಿಂಚು ನುಂಗುವ |
ತಾಯೀಗೆ ಶರಣೆನ್ನಿರೋ ||

**(ತುಕ್ರನ ಕನಸು)**

# ನೀರಿಗಂತ ನಾನು ಬಂದೆ

ನೀರಿಗಂತ ನಾನು ಬಂದೆ
ಕೇರಿಗಂತ ಹುಡುಗ ಬಂದ
ನೋಡಿದವನೆ ಹೌಹಾರಿ
ದಾರಿಗಡ್ಡ ನಿಂತುಕೊಂಡ
ಸೆರಗ ಹಿಡಿದ ಎಳೆದಾನವ್ವಾ |
ಏ ಪೋರಿ ಬಾರೆ | ಬಾಬಾ ಅಂತ ಕರೆದಾನವ್ವ ||

ಮಾತನಾಡುತ ಬಂದ
ಮೈಮ್ಯಾಲ ಕೈ ತಂದ
ಗಂಧ ಸೂಸುವ ಹೂವೆ ಎಂದ | ನನಗ
ಜಾತ ಮಲ್ಲಿಗಿ ಹೂವ
ಜಗ್ಗಿ ಕೊಯ್ಯುವರೇನೊ
ಮಗ್ಗಿ ಉದುರ್ಯಾವೊ ಚೆದುರಾ |

ಹೂಗಾರನಾಗಿ ಬಂದ ಕೊಯ್ದಾ |
ಹೂಕೊಯ್ದಾ | ಹೂಮಗ್ಗಿ ಕೊಯ್ದಾನ ||

ಸರಸದ ಮಳಿಗಳ
ಮೈಮ್ಯಾಲ ಸುರಿದಾನ
ಹರಿದಾವು ಹರುಷದ ನೀರಾ |
ಎಳಿಮೀನು ತೇಲೇನ
ಸುಳಿವೀಗಿ ಸಿಕ್ಕೇನ
ತಿಳಿಯದಾಯಿತು ನೀರಿನಾಳ | ಆಳ

ಒಳಗೊಳಗ ಗಾಳಾ ಹಾಕಿ ಎಳೆದಾ
ಹಾ ಎಳೆದಾ | ಹಾ ಬಳಿಗೆ ಎಳೆದುಕೊಂಡಾ ||

ಬಂಡುಕೋರನು ಹಿಡಿದ
ಪುಂಡು ಪೋಕರಿ ಹಿಡಿದ
ಮುಚ್ಚಿದ್ದ ಕದಗಳ ಮುರಿದಾ | ಒದ್ದಾ
ಜಡಿಮಳಿ ಜಡಿದಾನ
ಅಣೆಕಟ್ಟು ಒಡೆದಾನ
ಹಾಳಾಗಿ ಹೋದಾವು ಸದರಾ |

ಮೂಡ್ಯಾವು ಬಿರುಕಿನೊಳಗ ಹಸಿರಾ |
ಹಾ ಹಸಿರಾ | ಹಾ ಹಸಿರು ಚಿಗುರ್ಯಾವ ||

**(ನಾಟಕ)**

## ಎಲ್ಲಿ ಇದೆ ಕೊನೆಯ ಆಸೆ

ಧಗೆ ಉರಿವ ಹಗಲಿನಲಿ ಹಸಿರು ಹುರಿದಾಡಿತ್ತು
ಉಸಿರಿಲ್ಲ ತಂಗಾಳಿಗೆ |

ಬಿಳಿಯ ಹಾಳೆಯ ಮೇಲೆ ಮಸಿಯ ಚಲ್ಲಿದ ಹಾಗೆ
ಒಂಟಿ ಮರ ಇಡಿ ಕಾಡಿಗೆ ||

ಎಲೆ ಇರದ ಮರದಲ್ಲಿ ಒಂದೇ ಹೂವರಳಿತ್ತು
ಅನುಮಾನ ಕಣ್ಣಿನಲ್ಲಿ |

ಆ ಹೂವ ಪಕ್ಕದಲಿ ಮೂರುವರ್ಣದ ಹಕ್ಕಿ
ಬಲವಿಲ್ಲ ರೆಕ್ಕೆಯಲ್ಲಿ ||

ಬಿರಿದ ಮೋಡದ ಒಳಗೆ ಕೆಂಡಗಣ್ಣಿನ ಹದ್ದು
ಹೊಂಚಿತ್ತು ಎರಗಲಿಕ್ಕೆ |

ಒಲೆಯ ಮ್ಯಾಲಿನ ಸುಡುವ ಹಂಚುನೆಲ ಕಾದಿತ್ತು
ಜೀವಿಗಳ ಹುರಿಯಲಿಕ್ಕೆ ||

ಕನಸು ಒಣಗಿದ ಕ್ಷಿತಿಜ ಕಲ್ಲಾಗಿ ಕೂತಿತ್ತು
ಹಿಡಿದು ಜೀವಾ ಕಣ್ಣಿನಲ್ಲಿ

ಭಾರರೆಪ್ಪೆಯ ಮೇಲೆ ಶಪಿತ ಬದುಕಿನ ಭಾರ
ಎಲ್ಲಿ ಇದೆ ಕೊನೆಯ ಆಸೆ?

**(ಅವಸ್ಥೆ – ಚಿತ್ರ)**

## ಕಂಗಾಲಾದೀವೊ

ಕಂಡ ಮಾರಿ ಖಬರ ಹಾರಿ
ನಿಂತೇನವ್ವ ಸೆರಗ ಜಾರಿ
ಚಿಗರ ಮೀಸಿ ಚೆಲುವ ಎದುರ ಬಂದಾನಲ್ಲಾ
ನಮ್ಮ | ಚಿತ್ತದಾಗ ಆದಾನಲ್ಲಾ ದಾಖಲಾ
ಇಂಥಾ ಹುಡುಗನ ಮ್ಯಾಲ ಬಿದ್ದಿದಾವ ನಮ್ಮ ಖ್ಯಾಲಾ
ಸುತ್ತ | ಮುತ್ತ ಯಾರ್ಯಾರಿಲ್ಲ ಹಾದಿ ಬಿಲ್ ಕುಲ್ಲಾ
ಹೆಂಗಾರೆ ಬಾರೋ ಹುಡುಗಾ
ಕಂಗಾಲಾದೀವೊ ||

ನಿನ್ನ ರೂಪ ನೋಡಿ ನಮ್ಮ
ತಾಪ ಏರಿದಾವೊ ಮ್ಯಾಲ
ಮೈಯಾಗಿನ ಸೊಕ್ಕು ಉಕ್ಕಿ ಕುದ್ದಾವಲ್ಲ
ನಮ್ಮ | ಕೊರತಿಯೆಲ್ಲಾ ಬಾಯಿ ತೆರೆದ ನಿಂತಾವಲ್ಲಾ
ಹಾ | ತಗ್ಗಿನಾಗಿನ ಜೀವರಸ ಹಿಗ್ಗ್ಯಾವಲ್ಲ
ಹಿಗ್ಗಿ | ಬುಗ್ಗಿ ಒಡೆದು ಆಜುಬಾಜು ಹರಿದಾವಲ್ಲಾ
ಹೆಂಗಾರೆ ಬಾರೊ ಹುಡುಗಾ
ಕಂಗಾಲಾದೀವೊ ||

**(ನಾಟಕ)**

## ಕಿವಿ ಮಾತು

ನಿನ್ನ ಕಿವಿಯಾಗೊಂದು ತುರ್ತು ಮಾತು ಹೇಳಿರತೀನಿ
ಏನ ಮಾತು ತೆಗೆ ಅಂತ ಅನಬ್ಯಾಡಣ್ಣಾ.
ಅಂದರೂ ಅನವೊಲ್ಲ್ಯಾಕ ಕಿವಿಬಾಗಲಾ ಕಾಯತಿರಲಿ
ಬಿಟ್ಟ ಬಿಡು ಅಲ್ಲೇ ಅದನ್ನ ಅರ್ಧಾ ತಾಸ.

ಜಾಸ್ತಿ ಹೊತ್ತು ಬಿಟ್ಟಿರಬ್ಯಾಡ ತೂಕಡಿಸೀತು ಕಿವಿಯಾಗೇನೆ
ಹೋಗಿ ಸ್ವಲ್ಪ ಮಾತಾಡಿಸಣ್ಣ ಏನ ಬಂದಿರಂತ.
ಅದು ನಿನಗ ಹೇಳೋದಕ್ಕ ಏನೋ ಸುದ್ದಿ ತಂದೈತಣ್ಣ
ಕೇಳಿ ತಿಳಕೊ ಏನಸುದ್ದಿ ಹೇಳ್ರೀ ನಮಗಂತ:

ಕಚ್ಚುವಂಥಾ ಅಧಿಕಾರ ನಾಯಿಯಂಥಾ ನಾಯಿಗಿಲ್ಲ
ಮನಶೇರಿಗಂತೂ ಸಾಧ್ಯವಿಲ್ಲ ತಿಳಕೊಳ್ಳಣ್ಣಾ

ಕಸಿಯೋವಂಥಾ ಅಧಿಕಾರ ದೇವರಂಥಾ ದೇವರಿಗಿಲ್ಲ
ಕಳೆದುಕೊಳ್ಳೋ ಅಧಿಕಾರ ಮಾತ್ರ ನಮಗೇ ಐತಣ್ಣಾ||

**(ನಾಟಕ)**

## ಎಲ್ಲರಂಥವಳಲ್ಲ

ಎಲ್ಲರಂಥವಳಲ್ಲ ನಮ್ಮಾಕಿ|
ಸಲ್ಲು ಸಲ್ಲಿಗೆ ತುರುಬಕಟ್ಟಾಕಿ ||ಪ||

ಹಲ್ಲು ಕಿರಿಯೋದನ್ನ ಕಲಿಸಿ
ಜುಟ್ಟು ಹಿಡಿದು ನಡೆಸುವಾಕೆ |
ಹಸಿವು ಬಾಯಾರಿಕೆಯ ಹುಟ್ಟಿಸಿ
ಬಿಸಿಲು ಕುದುರೆಯ ಮ್ಯಾಲೆ ಹತ್ತಿಸಿ |
ಕೂಳು ನೀರಿಗೆ ಬದಲು ಬೈಗಳ
ಮಳೆಯ ಸುರಿವಾಕಿ ||

ಉರಿವ ಬೆಂಕಿಯ ಮುಂದೆ ನಿಂತು
ಬೆಳಕಿನಲ್ಲಿ ತಲೆಯ ಕೆದರಿ |
ಹಿಂದೆ ಬೆಳಗುವ ಪ್ರಭಾವಳಿಗಳ
ತೋರಿ ತಾ ಜಗದಂಬೆಯೆನ್ನುತ
ಸೆಡ್ಡು ಹೊಡೆವಾಕಿ ||

**(ಭೋಳೇಶಂಕರ)**

## ಶಿವಾಪುರದ ಹಾಡು

ಜಯಜಯಾ ಶಿವಪೂರಿಗೆ ||ಪ||

ಹಸಿರಿನ ತವರೂರಿಗೆ
ಹಾಡು ಬೆಳೆವ ಕಾಡಿಗೆ
ನಮ್ಮ ಛಳಿಗೆ ಬಿಸಿಯಾಗುವ
ಕಣ್ಣುಗಳಿಗೆ ಕನಸು ಕೊಡುವ
ಯೌವನವನು ಕಾಪಾಡುವ

ಮುಳ್ಳಿನಲ್ಲು ಹೂಹೂಗಳ ನಗೆಯ ನಗುವ ಸೀಮೆಗೆ
ಜಯಜಯಾ ಶಿವಪೂರಿಗೆ ||

ನೀರಿಗಿಂತ ಆಳವಾದ
ಒಲವ ಬಲ್ಲ ಸೀಮೆಗೆ,
ಆಳದಲ್ಲಿ ಲಾವಣಿಗಳ -
ನುಳ್ಳ ನದಿಯ ಊರಿಗೆ
ಸುಕ್ಕಿನ ಗೆರೆ ಸಾಣೆ ಹಿಡಿವ
ಜಾಣ ಮುದುಕರೂರಿಗೆ
ಹಕ್ಕಿಯ ಸಖೀಗೀತಗಳಿಗೆ
ರಾಗ ತಾಳ ಹಾಕಿ ಕುಣಿವ
ಎಳೆಯರಿರುವ ಊರಿಗೆ
ಜಯಜಯಾ ಶಿವಪೂರಿಗೆ ||

ಋತುಮಾನದ ಪೈರು ಬೆಳೆವ
ದಂಟಿಗೆಂಟು ತೆನೆಗಳಿರುವ
ತೆನೆಗೆ ಒಂದು ಹಾಡುವಂಥ
ಹಕ್ಕಿಯಿರುವ ಊರಿಗೆ
ಜಯಜಯಾ ಶಿವಪೂರಿಗೆ.

**(ಭೋಳೇಶಂಕರ)**

## ನಾ ಗರತಿ

ನಾ ಗರತಿ ಎದುರಾದಾಗ ನಿಮಗಾಯ್ತು ಕೊರತಿ
ತೆರಕೊಂಡು ನಿಂತೇನೋ ಮೀಸಲದ ಪಿರತಿ
ಬೆಂಕಿ ಹರಿದಾಡಿದರು ಬೆನ್ನ ಹುರಿಯೊಳಗ
ಬ್ಯಾರೇ ಸೀಮೆಯ ಬೆಳಕ ಹುಡುಕವರಿಲ್ಲ ||

ಒಂದೆಂಬೊದಿರುವಲ್ಲಿ ಎರಡ ಕಾಂಬುವಿರಿ
ಮೈಮನಸು ನಾನೀನು ಬ್ಯಾರೆ ಎಂಬುವರಿ
ನೆಲದ ಬಿರುಕಿನ ಒಳಗ ಬಿಸಿ ಬಿಸಿ ಉಸಿರಾ
ಹರಕ ನಾದದ ಹಾಡು ಹರಿದಾವೊ ನೂರಾ ||

ಭೂಮಿಯ ಮ್ಯಾಗಿನ ಕಾಮಿನಿಯ ಮರೆತು
ಮುಗಿಲಿನ ನೀಲಿ ನಿರಾಕಾರಕೊಲಿದು

ಹಾವಿನ ಮೈ ನಿಮಗ ಹದ್ದಿನ ತಲೆಯೊ |
ಕೆಳಗ ಮ್ಯಾಲೆಳೆದಾಡಿ ನುಗ್ಗಾದಿರಯ್ಯೊ ||

ಪಾತಾಳಗಂಗಿಯ ಬಿಟ್ಟರಿ ಕೆಳಗ
ನಕ್ಷತ್ರಗಂಗಿಯ ಹುಡುಕುವಿರಲ್ಲ
ಹೊನ್ನಿನ ಕೊಪ್ಪರಿಗೆ ಪಾತಾಳದಾಗಿರಲು
ಆಕಾಶದೊಳಗ್ಯಾವ ಭಾಗ್ಯ ಕಂಡೀರಿ ||

## ಯಾರೊ ಬಂದವರಾ

ಯಾರೋ| ಯಾರೋ ಬಂದವರಾ
ಯಾರೋ ಬಂದಾರು ಗುರುತಿಲ್ಲದವರಾ ||ಪ||

ನಗಿಯೊಳಗ ತುಳುಕ್ಯಾರು ಬೆಳಕಿನ ದಿಗರಾ
ನಾನೀ ದೇವರನ್ನೆಲ್ಲಾ ಪಳಗಿಸಿದವರಾ |
ನೆಲದ ಬಿರುಕಿನ ನರಕ ಕಿತ್ತು ಎಸೆದವರಾ
ಹಸಿರು ಹೌಸಿಗಳನ್ನ ಹೊತ್ತು ತಂದವರಾ ||

ಹುಬ್ಬಿನಲಿ ಘನಮೌನ ಮಾತಾಡಿಸವರಾ
ಕಣ್ಣೀನ ಬೆಳಕಿನಲಿ ಕರಗ್ಯಾವ ನೆರಳಾ |
ಸುರರ ಜಾತಿಗೆ ಸ್ವಲ್ಪ ಕಮ್ಮಿ ಕುಲದವರಾ
ಹ್ಯಾಂಗ ಕೊಟ್ಟರ ಹಾಂಗ ಪಡೆದುಕೊಂಬವರಾ ||

ಕರಣದ ಒಳಗಡೆ ಕಳವಳ ಮೂಡಿ
ಬಿಗಿದಾವ ನರನಾಡಿ ಹರಣ ಹೌಹಾರಿ |
ಚೀರ್ಯಾವು ಬಾಯಿರದ ನೋವುಗಳು ನೂರಾ
ಕೆಣಕಿದರ ಸುಖ ಉದರಿ ಹುಣ್ಣ ಮಾಡವರಾ ||

ಕರಿಮೋಡದಾಗಿನ ಮಿಂಚಿನಂಥವರಾ
ಹೇಳಕಳಿಸಿದ ಹಾಂಗ ಇಳಿದು ಬಂದವರಾ |
ಒಡಲೊಳಗ ಒಡಮುರಿದು ಒಡನಾಡಿದವರಾ
ಗುಟ್ಟಿಗಿ ಗುರಿಹಿಡಿದು ಹೆಡೆಯೆತ್ತಿದವರಾ |
ಇರುಳ ಗವಿಯಲಿ ದೀಪದ ಕಂಬ ನೆಟ್ಟವರಾ ||

**(ನಾಟಕ)**

# ಸಿಟಿಯ ಕಗ್ಗತ್ತಲೆಯಿಂದ ಪಾರಾಗಲು ಯತ್ನಿಸಿದವರ ಹಾಡು

ತಾಯಿ ಭಾರತಮಾತೆ ಜಯಜಯಾ ಎಂದು
ಕೂಗಿದೆವು ಗಾಂಧಿಗೂ ಜಯವಾಗಲೆಂದು

ಆತ್ಮವಿಲ್ಲದ ಸಿಟಿಯ ಮಧ್ಯದಲ್ಲಿ ಬಂದು
ಕೊಳೆ ಚರಂಡಿಯ ಕೊಚ್ಚೆ ನೀರಿನಲ್ಲಿಳಿದು
ತಡವರಿಸಿ ದೌಡಾಯಿಸುತ್ತ ಆ ದಂಡೆ
ಸಾಧ್ಯವಾದರೆ ಬೇಗ ಸೇರಬೇಕೆಂದೆ,
ಬಿಸಿಲು ಬೆಳಗುವ ಸೀಮೆ ಹಸಿರ ಸಿರಿನಾಡು
ಸಿಗಲೆಂದು ಹಾರೈಸಿ ಕನಸುಗಳ ನಾಡು
ಕೂಗಿದೆವು ಗಾಂಧಿಗೂ ಜಯವಾಗಲೆಂದು,
ತಾಯಿ ಭಾರತಮಾತೆ ಜಯಜಯಾ ಎಂದು.

ನಕ್ಷತ್ರ ಇರಲಿಲ್ಲ ಆಕಾಶದಲ್ಲಿ
ಬೆಳಕು ಇದ್ದಿರಲಿಲ್ಲ ನಮ್ಮ ಕಣ್ಣಲ್ಲಿ
ಕತ್ತು ಸಹ ಮುಳುಗಿತ್ತು ಕರಿ ನೀರಿನಲ್ಲಿ
ಗಟ್ಟಿನೆಲ ಕುಸಿದು ಕಾಲಿನ ನೆಲೆಯ ತಪ್ಪಿ
ಈಜಿದೆವು ಬೆಳಕಿರುವ ಸೀಮೆ ಸಿಗಲೆಂದು
ಆ ತನಕ ಮೈಯಲ್ಲಿ ಬಲವು ಬರಲೆಂದು
ಕೂಗಿದೆವು ಗಾಂಧಿಗೂ ಜಯವಾಗಲೆಂದು
ತಾಯಿ ಭಾರತಮಾತೆ ಜಯಜಯಾ ಎಂದು.

ಯಾರಿಗಾದರು ನಮ್ಮ ದನಿ ಕೇಳಲೆಂದು
ಹುಲ್ಲುಕಡ್ಡಿಯನೊಂದ ಎಸೆಯಬಹುದೆಂದು
ಕಣ್ಣೀರು ನೀರುಗಳ ಬೆರಸಿ ಹಾಡಿದೆವು
ತಾಯಿ ಭಾರತಮಾತೆ ಜಯಜಯಾ ಎಂದು.

ಮ್ಯಾಲೆ ಹೊಂಚಿದ ಮೋಡ ಇದೆ ಸಮಯವೆಂದು
ಕರಿನೀರ ಆಳಗಲ ಹೆಚ್ಚಿಸಿತು ಸುರಿದು
ಆಳಕ್ಕೆ ಬೀಳಲಿದೆ ನೀರು ಸನಿಹದಲೆ
ಅಲ್ಲಿ ಮುಗಿವುದು ನಮ್ಮ ಈಜು ಇಷ್ಟರಲೆ
ಹಾಡಲಿರುವುದು ಭಂಡ ಗಾಳಿ ಹಾಡನ್ನು
ನಿಮ್ಮ ಪಾಲಿಗೆ ಬೆಳಕು ಇನ್ನಿಲ್ಲವೆಂದು.
ಆಯ್ತು ಬೆಳಗಿನ ನಿಮ್ಮ ರೇಡಿಯೋದೊಳಗೆ
ಕೇಳಿ ನಲಿಯಿರಿ ನಾವು ಮುಳುಗಿರುವ ಗೀತೆ.

**(ಭೋಳೇಶಂಕರ)**

## ಕಾಂತನಿಲ್ಲದ ಮ್ಯಾಲೆ

ಕಾಂತನಿಲ್ಲದ ಮ್ಯಾಲೆ ಏಕಾಂತವ್ಯಾತಕೆ
ಗಂಧಲೇಪನವ್ಯಾತಕೆ | ಈ ದೇಹಕೆ ||

ಮಂದಮಾರುತ ಮೈಗೆ ಬಿಸಿಯಾದವೇ ತಾಯಿ
ಬೆಳುದಿಂಗಳೂ ಉರಿವ ಬಿಸಿಲಾಯಿತೇ | ನನಗೆ
ಹೂಜಾಜಿ ಸೂಜಿಯ ಹಾಗೆ | ಚುಚ್ಚುತಲಿವೆ ||

ಉರಿಗಳು ಮೂಡ್ಯಾವು ನಿಡುಸುಯ್ಲಿನೊಳಗೆ
ಉಸಿರಿನ ಬಿಸಿ ಅವಗೆ ತಾಗದೆ | ಹುಸಿಹೋಯ್ತೆ
ಚೆಲುವ ಬಾರದಿರೇನು ಫಲವೆ | ಈ ಚೆಲುವಿಗೆ ||

ಕಾಮನ ಬಾಣಾ ಹತ್ಯಾವ ಬೆನ್ನಾ
ಆತುರ ತೀವ್ರ ಕಾಮಾತುರ ತಾಳೆನಾ
ಆರ್ತಳಿಗೆ ಆಶ್ರಯವಿರದೆ | ಒದ್ದಾಡುವೆ ||

ಅನ್ಯಪುರುಷನು ಮಾರ ಅಂಗನೆಯನೆಳೆದಾರೆ
ಕೈಹಿಡಿದ ಸರಿಪುರುಷ ಸುಮ್ಮ | ನಿರತಾರೇನೆ
ಕರುಣೆಯ ತೋರುವರ್ಯಾರೇ | ಸಣ್ಣವಳಿಗೆ ||

**(ನಾಟಕ)**

## ಸೈನಿಕರ ಸಿಟಿ ಬಗೆಗಿನ ಹಾಡು

ವಾಹನಗಳ ತುಟಿ ತುಳುಕಿದೆ ನವಗೀತ
ತಂಬೆಲರಿನ ತುಂಬಾ ಇದೆ ಪೆಟ್ರೋಲಿನ ನಾತ.

ಮಿಲ್ಲಿನ ಹೊಗೆ ದಟ್ಟೈಸಿದೆ ಬಾನ್ನೀಲಿಯ ತುಂಬ
ಸೈರನ್ನಿನ ದನಿ ತುಂಬಿದೆ ಕಿವಿಕಿವಿಗಳ ತುಂಬ

ಲಾಲ್‌ಬಾಗಿನ ತರುಲತೆಗಳ ಮೈಮುಖಗಳ ನೋವು
ಕಪ್ಪಾಗಿವೆ ಕುಂಡದ ಗಿಡಬಳ್ಳಿಯ ಎಲೆ ಹೂವು

ಕೊಳೆಗೇರಿಯ ಕೊಚ್ಚೆಯಲ್ಲಿ ತೇಲಾಡಿವೆ ಮಕ್ಕಳು
ಆಲದೆಲೆಯ ಮೇಲಾಡುವ ಕ್ಯಾಲೆಂಡರ ಕೃಷ್ಣರು

ಯಾಕಾದರು ಹಾರುತ್ತಿದೆ ಮುಗಿಲಿನಲ್ಲಿ ಹದ್ದು
ಬದುಕಬೇಕೆ? ಮುಚ್ಚು ಕದ ಮಾಡಬೇಡ ಸದ್ದು.

**(ಭೋಳೇಶಂಕರ)**

## ಸೈನಿಕರ ಕೋವಿಯ ಹಾಡು

ವಿಜಯಲಕ್ಷ್ಮಿ ಒಲಿದು ಬರಲಿ ನಮ್ಮ ಕೋವಿಗೆ.
ನುಗ್ಗಿ ನಡೆವ ಒದ್ದು ನಡೆವ ಕುಣಿವ ಕೋವಿಗೆ.
ಕೆಂಪು ಭಾಷೆಯಾಡುವೆಮ್ಮ ಕರಿಯ ಕೋವಿಗೆ.
ಗುಂಡುಮಳೆಯ ಸುರಿಸಿ ಶಾಂತಿ ಬೆಳೆವ ಕೋವಿಗೆ.

ಸಿಡಿವುದಕ್ಕೆ ತಾರೆಗಳಿಗೆ
ಹಾಡಲಿಕ್ಕೆ ಸ್ವೈರನ್ನಿಗೆ
ನಮ್ಮ ನಿಮ್ಮ ಥರದ ಜನಕೆ
ಒದೆವ ಕಾಲ ನೆಕ್ಕುವಂಥ
ನಾಯಿ ವಿದ್ಯೆ ಕಲಿಸುವ,
ಕೋವಿಗೆ ಜಯವಾಗಲೆಂದು
ಬನ್ನಿ ಬನ್ನಿ ಹೇಳುವ ||

**(ಭೋಳೇಶಂಕರ)**

## ಹಾರಿ ಬಂದವನೇ

ಹಾರಿ ಬಂದನೇ ಎವ್ವಾ ಏರಿ ಬಂದನೇ
ಹಾರಿ ಬಂದನೇ ಮೈಮ್ಯಾಲೇರಿ ಬಂದನೇ ||ಪ||

ಯಾರ್ಯಾರಿಲ್ಲದ ಸಮಯ ಸಾಧಿಸಿ ಬಂದಿದ್ದಾ
ಸದ್ದು ಮಾಡದೆ ಕದ್ದು ಒಳಗs ನುಗ್ಗಿದ್ದಾ
ಹುತ್ತದೊಳಗಿನ ಸತ್ಯ ಹೊತ್ತಿಗಿ ಹೊರಗ ಬಂಧಾಂಗ ||

ಚಿಗುರು ಹುಲ್ಲಿನ ಪುಳಕ ಮೈಗಿ ಧರಿಸಿದ್ದಾ
ನಕ್ಕ ನಗಿಯಾಗ ಮಲ್ಲಿಗಿ ಹೂವ ತುಳುಕಿದ್ದಾ
ಸೂರ್ಯಾಚಂದ್ರಾಮರನ್ನ ಕಣ್ಣಿನಾಗಿಟಕೊಂಡಿದ್ದಾ ||

ಹರುಷವಾಗುವ ಹಾಂಗ ಸರಸವಾಡಿದ್ದಾ
ಮಾತು ಮಾತಿಗೆ ನಗಿಸಿ ಮೆಚ್ಚ ಮಾಡಿದ್ದಾ
ತಿಳಿದು ತಿಳಯೋದರೊಳಗ ಹೃದಯದ ಬೀಗ ತೆಗೆದಿದ್ದಾ ||

ಭಾಗ್ಯ ಸಿಕ್ಕವರ್ಹಾಂಗ ಹಿಗ್ಗಿ ನಲಿದಿದ್ದಾ
ಕರಣದ ಕೊಬ್ಬಿನಾಗ ಉಬ್ಬಿ ಹೋಗಿದ್ದಾ
ಹುದುಗಿದ್ದ ಸುಖಗಳ ಕೆಣಕಿ ಹುಚ್ಚು ಹತ್ತಿಸಿ ಕುಣಿದಿದ್ದಾ ||

ಊಟಿ ಮಾಡಾಕ ಬಂದ ಮಾಟಗಾರೇನ
ಸುಖದ ಶಿಖರದ ಮ್ಯಾಲ ಹತ್ತಿನಿಂತಾನ
ಇಕ್ಕಟ್ಟೇನ ಬಿಕ್ಕಟ್ಟೆಲ್ಲಾ ಒಟ್ಟಿಗಿ ದೂರ ಮಾಡಿದ್ದಾ ||

**(ನಾಟಕ)**

## ಯಾರವ್ವ ಈ ಚೆಲುವ

ಯಾರವ್ವ ಈ ಚೆಲುವ
ತಂತಾನೆ ರಂಜಿಸುವ
ಸೂರ್ಯನ ಥರ ಹೊಳೆಯುವ ||

ಅಂಬೆಗಾಲಿಡುವಂಥ ಆನೆಯ ಮರಿಯೇನೆ
ಜೊಲ್ಲು ಸುರಿದಲ್ಲೆಲ್ಲ ಮಲ್ಲಿಗೆ ಹೂವೇನೆ
ನಕ್ಕರೀತನ ಮುಂದೆ ಚಂದ್ರ ಕಳೆಗುಂದುವನೆ
ಬಾರೋ ಭಾಗ್ಯದ ಒಡೆಯನೆ ||

ಬೇರೆ ಸೀಮೆಯ ದೈವ ತಪ್ಪಿ ಬಂದಾನೇನೆ
ತೂಗೊ ಜಡೆಗಳ ನೋಡೆ ನಾಗರ ಮಿಡಿಯೇನೆ
ಒಡಲ ಮಣ್ಣಿನ ಒಳಗ ಮೂಡಿದ ಶಿವನೇನೆ
ಮುಸುಗುಡುವ ನಂದಿಯೇನೆ ||

ಏನುಕೊಟ್ಟರು ಒಲ್ಲ ಸೊಲ್ಲು ಅಚ್ಚಿನ ಬೆಲ್ಲ
ಒಳಹೊರಗೆ ಆಡಿದರ ಸಲಕೊಂದು ಅವತಾರ
ಅವ್ವಾ ಈತನ ರೂಪ ನಮ್ಮ ಕಣ್ಣಿನ ದೀಪ
ಬಾರೋ ಭಾಗ್ಯದ ಒಡೆಯನೆ ||

**(ನಾಟಕ)**

# ಕನ್ನಡಿಯೇ ಕನ್ನಡಿಯೇ

ಕನ್ನಡಿಯ ಕನ್ನಡಿಯೇ ಕಣ್ಣಿವೆಯೆ ನಿನಗು?
ಇಲ್ಲವೆ | ಕನ್ನಡಿಯಾಗಿವೆಯೆ ನನ್ನ ಕಣ್ಣು?

ನೀ ನೋಡುತಿರುವೆಯಾ ನನ್ನ?
ಇಲ್ಲವೆ | ನಾ ನೋಡುತಿರುವೆನೆ ನಿನ್ನ?

ನಾ ನಿನ್ನ ಬಿಂಬವೋ? ನೆರಳೋ?
ಇಲ್ಲವೆ | ನೀ ನನ್ನ ಬಿಂಬವೋ? ನೆರಳೊ?

ನಾನಿರದೆ ನೀನಿಲ್ಲ ಹೌದೆ?
ಇಲ್ಲವೆ | ನೀನಿರದೆ ನಾನಿಲ್ಲ ಹೌದೆ?

ಇರಬಹುದು ಇಬ್ಬರು ಬೇರೆ
ಆದರು | ಒಳಗಿರದೆ ಮರದ ಬೇರೊಂದೆ.

ಇಬ್ಬರ ನಡುವಿದೆ ಗಾಜು
ಒಡೆದರೆ | ನಾವಿಬ್ಬರೊಂದೆ ಎರಡಳಿದು.

ಎರಡಳಿದರೊಂದಾಗಬಹುದೆ?
ಇಲ್ಲವೆ | ಒಂಟಿಯಾಗುವೆವಂತೆ ಹೌದೆ?

ಕರಗಿದರೆ ಒಬ್ಬರೊಬ್ಬರಲಿ
ಉಳಿವೆವೆ | ಗಾಜು ಇಲ್ಲವೆ ನೆನಪಿನಲ್ಲಿ?

ಕೇಳಿರುವ ಮಾತು ಈತನಕ
ನೀ ಹೇಳು | ಸಂವಾದವೋ ಅಥವಾ ಸ್ವಗತ?

**(ಸಿರಿಸಂಪಿಗೆ)**

# ಆಮೇಲೆ ಗೋಡ್ಸೆ ಹೇಳಿದ್ದು

ನೀನು ರಾಕ್ ಹಕ್ಕಿಯೆಂದು ನನಗೆ ಗೊತ್ತಾಗಿತ್ತು.
ನಮ್ಮನ್ನು ಕೊಂಡೊಯ್ದು ಇತಿಹಾಸದ ಕುಹುಕದೃಷ್ಟಿ
ಬೀಳದಲ್ಲಿ ಜೋಪಾನ ಬಚ್ಚಿಟ್ಟು
ಬಲಿತು ನಡೆವನಕ ಕಾಪಿಟ್ಟು
ಕ್ಷಿತಿಜದ ಖಜಾನೆಗಳ ಯಜಮಾನರಾಗಿ ಹೊರಬರುವ

ಪವಾಡ ಮಾಡುವಿಯೆಂದು ತಿಳಿದಿತ್ತು.
ಹಳೆಜಿಡ್ಡು ಕಳೆದು ಹೊಸ ಕಾಲಿಗಂಟುವುದಕ್ಕೆ
ನನಗೊಂದಿಷ್ಟು ಸಮಯ ಬೇಕಿತ್ತು. ಅದಕ್ಕೇ
ಹಾರುವ ನಿನ್ನ ತಡೆಯುವುದಕ್ಕೆ
ರೆಕ್ಕೆಗೆ ಗುರಿ ಹಿಡಿದರೆ ತಪ್ಪಿ
ಎದೆಗೇಟು ಬಿತ್ತು. ಅದಕ್ಕೂ ನೀನು

ರಕ್ತವಿದೆಕೋ ಮಾಂಸವಿದೆಕೊ ಅಂತ ಹಲುಬಿದಾಗ
ಹಸುವಿನ ರಕ್ಷಣೆಗೆ ವೈಕುಂಠ ಅವತರಿಸಲಿಲ್ಲ.
ರಾಮನ ಮುಖವಾಡ ನಿನ್ನ ಕಾಪಾಡಲಿಲ್ಲ.
ನೀ ಬಿದ್ದ ಭಂಗಿ ನಡುಗುವ ನನ್ನ ನೋಡಿ
ಕನಿಕರಿಸಿದಂತಿತ್ತು.
ನೆಲದ ಮೇಲಿನ ನೆರಳು ನೆತ್ತರಲ್ಲದ್ದಿ
ಒದ್ದೆಯಾಗಿತ್ತು.
ಕಥೆಯ ನಾಯಕನಂತೆ ಹೇಳವರ ಬಾಯಲ್ಲಿ ಸತ್ತದ್ದೇ
ನಿನಗೆ ಸದ್ಗತಿಯಾಯ್ತು.

ನಮಗೇನು ಸುಖವೇ? ನೋಡು ಏನೇನಾಗಿದೆ:
ನಿನ್ನ ನೆತ್ತರು ಬಿರುಗಾಳಿಗಳನ್ನ ಎಚ್ಚರಿಸಿ
ಅವು ಬೀಸಿ, ಕೂತವರ ಕಣ್ಣಿಗೆ ಮಣ್ಣೆರಚಿ
ಹಸಿರು ಹುರುಪಳಿಸಿದೆ.
ದೇಶದ ನಕಾಶೆಗಂಟಿದ ಹಸಿರಕ್ತದ ಕಲೆಯಿನ್ನೂ
ಹಾಗೇ ಇದೆ.

ನೀನೇನೋ ವಿದೇಶಿಗೆ ಪರ್ಯಾಯ
ಪರಿಧಿಯ ತೋರಿ
ಕೋಲೂರಿದಿ ಕಾಲದ ಪರಿವೆಯಿಲ್ಲದೆ.
ನಿನ್ನ ಹೆಜ್ಜೆಗಳಲ್ಲಿ ಹೆಜ್ಜೆಯಿಟ್ಟು ನಡೆಯೋಣವೆಂದರೆ
ಹೆಜ್ಜೆ ಮೂಡಿದಲ್ಲೆಲ್ಲ ರಾಡಿ ರೊಚ್ಚು.
ನೀನು ಸಾಯುವಾಗ ಹೇ ರಾಮಾ ಅಂದಿದ್ದಕ್ಕೆ
ನಾನೂ ರಾಮಾ ರಾಮಾ ಅಂದರೆ
ಎಷ್ಟೆಲ್ಲ ರಾದ್ಧಾಂತವಾಯ್ತು ದೇಶದ ತುಂಬ!
ಮುದಿಯನ ಸೆಲ್ ವೀಕಾಗಿದೆ ಬನ್ನಿರೋ
ಅಡ್ಡ ಬಂದರೆ ಮುರಿಯಿರೋ
ಉದ್ದ ಬೆಳೆದರೆ ತರಿಯಿರೋ
ಎಂದು ಕಿಡಿ ತಾಗಿಸಿದರೆ
ಬೃಹದಾರಣ್ಯಕ ಭಸ್ಮ.

ನಮಗೊಂದೆ ಭರವಸೆ ಈಗಲೂ
ಕೈಕಾಲು ಕಿತ್ತರೂ
ನಗುವ ಗೊಂಬೆ ನೀನು!

## ಕೂದಲ ಬಲೆ

ಗೋರಿಯಿಂದೀಗಷ್ಟೆ ಎದು ಬಂದ,
ಬೆಳಕು ಆರಿದದೀಪ ಕಣ್ಣಲ್ಲಿ ಮಣ್ಣಿತ್ತು
ಈಜಿ ಸತ್ತಂಗಿತ್ತು, ತೆರೆಹೊಡೆದ ಗುರುತಿತ್ತು ಎದೆಯ ಮ್ಯಾಲೆ.
ಕೂದಲಿಲ್ಲದ ಬುರುಡೆ ಹೊಳಪು ಬೇರೆ.
ತುಟಿಗಳಿಲ್ಲದ್ದಕ್ಕೆ ಹಲ್ಲು ದವಡೆಯನಲುಗಿ
ಎಷ್ಟು ತಪ್ಪಿದೆಯೆಂದು ಪಟ್ಟಿ ಒಪ್ಪಿಸಿದ.

ಇದರ ಬದಲದು ಇದ್ದು ಅದರ ಬದಲಿದು ಇದ್ದ-
ರೆಷ್ಟೊಂದು ಸೊಗವಿತ್ತು, ಹೌದು? ಎಂದ.
ಗೊತ್ತಿರದ ಉತ್ತರವ ನಾನು ಹೇಳುವ ಮೊದಲೆ
ಒಪ್ಪಿಕೋ ತಪ್ಪು ಎಂದ.

ನಾನು ಕಾಣದ್ದನ್ನ ಕಂಡಿರುವೆನೆಂದ
ಮಾಡಲಾರದ್ದನ್ನ ಮಾಡಿರುವೆನೆಂದ
ನಾನು ಇರದಲ್ಲಿಂದ ಇದ್ದು ಬಂದಿದ್ದೇನೆ
ಬೇರೆಯೇ ಗೇಟಿಂದ ನುಗ್ಗಿರುವೆನೆಂದ.

ಇದ್ದಕಿದ್ದಂತೆಯೇ ಕುಸಿದು ಕೂತ,
ತನ್ನ ಮಣ್ಣಿನ ಕಣ್ಣು ಒದ್ದೆಯಾಗಿಸಿದ.
“ತಗೋ ನಿನ್ನ ವಂಶಜರ ಆಸೆ, ಆಶೀರ್ವಾದ”
ಕೂದಲುಂಡೆಯನೊಂದ ಮುಂದೆ ಹಿಡಿದ.

ಇದರಿಂದ ಬಲೆಯೊಂದ ಹೆಣೆಯೊ ಅಂದ -
ನೀರಲೀಜುವ ಬೆಳ್ಳಿಮೀನು ಹೊಳೆಯುವ ಚಂದ್ರ
ಬಲೆಬೀಸಿ ಅವನನ್ನು ಹಿಡಿಯೊ ಅಂದ,
ಹಿಡಿಯದಿದ್ದರೆ ಬದುಕು ವ್ಯರ್ಥವೆಂದ.

ಕೂದಲೆಳೆ ಬಿಟ್ಟೆಯೋ ಸಿಕ್ಕಲಾರದು ಮತ್ತೆ
ಹಿಡಿದುಕೋ ಭದ್ರ ಅಂದ.

ಆದರೆಚ್ಚರ,
ಕೂದಲುಂಡೆ ಕೈಜಾರಿ ನೆಲಕ್ಕೆ
ಬೀಳದ ಹಾಗೆ ನೋಡಿಕೊ ಅಂದ.
ಬಿದ್ದಿತೇ?
ಕೂದಲು ಮಣ್ಣಾಗಿ, ಹುಲುಸು ಹುಲ್ಲಾಗಿ ಬೆಳೆದು
ಕೈಕಾಲಿಗೆ ಸುತ್ತಿ ತೊಡರದ ಹಾಗೆ,
ಮೈಮರೆಸಿ ನಿನ್ನನ್ನೂ ಮಣ್ಣು ಮಾಡದ ಹಾಗೆ
ನೋಡಿಕೋ ಜೋಕೆ ಎಂದ.

ಬಲೆಯ ಹೆಣೆಯುವಾಗ,
ಹಸಿರಿನ ಕಣ್ಣಲ್ಲಿ ಬೆಳಕಾಡಿತೇ?
ಹೂವಿನ ತುಟಿಯಲ್ಲಿ ಜಿನುಗಿತೆ ಹಾಡು?

ಈಗ ಅವಸರ ಮಾಡಿ ಬಲೆಯ ಪೂರ್ತಿ ಮಾಡು
ಕುಕ್ಕರಗಾಲಲ್ಲೆ ಕೂತ ತಾಯಿ ಕಂಡಳೆ? ನೋಡುಃ
ಅಂದ ಶಬ್ದಗಳನ್ನ ಹೊಳೆವ ವಸ್ತುಗಳಾಗಿಸಿ ಲಕಲಕಿಸುವಾಕೆ,
ತನ್ನ ತೊಡೆಯೊಳಗಿಂದ ಹರಿದು ಬರುವ ಜೀವನದಿಯಲ್ಲಿ
ಸದರಿ ವಸ್ತುಗಳನ್ನು ತೇಲಿಸುವಾಕೆ, ಆ ಜೀವನದಿ ಕಂಡಿತೇ?

ನದಿಯಲ್ಲಿ ಕಂಡೀತೇ ಹೊಳೆವ ತಾರಾಲೋಕ?
ಮೀನಾಗಿ ಈಜುವನು ಬೆಳ್ಳಿಚಂದ್ರ!
ಇದೆ ಸಮಯ ಸಮನೋಡಿ ಬಲೆಬೀಸು. ಸಿಕ್ಕಿತೇ?
ಎಲ್ಲ ಪೂರ್ವಜರನ್ನ ಜ್ಞಾಪಿಸಿಕೊ ಅಂದ.
ಸಿಕ್ಕದಿದ್ದರೆ ನೆಪ್ಪಿರಲಯ್ಯಾ, ಸಾಯುವ ಮುನ್ನ
ಹರಡಿದ ಬಲೆಯ ಕೂಡಿಸಿ ಒಟ್ಟಿ
ನಿನ್ನ ಕೂದಲನ್ನೂ ಅದಕ್ಕೆ ಸೇರಿಸಿ, ಉಂಡೆಯ ಮಾಡಿ
ಎದೆಯ ಮ್ಯಾಲಿಟ್ಟುಕೋ ಅಂದ.
ಅಂದು ಅನ್ನುತ್ತಲೇ ಗೋರಿಯೊಳಗಡೆ
ಪುನಃ ಮಾಯವಾದ.

## ಒಂದು ಕನಸು

ಹೇಳದೆ ಕೇಳದೆ ಮೈಲಾರಲಿಂಗನ
ಗುಡ್ಡರ ಹಿಂಡೊಂದು ನುಗ್ಗಿ
ಹುಡು ಹುಡು ಹುಡು ಅಂತ ಹುಡದಿಯ ಹಾಕಿದರು
ಮನೆಮಠ ಎರಡೊಂದು ಮಾಡಿ.

ಕುಡಿದ ಕರಡಿಯ ಹಾಗೆ ಹಾರ್ಯಾಡಿ ಕುಣಿದರು
ಬಂಡೆಗಳ ದಿಂಡುರುಳಿದಂತೆ.
ನಾಯಾಗಿ ಕೂಗಿದರು ಹದ್ದಾಗಿ ಎರಗಿದರು
ನಾನವರ ಬೇಟೆ ಎಂಬಂತೆ.

ಕೆಂಡಗಣ್ಣಿನ ಮಂದಿ ಹುಲಿಗಣ್ಣು ಹುರಿ ಮೀಸೆ
ಹೊತ್ತಿಕೊಂಡುರಿಯುವ ಹುಬ್ಬು
ಕಿಡಿಗಳ ಸೂಸುವ ಚಕಮಕಿ ಹಲ್ಲೆದುರು
ಎಲ್ಲೀಗೆ ಓಡಲಿ ಹೇಳು.

ಡಮರು ಪಿಳ್ಳಂಗೋವಿ ಗರಗರ ಗಗ್ಗರ
ರಭಸದ ನಾದಗಳು ಕೆರಳಿ
ಆಗಸದ ಗಂಟೆಗಳು ಡಣಲೆಂದು ಹೊಡೆದವು
ಕಾರ್ಮೋಡ ಘನಘನ ಗುಡುಗಿ.

ಓಡುವ ನನ್ನನ್ನ ಹಿಡಿದು ಹಿಂಗೈ ಕಟ್ಟಿ
ಬಲಿಯ ಪೀಠದಮ್ಯಾಲೆ ಚೆಲ್ಲಿ.
ಹೊಳೆಯೋ ತ್ರಿಶೂಲಗಳ ಝಳಪಿಸಿ ಸಿಡಿಲಂತೆ
ಹೊಡೆದರು ನೆತ್ತಿಯ ಮ್ಯಾಲೆ.

ಚಿತ್ತ ಸಮುದ್ರಗಳು ಪ್ರಕ್ಷುಬ್ಧವಾದವು
ಆಕಾಶ ಗಾಸಿಯಾದಾವು!
ಹುಗಿದಿದ್ದ ಭಾವಗಳ ಇಡಿ ಅಧೋಲೋಕವೆ
ಕಿಡಿ ತಾಗಿ ಸ್ಫೋಟಗೊಂಡಾವು!

ಮೂಡಣ ಬೆಟ್ಟದ ಚಿತ್ತಾರದರಮನೆಯ
ಬೀಗ ಮುದ್ರೆಗಳು ಒಡೆದಾವು
ಚೆಲ್ಲಂತ ಚೆನ್ನದ ಸಿರಿಬೆಳಕು ಸಿಡಿದಾವು
ನೆಲ ಮುಗಿಲು ರಸದಲ್ಲಿ ಮಿಂದು.

ಅರಳಿದವು ಕಣ್ಣುಗಳು ಅಂತೆಯೇ ಹೃದಯಗಳು
ಹುಣ್ಣಿಮೆಯ ಕಡಲಾಗಿ ಉಕ್ಕಿ
ಪರಿಮಳದ ಪವನಗಳು ಎಲ್ಲಿಂದ ಬೀಸಿದವು?
ಇವಳ್ಯಾರು ಆಕಾಶದಲ್ಲಿ?

ದಳದಳ ಅರಳಿದ ಮುಂಜಾನೆ ಮೋಡದಲಿ
ಲಂಬಾಣಿ ಹುಡುಗಿಯೊಬ್ಬಾಕಿ

ನಗೆಯಿಂದ ಯೌವನ ಸಿಂಗರಿಸಿಕೊಂಡಾಕಿ
ಹಂಬಲದ ಹೂವ ಮುಡಿದಾಕಿ.

ಹಿಂಡು ಗುಡ್ಡರನೆಲ್ಲ ಹೈ ಅಂತ ಹಯಮಾಡಿ
ಬೆಳಕಿನ ತೇರಿಗೆ ಹೂಡಿ
ಹೊರಟಳು ಹತ್ತಲು ನನಗೆ ಸನ್ನೆಯ ಮಾಡಿ
ಎಚ್ಚೆತ್ತೆ; ಮೈತುಂಬ ಬೆವರು!

## ಆ ಮರ ಈ ಮರ

ನದಿಯ ದಂಡೆಯಲ್ಲೊಂದು ಮರ
ನದಿಯಲ್ಲಿ ಒಂದು ಮರ.

ಮೇಲೆ ನಿಜವಾದ ಮರ
ಕೆಳಗೆ ಬಿಂಬಿಸಿದ ಮರ.

ಮ್ಯಾಲಿನ ಮರದಲ್ಲಿ ಚಿಲಿಪಿಲಿ ಪ್ರಪಂಚ
ಗೀತಂಗಳ ಕುಕಿಲುತಾ
ರೆಕ್ಕೆಯಂಚುಗಳಿಂದ ಎಲೆಗಳ ಮ್ಯಾಲೆ
ಕನಸುಗಳ ಗೀಚುತಾ ಇದ್ದರೆ -

ಕೆಳಗೆ ಬೇರುಗಳಲ್ಲಿ
ಚಿಳಿಮಿಳಿ ಮೀನು ಆಳಸುಳಿಯುತಾ

ನೆರಳು ಬೆಳಕಿನ ಬಲೆಯಲೀಜುತಾ
ನೆನಪುಗಳ ಕೆರಳಿಸುತಾವೆ.

ತೆರೆ ಎದ್ದಾಗ
ಒಂದು ನಡುಗುತ್ತದೆ
ಇನ್ನೊಂದು ನಗುತ್ತದೆ.

ಆದರೂ ನೆಪ್ಪಿರಲಿ
ತುದಿಗಳು ಎರಡಾದರೂ
ಬೇರು ಒಂದೇ ಈ ಮರಗಳಿಗೆ.

ನೀನೊಂದು ಮರ ಹತ್ತಿದರೆ
ಇನ್ನೊಂದರಲ್ಲಿ ಇಳಿಯುತ್ತಿ

ತಲೆ ಮೇಲಾಗಿ ಹತ್ತುತ್ತೀಯ
ತಲೆ ಕೆಳಗಾಗಿ ಇಳಿಯುತ್ತೀಯ

ಮ್ಯಾಲೆ ನೀಲಿಯ ಬಯಲು
ಕೆಳಗದರ ನಕಲು
ಎರಡು ಬಯಲುಗಳಲ್ಲು ಒಂದೆ ಮೌನ

ಹತ್ತುತ್ತ ಹತ್ತುತ್ತ ಗಾಳಿಯಾಗುತ್ತಿ ಅಂತ ತಿಳಿ.
ಆದರೂ ನೆಪ್ಪಿರಲಿ ಕೆಳಕ್ಕಿಳಿವ ಕರ್ಮ ತಪ್ಪಿದ್ದಲ್ಲ.
ಹತ್ತೋದು ನಿನ್ನ ಕೈಲಿದ್ದರೂ
ಇಳಿಯೋದು ನಿನ್ನ ಕೈ ಮೀರಿದ್ದು.

ಹತ್ತಿದವರು ಸ್ವರ್ಗ ಸೇರುವರೆಂದು ಸುದ್ದಿ
ನಮಗದು ಖಾತ್ರಿಯಿಲ್ಲ.
ಮುಳುಗಿದವರಿಗೆ ಪಾತಾಳ ಖಚಿತ
ಬೇಕಾದಾಗ ಖಾತ್ರಿ ಮಾಡಿಕೋಬಹುದು.

ಈ ಕಥೆಯ ದುರಂತ ದೋಷ ಯಾವುದೆಂದರೆ:
ನಿಜವಾದ ಮರ ಮತ್ತು
ನೀರಿನ ಮರ
ಇವೆರಡೂ ಒಂದಾದ ಸ್ಥಳ
ಮಾಯವಾಗಿರೋದು.

ಅದಕ್ಕೇ ಹೇಳುತ್ತೇನೆ ಗೆಳೆಯಾ -
ಮ್ಯಾಲೆ ಹತ್ತಿದರೂ
ತಲೆ ಕೆಳಗಾಗಿ ನೇತಾಡುವುದು ತಪ್ಪಿದ್ದಲ್ಲ,
ಮ್ಯಾಲಿಂದ ಜಿಗಿದು
ತಳಮುಟ್ಟಿ
ಮಾಯವಾದ ನೆಲವ
ಹುಡುಕಬೇಕೋ ಹುಡುಕಿ ಬದುಕಬೇಕು.

## ರೆಕ್ಕೆಯ ಹುಳು

ರೆಕ್ಕೆಯ ಹುಳುವೊಂದು ಗಕ್ಕನೆ ನಿಂತಿತು
ಎದುರಿಗೊಂದು ಸೊಡರ
ಕಂಡಿತು | ಬಂಗಾರದ ಸದರ |

ಉರಿಧಾಂಗ | ಸುಖಗಳ ತುದಿಶಿಖರ ||
ದಳದಳ ಅರಳಿದೆ ಬೆಂಕಿಯ ಹೂವಾ
ತಿರುಗಲಿಲ್ಲ ನದರಾ
ಹಾರಿತು | ಹುಳುವಿನ ಮೈಖಬರಾ ||

ಏನ ಮಾದಕಾ ಬೆಳಕಿನೀ ಸುಖ
ಕೆರಳತಾವ ಕನಸ
ಕುದ್ದಾವ | ಹುಳುವಿನ ಮೈಮನಸ |
ಹೆಂಗರೆ | ಮರೆತೆನಿಷ್ಟು ದಿವಸ ||
ಸೂರೆಹೋದವೋ ಮಿರಿಮಿರಿ ಬೆಳಕಿನ
ಸಿರಿಗೆ ನಮ್ಮ ಚಿತ್ತಾ
ವಿರಹಕ | ಎದಿಹೊತ್ತಿತು ತುರತಾ ||

ಈ ಬೆಳಕಿನಾಳ ಅದು ಎಸೆವ ಗಾಳ
ಮೈಸೆಳೆವ ಸೂಜಿಗಲ್ಲಾ
ಬೆನ್ನಿನ | ಹುರಿ ಬಿಗಿದವಲ್ಲಾ |
ತೊಡೆಯಲಿ | ಮಿಂಚು ಹರಿದವಲ್ಲಾ ||
ಅಂತರಂಗದಾ ಶಾಂತಸಾಗರ
ಕಲಕಿ ಹೋದವಲ್ಲಾ
ಹೊಸ ಧಗೆ | ಬಾಯಿ ಬಿಡುವುದಲ್ಲಾ ||

ಹೊಟ್ಟೆಯೊಳಗ ಹೊಸ ಲೋಕವಿಟ್ಟು ಹೊಳೆ -
ದೀರಿ ಕ್ಷಿತಿಜಧಾಂಗ
ಕೈ ಮಾಡಿ | ಕರೆಯತೀರಿ ನಮಗ |
ಜೀರ್ಣೀಸ | ಲಾರೆವಿಂಥ ಬೆರಗ ||
ಮುಳುಗಿ ಮುಳುಗಿ ನಾ ಏಳಬೇಕು ನಿಮ

ಬೆಳಕಿನಾಗ ಮೊದಲ
ಇಲ್ಲವೆ | ನುಂಗಬೇಕು ನಿಮಗ ||

ಹಾರಿ ಹಾರಿ ಹೌಹಾರಿ ಏರಿ
ಸರಿಮಿಂಚತಾವ ಸೊಡರ
ಸೊಡರಿನ | ಮ್ಯಾಲ ಹುಳದ ನದರ
ಅಡರುವ ಮುನ್ನವೆ ರೆಕ್ಕೆ ಸುಟ್ಟವೋ
ಹುಳಾ ಬಿತ್ತು ಕಳಚಿ
ಒಳಗಿನ | ದೀಪ ಬಂತು ಬೆಳಗಿ.

**(ನಾಟಕ)**

## ನೀರು ನೀರೇ ನೀರು

ನೀರನಳೆಯುವುದಕ್ಕೆ ನನ್ನಲ್ಲಿ
ಮಾನದಂಡಗಳಿಲ್ಲ.
ಅಳೆಯುವ ಪಾತ್ರೆಯ ಆಕಾರವಾಗುವ ನೀರು
ಬಿಟ್ಟರೆ ಹರಿದು, ಇಂಗಿದರೆ ಪಾತಾಳಗಂಗೆ -
ಒಣಗಿದರೆ - ಉಗಿಯಾಗಿ, ಹಾರಿ ಸ್ಪೇಸಾಗಿ,
ಸ್ಪೇಸು ಮಡುಗೊಂಡು ತೇಲಾಡುವ
ಮೋಡವಾಗಿ
ಹರಿವ ನದಿ ಹಾವನ್ನ ಹಾರೈಸುವ ಹದ್ದಾಗಿ.

ಜಡೆಯೇರಿದ ಗಂಗೆ
ತೊಡೆಯ ಮಡುವಾಗಿ
ಸುರಿದು ಸೂರ್ಯನಾರಾಯಣನ ವಿರ್ಯವಾಗಿ
ಹಾಡಿ ಹಸಿರಾಗಿ
ಮಿಡಿವ ಕಣ್ಣೀರಾಗಿ
ನಾನಾಗಿ ನೀನಾಗಿ
ಎರಡೊಂದಾಗಿ
ಹಲವಾಗಿ ಅಂದರೆ -

ಅದೇ ಹೇಳಿದೆನಲ್ಲ,
ನೀರನಳೆಯುವುದಕ್ಕೆ ನನ್ನಲ್ಲಿ ಮಾನ
ದಂಡಗಳಿಲ್ಲ.
ಪಾತ್ರೆಯೂ ಇಲ್ಲ.

## ಸಂಗಮ ದೇವರು

ಯಾರೋ ಯಾರೋ ಮೈಬಂಗಾರದ ಜಂಗಮರಿವರ್ಯಾರೋ
ಸೈ ನನ ಸದ್ಗುರು ಸಂಗಮ ದೇವರು ಬಾ ಶಿವನೇ ಬಾರೋ!

ಗಾಳಿ ಬಿಸಿಲು ಮಳೆ ನೆರಳಿನ ಜೊತೆ ಕೈಕೂಡಿಸಿ ನಡೆದವರು
ಹಸಿಯ ಮಣ್ಣು ಹುಸಿಯಲ್ಲವೆಂದು ಹಸಿರಿಗೆ ಖುಶಿಯಾದವರು
ಆದರು ಹೂವೂ ಹಸಿರೂ ಕಣ್ಣಿನ ಕೊಡುಗೆಗಳೆಂದವರು
ಇರುವು - ತೋರಿಕೆಯ ಮಧ್ಯೆ ಇರುವ ನಿಜವರಿಯಲು ಹೋದವರು ||

ಅಧೋಲೋಕಗಳ ಕದಾ ತೆರೆದು ಕರಿರಾತ್ರಿಯ ಕರೆದವರು
ಎದುರು ಬದುರಿನಲಿ ಕುಳಿತು ಕತ್ತಲೆಯ ಗುಟ್ಟ ನುಡಿಸಿದವರು.
ಕಪ್ಪು ಗುಟ್ಟುಗಳ ಹೆಪ್ಪು ಹಾಕಿ ಕಡೆಕಡೆದು ನೋಡಿದವರು
ತೇಲಿಬಂದ ಬಿಳಿಕುದುರೆಯೇರಿ ಆಕಾಶಕೆ ನೆಗೆದವರು ||

ಹದ್ದಿನ ಕಣ್ಣಿನ ಸರಹದ್ದಿನ ಸಾಮ್ರಾಜ್ಯವಾಳಿದವರು
ಸೊನ್ನೆಯ ಸೂರ್ಯನ ಕರಗಿಸಿ ನೆತ್ತಿಯ ಕಣ್ಣಲಿ ಕುಡಿದವರು
ನಂಬಿದ ಮಣ್ಣಿನ ನೆನಪಾದರೆ ಹೊಂಬೆಳಗುತ ಇಳಿದವರು
ಸರಳ ಸತ್ಯಗಳ ಪ್ರತಿಮೆ ಉಪಮೆಗಳ ಉಡಿಯಲಿ ತಂದವರು ||

ನಾವೊ ಪ್ರತಿಮೆಗಳ ಅರಿಯದೆ ಕೋಶದ ಶಬ್ದಗಳೆಂದವರು
ಪಶುವಿನ ಮಾಂಸವ ಹಾಡಿ ಹೊಗಳಿ ವೈಭವಿಸುವ ಲೌಕಿಕರು
ನಮಗೆ ಉಂಟು ರಕ್ಕಸರು ನಮ್ಮ ಜತೆ ಕೂಡಿ ಬದುಕಲಿಕ್ಕೆ
ನಮ್ಮ ಭವಿಷ್ಯಕೆ ಕಾದಿರುವರು ಬಿಡಿ; ಅದೇ ಬೇರೆಯ ಕಥೆ ||

## ಕರಿ ಹೈದ

೧
ಮೊದಮೊದಲು ಹೀಗಿರಲಿಲ್ಲ ಈ ಕರಿಹೈದ
ತುಂಬ ಸಂಕೋಚದವ. ನೋಡಿದರೆ ಬಾಡಿ
ಮೂಲೆಯಲ್ಲಿ ಮುದುಡುತ್ತಿದ್ದ. ಮಾತಿಗೊಮ್ಮೆ
ತಪ್ಪಿತಸ್ಥರ ಹಾಗೆ ಹಸ್ತ ಹೊಸೆಯುತ್ತಿದ್ದ.

ಯಾರೋ ನೆಂಟರ ಪೈಕಿ;
ಕೈತುಂಬ ಕೆಲಸದ, ತಲೆತುಂಬ ಯೋಚನೆಯ ನನಗೆ
ಇನ್ನಿವನ ಹೆಸರು ಕೇಳೋದಕ್ಕೆ ಸಮಯವೆಲ್ಲಿ?
ಮನೆಗೆಲಸ ಮಾಡಿಕೊಂಡಿರಲಿ ಎಂದೆ. ವರ
ಪಡೆದಂತೆ ಖುಷಿಗೊಂಡ ಹೈದನ ಕಣ್ಣಿನ ಬಲ್ಬು
ಫಕ್ಕನೆ ಹೊತ್ತಿ ಕರಿಬೆಳಕು ಮನೆತುಂಬಾಡಿದಾಗ
ಗಾಬರಿಯಾಗಿ ನನ್ನ ಇಡಿಮೈ ನಡುಗಿದ್ದು ನಿಜ.
ಕೆಲವರ ಕಣ್ಣು ಹೀಗೂ ಇರಬಹುದಲ್ಲ!

ಆಮೇಲೂ ಅಷ್ಟೆ; ಒಂದು ತಕರಾರಿಲ್ಲ. ಅನಗತ್ಯ
ಮಾತಿಲ್ಲ. ಎಷ್ಟೆಂದರಷ್ಟೆ; ಲೆಖ್ಖ ಹಾಕಿದ ಹಾಗೆ.
ಹೊಸಬರ್ಯಾರಾದರೂ ಮನೆಗೆ ಬಂದರೆ ಮೈಮ್ಯಾಲೆ ಬಿದ್ದು
ಪರಿಚಯಿಸಿಕೊಳ್ಳೋದಿಲ್ಲ, ಹಲ್ಲುಗಿಂಜೋದಿಲ್ಲ.

ಬಂದವರು ಹೋದ ಮ್ಯಾಲಾದರೂ ಅಯ್ಯಾ
ಅವರ್ಯಾರೆಂದು, ಕುಲಗೋತ್ರ ಏನೆಂದು
ಕೇಳಿದವನಲ್ಲ. ಬಂದವರು ಬಂದೇ ಇರಲಿಲ್ಲ
ವೆಂಬಂತೆ ನಿರುಮ್ಮಳಾಗಿ ಮುಂಚಿನ ಕೆಲಸ
ಮುಂದುವರಿಸುತ್ತಿದ್ದ.

೧

ನಾನವನ ಸಮ ನೋಡಿರಲಿಲ್ಲ, ಇಲ್ಲೀತನಕ.
ಕಣ್ಣಿಗೆ ಚಾಳೀಸು ಬಂದಾದ ಮೇಲೆ ನೋಡುತ್ತೇನೆ:
ನೆರಳು ಇಲ್ಲವೆ ಕತ್ತಲೆ ಹೆಪ್ಪುಗಟ್ಟಿದಂಥ ಕರಿಮೈ
ಕೊಬ್ಬಿ ಕಟುಕನ ಹಾಗೆ ಬೆಳೆದಿದ್ದಾನೆ!
ಹದಿಹರೆಯದಲ್ಲಿ ಅದೊಂದು ಥರ -
ಕಾಲಡಿ ಮುದುಡಿ ಕಾಣದ ಹಾಗೆ ಅವಿತಿದ್ದ ನೆರಳು
ಈಗ ಸಂಜೆಯ ಹೊತ್ತು ಇದ್ದಕಿದ್ದಂತೆ ಉದ್ದೋ ಉದ್ದ
ಎದುರಿಗೆದ್ದರೆ ಹ್ಯಾಗೋ ಹಾಗೆ!
ಗಾಬರಿಯಾದೆನೆ?

ಈಗೀಗಂತು ಆತನ ಸಲಿಗೆ ಇದ್ದದ್ದೂ ಜಾಸ್ತಿ.
ಭಾರಿ ಪರಿಚಿತರಂತೆ ಹೇಳಕೇಳದೆ ಎಲ್ಲೆಂದರಲ್ಲಿ
ಮನೆತುಂಬ ಅಲೆದಾಡುತ್ತಾನೆ. ಎಳೆತನದ ಕಿಲಾಡಿತನಗಳ
ಹೇಳಿ ನಗಾಡುತ್ತಾನೆ. ಬೆಡ್ ರೂಮಿಗೂ ನುಗ್ಗಿ ಈ ನಡುವಿನ
ಬೆತ್ತಲೆ ಮಜಗಳನ್ನ ಭುಜ ಕುಣಿಸಿ ಹೇಳುತ್ತಾನೆ.
ಹೊರಬೀಳೊ ಎಂದರೆ ಹಲ್ಲು ಕಿರಿದು ಹೆದರಿಸುತ್ತಾನೆ!

ಮೊನ್ನೆ, ರಾತ್ರಿ ಅಚಾನಕ ಎಚ್ಚತ್ತು ನೋಡಿದರೆ ನನ್ನ ದಿಂಬಿನ ಬಳಿ ಕೂತು
ಲೆಕ್ಕ ಬರೆಯುತ್ತಿದ್ದ. ಹೆದರಿ ಹೆಂಡತಿಯನ್ನೆಬ್ಬಿಸಿದರೆ
ಪೆನ್ನು ಕಾಗದ ಚೆಲ್ಲಿ ಕಣ್ಣ ರೆಪ್ಪೆಗಳನ್ನ ಕೋನವಾಗಿಸಿದ.
ಕೋಪದಲ್ಲಿ ಕುದಿದು ದಪ್ಪ ತುಟಿ ಬಿರುಕಿಂದ
ಮುಕ್ಕುಳಿಸಿ ಉಗುಳಿದ ಹಾಗೆ ದ್ರೋಹಿ ಎಂದ.
ಸಾಲ ವಸೂಲಿಗಿದು ಕಾಲವಲ್ಲವೆಂಬಂತೆ
ಬಿರಬಿರನೆ ಹೊರಗಡೆ ಹೋದ!
ಬೆಳಿಗ್ಗೆ ಇದು ಸರಿಯಲ್ಲವೆಂದು ಹೇಳಬೇಕೆಂದಾಗ
ಯಾಕೆಂದು ಗೊತ್ತಿಲ್ಲ, ನನ್ನ ಬಾಯಿಂದ ಮಾತೇ
ಬರಲಿಲ್ಲ. ಸೋಲುತ್ತಿರುವೆನೆ?

೩

ಸೋತೆನೆ?

ನಿನ್ನೆ ಯಾರಿಲ್ಲದಾಗ ಅವ ಬಂದು, ಎದುರಿಗೆ ನಿಂತು,
ಪಿಳುಕಿಸದ ಕಣ್ಣ ಕರಿಬೆಳಕಿನ ಶಲಾಕೆಗಳನ್ನ
ಎದೆಗೆಸೆದು, ನೆತ್ತಿಯ ಮೇಲೆ ಕಾಲಿಡಬಂದ
ಜಂಗಮನಂತೆ ಚಡಪಡಿಸಿದಾಗ -
ನನ್ನೊಳಗವಿತಿದ್ದ ಅವಕಾಶ, ಬುದಿಂಗನೆ ಎದ್ದು
ಹೊರಗಿನಾಕಾಶದ ಜೊತೆ ಮಾತಾಡಲು ಬಾಯ್ದೆರೆದದ್ದೇ
ತಡ, ಗಾಬರಿಯಾಗಿ ನಡುಗಿ ಓಡೋಡಿ
ದೇವರ ಕೋಣೆಗೆ ನುಗ್ಗಿ ಬಾಗಿಲಿಕ್ಕಿಕೊಂಡೆ.
ಗಡಿಬಡಿಸಿ ಕತ್ತಲೆಯಲ್ಲಿ ಇದ್ದಬಿದ್ದ ದೇವರ
ವಿಗ್ರಹಗಳನ್ನ ಚಕಮಕಿ ತಿಕ್ಕಿದೆ.
ಚೆನ್ನದ ಕಿಡಿ ಸಿಡಿಯಲೇ ಇಲ್ಲ!

## ಅಗಲಿ ಇರಲಾರೆನೋ ನಿನ್ನನ್ನಾ

ಅಗಲಿ ಇರಲಾರನೋ
ಮರೆತು ಇರಲಾರೆನೋ ನಿನ್ನನ್ನಾ ||
ಒಲಿದವನೆ ನಲಿದವನೆ
ಹೃದಯವನೆ ಗೆಲಿದವನೆ
ಘಾಸಿಯಾಗುವೆನೊ ನಾನಾ | ಮದನಾ
ಮರೆತಿರಲಾರೆ ನಿನ್ನಾ ||

ಸ್ಮರನ ಹೂವಿನ ಬಾಣ
ಹೊಕ್ಕಾವೊ ಹೃದಯವನಾ
ಅಬಲೆ ನಾ ಮಾಡಲೇನಾ?
ತರುಣಿಯ ವಿರಹವ
ಮರೆಯಬೇಡೆಲೊ ಚೆಲುವ
ಶರಣಾಗಿ ಬಂದೆನೋ ನಾ
ಹೂವಿನ ಹಾಸಿಗೆ | ಸುಡುಸುಡುವ ಬೇಸಿಗೆ
ಘಾಸಿಯಾಗುವೆನೊ ನಾನಾ | ಮದನಾ
ಮರೆತಿರಲಾರೆ ನಿನ್ನಾ ||

ಸಂಗಡಿಸಿದಾಗೊಮ್ಮೆ
ವಿಂಗಡವ ನುಡಿಯುವಿರಿ
ಪಂಗಡವೆ ಮನದೊಳಗೆ?
ಏನೆ ಹೇಳಿದರೂನು

ಕಣ್ಣ ಕುಡುಗೋಲನ್ನು
ಇರಿಯುವಿರಿ ಒಡಲೊಳಗೆ
ನಂಬಿ ಬಂದೆನೊ ಸ್ವಾಮಿ | ನಾಚಿಕೆಗೊಳಿಸಿದರೆ
ಫಾಸಿಯಾಗುವೆನೊ ನಾನಾ | ಮದನಾ
ಮರೆತಿರಲಾರೆ ನಿನ್ನಾ ||

ಮ್ಯಾಲೆ ಸೂರ್ಯನು ಉಂಟು
ನೀಲಿಯೇರಿದೆ ಬಾನು
ಹುಚ್ಚು ಆಡರಿದೆ ಕಾಡಿಗೆ
ಹಕ್ಕಿ ಹಾರ್ಯಾಡ್ಯಾವು
ಹಾಡುತ ಏನಂತ
ನಾವು ಹಂಗಿಗರೊ ಮೈಗೆ
ಒಡಲಿನ ಕೊಡುಕೊಳೆ | ಮರೆತು ಕುಂತಿರಿ ಸ್ವಾಮಿ
ಫಾಸಿಯಾಗುವೆನೊ ನಾನಾ | ಮದನಾ
ಮರೆತಿರಲಾರೆ ನಿನ್ನಾ ||

**(ಸಾಂಬಶಿವ ಪ್ರಹಸನ)**

## ಜೋ ಜೋ ನಾಗರರಾಯಗೆ

೧
ಕಾಳಿಂಗನಂಬೋದು ನಾಗರಹಾವು
ಏಳೇಳು ಹೆಡೆಯವನಿಗೆ
ಸೂರ್ಯನ ಮರಿಯಂಥ ಏಳೇಳು ಮಣಿಗಳು
ಏಳೇಳು ಹಡೆಯೊಳಗೆ

ಬಾಲವಾಡಿಸುತಾನೆ ಹೆಡೆಯ ತೂಗಾಡುತ್ತ
ಬಾಲೆಯರ ಕಂಡಾಗಳೆ
ಎಣ್ಣೆ ಹಚ್ಚಿದ ಸಣ್ಣ ಹೆಣ್ಣೀನ ಮುಡಿಯೆಂದ
ರಾನಂದ ಕಾಳಿಂಗಗೆ

ಹೆಣ್ಣೀನ ಜಡೆಯೊಳಗೆ ಮೈಯ ಹೆಣೆದಾಡುತ
ಜಡೆಯಾಗಿ ಜೋತಾಡುತ
ಮಲ್ಲಿಗೆ ಮುಡಿದರೆ ಮೈಮರೆವ ತೂಕಡಿಕೆ
ಸುಖನಿದ್ದೆ ನಮ ಹಾವಿಗೆ |
ಜೋ ಜೋ ನಾಗರರಾಯಗೆ ||

೨

ನೆರಳ ಕಂಡರೆ ನಾಗ ಭಾರೀ ಭುಸುಗುಡುತಿದ್ದ
ಹೆಡೆಯಿಂದ ಹೊಡೆದಾಡುತ
ಸುತ್ತುಮಣಿಗಳ ಚೆಲ್ಲಿ ನೆರಳನೋಡಿಸುತಿದ್ದ
ಸೀಳು ನಾಲಿಗೆ ಚಾಚುತ

ಒಮ್ಮೆ ನಮ ಕಾಳಿಂಗ ಎಳೆಬಿಸಿಲು ಕಾಯಿಸುತ
ಮೈಚಾಚಿ ಮಲಗಿರಲು
ಗಿರಿಯಂಥ ಗರುಡನ ನೆರಳು ಹರಿದಾಡುತ್ತ
ನಾಗನ ಮೈ ತಾಗಲು

ಕೋಪದಲಿ ಕುದಿಯುತ್ತ ಕಣ್ಣಲ್ಲಿ ಕಿಡಿಕಾರಿ
ಹೆಡೆಗಳ ನಿಗುರಿಸಿದ
ನಿಗುರಿದ ಹೆಡೆಯಿಂದ ನೆರಳು ಬಿದ್ದಲ್ಲೆಲ್ಲ
ಸಿಡಿಲಾಗಿ ಅಪ್ಪಳಿಸಿದ

ಅಪ್ಪಳಿಸಿ ಹೆಡೆಯಿಂದ ಹಸಿಯ ನೆತ್ತರು ಚಿಮ್ಮಿ
ಹೆಡೆ ಸೊರಗಿ ಇಂಗಿದವೆ!
ಕಣ್ಣಿದ್ದಿಲಾದವು ಮೈಸಿಂಬೆಯಾದವು
ಜೋತು ಬಿದ್ದವು ನಾಲಗೆ |
ಜೋ ಜೋ ನಾಗರರಾಯಗೆ ||

ಹೂವಿಂದ ಮುಚ್ಚೇರೆ ಕನಸಿಂದ ಮುಚ್ಚೇರೆ
ಜೋ ಜೋ ನಾಗರರಾಯಗೆ
ಹವ್ವಲ್ಲೆ ಎಲೆ ಹದ್ದೆ ಹಾರಿ ಮುಂದಕೆ ಹೋಗು
ನನ ಕಂದ ಮಲಗಿರುವನೇ |
ಜೋ ಜೋ ನಾಗರರಾಯಗೆ ||

**(ಸಿರಿಸಂಪಿಗೆ)**

## ಮಂದಾರ ಮರ

ಅದ್ಯಾಕಪ್ಪ ಇಂತಪ್ಪ ದುಃಖ ಭೂಲೋಕದೊಳಗೆ? ಅಂದರೆ -
ಹರಿದಾಸರು ಹೇಳುವ ಪುರಾಣ ಕಥೆಯೇ ಬೇರೆ; ಅದೆಂತೆಂದರೆ:

ಶಿವದೇವರ ಕತ್ತಿನ ವಿಷ ಕೊಳೆತು ಹುಣ್ಣಾಯಿತಂತೆ.
ಹುಣ್ಣಿನ ನೋವನ್ನು ಸರಿಕರಿಗೆ ಅರುಹದೆ ಒಳಗೊಳಗೇ ಅನುಭವಿಸುತ್ತ
ಸಾಯಲಾರೆ ಶಿವನೆ ಬದುಕಲಾರೆ ಅಂತ ಚಡಪಡಿಸುತ್ತ
ಶಿವರಾತ್ರಿಯ ಸಮಯ ಸಂದರ್ಭಗಳ ಸಮನೋಡಿ
ಅಕ್ಕಪಕ್ಕ ಯಾರಿಲ್ಲದಿರಲು, ನಮ್ಮ ಶಿವದೇವರು
ಪಳಕ್ಕನೆ ಹುಣ್ಣುಕಳಚಿ ಕೆಳಕ್ಕೆಸೆದು
ಅಪರಾಧವೆನಗಿಲ್ಲ ಎಂದು ಗೀತಮಂ ಪಾಡುತ್ತ
ಕೈಲಾಸದಲ್ಲಿ ಸುಖವಿರ್ದರು

ಸದರಿ ಹುಣ್ಣು ಮಣ್ಣಾಗಿ, ಮಣ್ಣಿನ ಉಂಡೆ ಭೂಲೋಕವಾಯಿತಯ್ಯಾ!
ಹುಣ್ಣೊಳಗಿನ ಸಣ್ಣಹುಳು ಜೀವರಾಶಿಗಳಾಗಿ,
ಬುದ್ಧಿಬೆಳೆದು ಮಾನವರಾಗಿ
ತಿನ್ನುವುದಕ್ಕೆ ಶಿವನ ಕತ್ತು ಎಲ್ಲಿದೆಯೆಂದು ಪರದಾಡತೊಡಗಿದರಯ್ಯಾ.

ಇಂತಿವರ ಹಸಿವು ಹಂಬಲವಾಗಿ
ಹಂಬಲವೆ ಮಂದಾರ ಮರವಾಗಿ
ಆಕಾಶದ ಸ್ಪೇಶಿನಾಚೆಯ ಕೈಲಾಸಕ್ಕೂ ಬೆಳೆದ ಮರ
ಭೂ - ಕೈಲಾಸಗಳನ್ನು ಏಕ ಮಾಡುವ ಏಕೈಕ ಮರ
ಅಲ್ಲಿ ಕೈಲಾಸದಲ್ಲಿ ಘಮಘಮಘಮ ಹೂ ಬಿಟ್ಟಿತಯ್ಯಾ.

ಶಿವದೇವರು ಬೀಸಿದ ಪರಿಮಳದ ಪವನಗಳ ಮೂಸಿ
"ಏನಿದು ಮಣ್ಣಿನ ವಾಸನೆ?
ಕೊಳೆತ ಗಾಯದ ಮೇಲೆ ಸುರಿದ ಮದ್ದಿನ ವಾಸನೆ;
ನನಗಿಷ್ಟವಿಲ್ಲ" ವೆಂದು ನಿಸ್ಸಂಶಯ ಹೇಳಿಬಿಟ್ಟರೇ!

ಏನು ಹಾಗೆಂದರೆ? ದೇವರಿಗೆ ದೇವರ ಜವಾಬ್ದಾರಿ
ಬೇಡವೆ? ಮಂದಾರ ಮರ ಮಣ್ಣಲ್ಲಿ ಬೆಳೆದದ್ದು
ನಿಜ, ಮಣ್ಣಿನ ಮೂಲದ ಹುಣ್ಣಿನ ವಾಸನೆ ಹೂಗಳಿಗೆ
ಬಂದರೆ ಅದೂ ಸಹಜ, ಮೂಸುವಾತ ದೇವನಾದರೂ.

ಮಂದಿನ ಕತೆ ಕೇಳಿರಿ:
ಮಂದಾರ ಹೂವು ಕಾಯಾಗಿ ಹಣ್ಣಾಯಿತಂತೆ.
ಒಂದು ದಿನ ಪಾರ್ವತಿ ಲೀಲೆಯಲಿ ಮೈಮರೆತು
ಮಂದಾರ ಹಣ್ಣು ಹರಿದು ತಿಂದರೆ ಶಿವದೇವರು
ಹಣ್ಣು ತಿಂದೆಯೋ ಮಣ್ಣು ತಿಂದೆಯೋ ಅಂತ -
ಕೈ ತಟ್ಟಿ ಪಕಪಕ ನಗೋದೇ!

ಪಾರ್ವತಿಯ ಮೈಯಲ್ಲಿ ಭೂಲೋಕದ ಮಣ್ಣು!
ದೇವರದ್ದೇ ಬೇರೆ ಬಿಡಿ; ಮೈಯ ಮಣ್ಣಲ್ಲಿ
ಮೂರ್ತಿಯ ಮಾಡಿ ಆಟವಾಡುವ ರೀತಿ.
ಇಲ್ಲಿ ನಮ್ಮ ಗತಿ?

ಮುಂದಿನ ಕತೆ ಎಂತಿಪ್ಪುದು ಕೇಳಿರಯ್ಯಾ:
ಪಾರ್ವತಿ ಹಣ್ಣು ತಿಂದದ್ದೇ
ದೇವಲೋಕಕ್ಕೂ ಬಂತು ಹಸಿವಿನ ಬಾಧೆ.
ಈಗ ತಗೊಳ್ಳಿ - ಭೂಮಿಯ ಮೇಲೆ ಬೆಳೆದದ್ದಕ್ಕೆಲ್ಲ
ಆಕಾಶವೇ ಗುರಿ;
ಕೈಲಾಸದ ಕಡಗೇ ಮುಖ.
ನಮಗೆ ಗಾಳಿಯಿದ್ದ ಹಾಗೆ ಅವರಿಗೆ ನಮ್ಮ
ಭಯ ಭಕ್ತಿಯ ಧಗೆ. ಹೆಚ್ಚೇನು, ನಮ್ಮ ಯಾಗದ ಹೊಗೆ
ಹೋಗೋತನಕ ದೇವಲೋಕ ನಿರ್ಗತಿಕ. ಇಷ್ಟಾಗಿ
ಕೃಪೆದೋರುವ ನಾಟಕದ ಬಗೆ ಬೇರೆ. ಹ್ಯಾಗಿದೆ ನೋಡಿ!

ಈಗಲೂ ಶಿವದೇವರು, ಶಿವರಾತ್ರಿಯ ಸಮಯ,
ಅಂದರೆ ಮಾನವರಿಗೆ ಮೂಲಹುಣ್ಣಿನ ನೆನಪಾಗುವ ದಿನ
ಅಕ್ಕಪಕ್ಕ ಸರಿಕ ದೇವತೆಗಳಿಲ್ಲದಾಗ ಕೆಳಗಿಣಿಕಿ
ನೋಡುವರಂತೆ.

ಮಾನವರ ಹಾಹಾಕಾರ ಕೇಳಿ ಮಮ್ಮಲ ಮರುಗಿ
ಮಂದಾರದ ತುಂಬ ಹೂಕಾಯಿ ಹಣ್ಣ ಬಿಡಿಸಿ
ಮನರಂಜನೆ ನೀಡುವರಂತೆ ಉಚಿತ.

ಅಥವಾ ಹೀಗೂ ಇರಬಹುದು:
ಮಂದಾರಮರ ಏರಿ ಯಾರೂ ಬಾರದ ಹಾಗೆ
ಬಿಗಿದ ಬೇಲಿ ಬಿಡಿಸಿದ ಎಲೆ ಹೂ ಕಾಯಿ,

ಶಿವರಾತ್ರಿಯ ಈ ಫಜೀತಿ,
ಈ ಕಥೆಯ ನೀತಿ.

# ನವಿಲೇ ನವಿಲೇ

ನವಿಲೇ ನವಿಲೇ ಚೆಂದೊಳ್ಳೆ ನವಿಲೇ
ನಾದಗಳು ನುಡಿಯಾಗಲೇ!
ಹಾಡಾದ ನುಡಿಯೊಳಗೆ ಬೆಳಕಾಡಿ ಹಾಡಿನ
ಆಚೆ ಸೀಮೆಯ ತೋರಲೇ ||ಪ|

ಶಿವದೇವನಾಯ್ಕರು ಶಿವಪೂರಕೊಡೆಯರು
ವಾರಿಗೆಯ ಮಡದಿ ಮಾದೇವಿ |
ಬಳ್ಳಿಯಂಥವಳಲ್ಲಿ ಸರುವ ಸದ್ಗುಣಗಳು
ಅರಳಿವೆ ಚಂದ ಹೂವಾಗಿ|
ಸತಿಪತಿಯರ ಪ್ರೀತಿ ಹಿತವಾದರೂ ಶಿವಗೆ
ನೀರಿಲ್ಲ ಶಿವಪೂರಿಗೆ ||೧||

ಮಳೆಗಾಲ ಬಂದರೂ ಮಳೆಯಿಲ್ಲ ಶಿವಪುರಿಗೆ
ತೊಟ್ಟು ನೀರಿಲ್ಲ ಕುಡಿವುದಕೆ |
ಮಳೆ ಬರ್ರೈ ಶಿವಲಿಂಗ ಸಾವಳಗಿ ಮಠತನಕ
ಒದ್ದೆಯಲಿ ಕೈಮುಗಿದು ಬರುವೆ |
ಸಿಹಿನೀರ ತರುವುದಕೆ ಮಾದೇವಿ ಹೊರಟಾಳು
ದೂರ ಬೆಂಗಾಡಿನ ಕೆರೆಗೆ ||೨||

ಕಾಡಿನಂಗಳದಲ್ಲಿ ಕನ್ಯೆ ಕಾಲಿಟ್ಟಾಗ
ಸಣ್ಣಾನ ದನಿದೋರಿದಾವ |
ದನಿಯಿಲ್ಲದಲ್ಲಿಂದ ದನಿ ಹೆಂಗ ಬಂದಾವು?
ಹೊನ್ನೆಮರ ಕತ್ತೆತ್ತಿದಾವ |
ಹೊನ್ನೀಯ ಮರದಾಗ ಬಣ್ಣ ಬಣ್ಣದ ಹಕ್ಕಿ
ಅವ್ ನೋಡ ನವಿಲು ನಿಂತಾವ ||೩||

ಹವ್ವಲ್ಲೆ ಅಂದಾಗ ನವಿಲು ನಲಿದಾಡಿತ್ತು
ಮುಚ್ಚು ಮರೆಗಳನೆಲ್ಲ ಬಿಚ್ಚಿ |
ನೆತ್ತಿಯ ಮ್ಯಾಗಿನ ತೂಗೊತುರಾಯಿಂದ
ಮುಗಿಲಿನ ಸೀಮೆಯ ಚುಚ್ಚಿ |
ಹೆಂಗೆಂಗ ನೋಡಿದರ ಹಾಂಗಾಂಗ ನಲಿದಾವ
ಎಲ್ಲಿ ನೋಡಿದರಲ್ಲಿ ಅರಳಿ ||೪||

ಕಲ್ಲಾದ ಬೆರಗಿನ ಕಣ್ಣಿಗಿಳಿದವು ಜೀವ
ಉಕ್ಕಿದವು ಮೂಕಾದ ಭಾವ |

ನಗಿಯೆಂಬ ಮಲ್ಲಿಗೆ ಸುರಿದಾಳು ಮಾದೇವಿ
ಬೆಳಸ್ಯಾಳು ಪದುಮದ ಪಾದಾ |
ವಾರಿಗೆ ರಾಯರು ಕಾದಿರಬಹುದೆಂದು
ಅರಮನೆಗೆ ಬಂದಾಳು ಸೀದಾ ||೫||

"ಎಂದಿರದ ಮಾದೇವಿ ಇಂದ್ಯಾಕೆ ತಡಮಾಡಿ
ಬರಿಯ ಬಿಂದಿಗೆಯ ತಂದೆ?"
"ಹಾ ನನ್ನ ದೊರೆ ಕಂಡೆ ಬಣ್ಣದ ನವಿಲೊಂದ
ಕಣ್ಣು ಹಬ್ಬಾದವು ಸಿರಿಗೆ ||
ಹಗಲುಗನಸುಗಳಲ್ಲಿ ಹಣ್ಣಾದ ಕೆರೆಯಲಿ
ಸೆರೆಮುಕ್ಕ ನೀರಿಲ್ಲ ದೊರೆಯೆ" ||೬||

* * *

"ಅತ್ಯಂತ ಉತ್ತಮಳೆ ಇಂದ್ಯಾಕ ತಡಮಾಡಿ
ಬರಿಯ ಬಿಂದಿಗೆಯ ತಂದೆ?"
"ಹರುಷವಾಯಿತು ಸ್ವಾಮಿ ನವಿಲ ಸರಸವ ನೋಡಿ
ಈ ದಿನವು ಬಂತೆಮ್ಮ ಬಳಿಗೆ |
ಕಳ್ಳ ಹೆಜ್ಜೆಯನಿಡುತ ಬಳಿಯೆ ಸುಳಿದಾಡಿದರೆ
ನೀರ ಸುಳಿ ಸಿಗಲಿಲ್ಲ ಖುಶಿಗೆ" ||೭||

* * *

"ಭಾಗ್ಯ ಪಡೆದವರಂತೆ ಹಿಗ್ಗಿರುವಿ ಮಾದೇವಿ
ಇಂದ್ಯಾಕೆ ಬರಿಗೈಲಿ ಬಂದೆ?
ಮೈ ಒದ್ದೆಯಾಗಿರುವಿ - ಏನು ಕಾರಣ ಹೇಳು - "
"ಮುಚ್ಚುಮರೆ ಏನಿಲ್ಲ ದೊರೆಯೆ |
ಈ ದಿನವು ಬಂದಿತ್ತು ಚೆಲುವ ಚನ್ನಿಗ ನವಿಲು
ನೀಲಿ ನಿಧಿ ಎದ್ದು ಬಂದಂತೆ ||೮||

'ಹೊಸಪರಿಯ ಆನಂದ ಕರುಣಿಸುವ ಸಿರಿನವಿಲೆ
ಮಳೆಯಿಲ್ಲ ಶಿವಪೂರಿಗೆ |
ಹೊರಗಾಗಿ ನಾರುವೆನು ಮೀಯಲಾರದೆ ನವಿಲೆ
ಕರುಳಿಲ್ಲ ಶಿವರಾಯಗೆ |
ಏನಾದರೂ ಮಾಡಿ ನೀನಾರೆ ಮಳೆ ತಾರೊ
ಸೂರ್ಯನ ಥರ ಹೊಳೆವ ನವಿಲೇ' ||೯||

ಮನದಿಚ್ಛೆಗಳ ಬಿಚ್ಚಿ ಹೇಳಿದರೆ ನಕ್ಕಿ‌ತು
ಆಕಾಶ ನೀಲಿಯ ನವಿಲು |
ಶಿವದೇವರಾಯನ ಕೆದರೀದ ಜಡೆಯಂತೆ
ನೆತ್ತೀ ತೂರಾಯಿ ನಿಮಿರಿದವು |
ಸೊಕ್ಕುಗಳು ಉಕ್ಕಿದವು ಗರಿಗೊಂಡು ಹರಡಿದವು
ಮೈತುಂಬ ಅರಳ್ಯಾವು ಕಣ್ಣು ||೧೦||

ಕಾಡೆದ್ದು ಕುಣಿದಂತೆ ಹೆಜ್ಜೆ ಹಾಕಿತು ನವಿಲು
ದಿಕ್ಕು ಬಿರಿಯುವ ಕೇಕೆ ಹಾಕಿ |
ಅಂಬರದ ತುಂಬೆಲ್ಲ ತುಂಬ್ಯಾವ ದನಿ ನವಿಲ
ರಂಭೇರ ಕೊಡಗಳು ತುಳಕಿ |
ಬೆದರಿದ್ದ ಮುಗಿಲಿನ ಮದ್ದಾನಿ ಹಿಂಡುಗಳು
ಸುರಿದಾವು ಮದಜಲ ಸೊಂಡೀಲಿ ||೧೧||

ಹೆಂಗ ಕುಣಿದರ ನವಿಲು ಹಾಂಗ ಮಳಿ ಸುರಿದಾವು
ಚಿಕ್ಕೀಯ ಬಲೆಯ ಹೆಣೆಧಾಂಗ |
ಸೂರ್ಯನಾರಾಯಣನ ವೀರ್ಯ ಸುರಿದಾವೇನ
ಶ್ರಾವಣದ ಸರುವು ಜಡಿಧಾಂಗ |
ಅಂತರಾಳದ ಒಳಗ ಅಲಕಾವತಿಯ ತೆರೆದು
ಜೀವರಸ ಭರ್ತಿ ಸುರಿಧಾಂಗ ||೧೨||

ಮಳೆಸುರಿದ ಜೋರಿಗೆ ಸೀಮೆ ಸರಿದವು ಸ್ವಾಮಿ
ಒಡೆದು ಚೂರಾದವು ಪಾತ್ರೆ |
ಹರಕೆ ಪೂರೈಕೆಗೆ ಹೋಗಿ ಬರುವೆನು ದೊರೆಯ
ಸ್ವಾಮಿಯ ಮಠಕ್ಕೆ ಒದ್ದೆಯಲೆ” |
ಹೀಗೆ ಹೇಳಿದ ಗರತಿ ಹಾಗೆ ಹೋದಳು ಮಠಕ್ಕೆ
ಕತ್ತಲಿಳಿಯಿತು ಪತಿಯ ಕಣ್ಗೆ ||೧೩||

* * *

ನೀರಿಲ್ಲದಲ್ಲೆಲ್ಲ ನೀರ್ಯಾಕೆ ನಿಂತಾವು
ಹೆಚ್ಚೀನ ಪತಿವರತಿ ಮಿಂದ ನೀರು |
ಮಾದೇವಿ ಮಿಂದಂಥ ನೀರುಗಳು ಹರಿದಾಡಿ
ಹಸಿರು ವಾಲಾಡಿ ಬೆಳೆದಾವು ||೧೪||

ಕೆಸರಿಲ್ಲದಲ್ಲೆಲ್ಲ ಕೆಸರ್ಯಾಕೆ ನಿಂತಾವು
ತಾವರೆಯ ಮುಖದವಳು ಮಿಂದ ನೀರು |

ಮಾದೇವಿ ಮಿಂದಂಥ ನೀರುಗಳು ಹರಿದಾಡಿ
ತಾವು ತಾವಿನ ಹೂವು ಅರಳಿದಾವು ||೧೫||

ಅಡಿಗಡಿಗೆ ಭಾವಗಳು ಆಡರ್ಯಾವು ಮಡದೀಗೆ
ಮನೆಗೆ ಬರುವಾಗ ಒದ್ದೆಯಲೆ |
ಚಂದಿರ ನಂದ್ಯಾವು ತಾರೆಗಳು ಆರಿದವು
ಇದ್ದಿಲು ಬಿದ್ದಾವು ಮ್ಯಾಲೆ ||೧೬||

ಶಿವದೇವನಾಯ್ಕರು ಮಡದಿಯ ಕರೆದಾರು
"ಒದ್ದೆಯ ತೆಗೆಯೆ ಮಾದೇವಿ |
ಹೊದ್ದಿರುವ ಒದ್ದೆಯ ತೆಗೆದು ಹೊಸ ಸೀರೆಯ
ಉಡುಬಾರೆ ತಂದಿರುವೆ ನೆಯ್ಸಿ" ||೧೭||

ನವಿಲಿನ ರೆಕ್ಕೆಯ ಸಿಕ್ಕಿಸಿ ಹೆಣೆದಂಥ
ಚೆಕ್ಕೆ ಚಂದಿರಕಾಳಿ ಸೀರಿ |
ನವಿಲಿನ ಕಣ್ಣುಗಳ ಕೀಲಿಸಿ ಬರೆದಂಥ
ಬಣ್ಣದ ಬಾರ್ಡರಿನ ಸೀರಿ |
ಅಯ್ಯೊ ದುರ್ದೈವಿಯ ತಲೆಯ ತುರಾಯಿಯ
ಚಿತ್ತಾರ ಬಿಡಿಸಿದ ಸೀರಿ |
ನವಿಲಿನ ನೆತ್ತರ ಚಿಮುಕಿಸಿ ನೆಯ್ದಂಥ
ಇಳಕಲ್ಲ ಸೆರಗಿನ ಸೀರಿ ||೧೮||

ಮಡದಿಯ ಬಾಯಿಂದ ನುಡಿಗಳು ಬರಲಿಲ್ಲ
ಕುಡುಗೋಲಿನಂತೊಮ್ಮೆ ಬಾಗಿ |
ಪತಿಯ ಕಡೆ ನೋಡಿದಳು ಸೀರೆ ಕಸಿದಳು, ಕಸಿದು
ಕಸಿದ ಸೀರೆಯ ಹಡದಿ ಹಾಸಿ |
ನಡೆದು ಹೋದಳು ಮಡದಿ ಹೊರಗೆ ಕಾಡಿನ ಕಡೆಗೆ
ಕರಗಿಹೋದಳು ಕತ್ತಲಲಿ ||೧೯||

ನವಿಲೇ ನವಿಲೇ ಚೆಂದೊಳ್ಳೆ ನವಿಲೇ
ನಾದಗಳು ನುಡಿಯಾಗಲೇ |
ಹಾಡಾದ ನುಡಿಯೊಳಗೆ ಬೆಳಕಾಡಿ ಹಾಡಿನ
ಆಚೆ ಸೀಮೆಯ ತೋರಲೇ ||೨೦||

## ನಶ್ಯ

ನಶ್ಯದಲ್ಲಿ ನಾನಾ ನಮೂನೆಗಳಿವೆ.
ಬಣ್ಣ, ದರ, ತರತಮ ಘಮಘಮ
ಸಣ್ಣ, ನುಣ್ಣಗೆ, ದಪ್ಪ, ಇನ್ನೂ ಅನೇಕ ತರ -
ಮದ್ರಾಸಿನಾರ್ಮುಗಂ ನಶ್ಯ,
ಬೆಂಗ್ಳೂರು ಮಂಗಳಗೌರೀ ನಶ್ಯ,
ಹಳ್ಳಿಹಳ್ಳಿಯ ದೇಶೀ ನಶ್ಯ, ಕೆಲವರಿಗಂತು
ಪ್ಯಾರಿಸ್, ಕೊನೇಪಕ್ಷ ಲಂಡನ್
ಪಿಸ್ತೂಲ ಛಾಪಿನ ನಶ್ಯವಾದರೂ ಅವಶ್ಯ.

ಅವರವರ ಕಸಬು ಅಂತಸ್ತು
ಸ್ಟೇಟಸ್ಸಿಗನುಗುಣವಾಗಿ ಅವರವರ ಬ್ರ್ಯಾಂಡು.
ಅದಕ್ಕೆ ತಕ್ಕ ಹಸಿ, ಬಿಸಿ,
ತನಿ, ಬೆಚ್ಚ , ಉಗುರು ಬೆಚ್ಚಗಿನ ಸುಖ
ಶೀತೋಷ್ಣ ಪರಿಣಾಮಗಳು.

ಒಂದೊಂದು ಬ್ರ್ಯಾಂಡಿನವರಿಗೆ ಒಂದೊಂದು
ಕುಲಗೋತ್ರ ಜಾತಿವರ್ಣ ಮತಗಳುಂಟು,
ನಶ್ಯದ ನಡಾವಳಿಯಲ್ಲಿ ಭೇದಗಳುಂಟು.
ನಿಮಗಿಷ್ಟು ತಿಳಿದಿರಲಿ ಸಾಕು:
ಒಂದು ಬ್ರ್ಯಾಂಡಿಗೂ ಇನ್ನೊಂದಕ್ಕೂ ನೀರಿನ ಬಳಕೆಯಿಲ್ಲ,
ಹೆಣ್ಣುಗಂಡಿನ ಸಂಬಂಧವಂತು ಖಂಡಿತಾ ಇಲ್ಲ.

ಕೆಲವರು ಸೇದುತ್ತಾರೆ; ಕೆಲವರು ಹಾಕಿಕೊಳ್ಳುತ್ತಾರೆ.
ಕೆಲವರು ಮುದ್ದಾಂ ಭರ್ತಿಮಾಡಿಕೊಂಬರು,
ಸರಿಗಮದ ಸಿಂಫನಿಯೊಳೇರಿಸಿಕೊಂಬವರು ಕೆಲವರು.

ಅದೊಂದು ಬಗೆಯ ನಶ್ಯಕ್ಕೆ
(ಹೆಸರು ನೆನಪಿಲ್ಲ)
ಕೆಲ ಮುದುಕರು ಪಂಚೇಂದ್ರಿಯ ಬೆಚ್ಚಗಾಗಿ
ಹನುಮಾನ್ ಚೆಡ್ಡಿ ಹಾಕಿ ಫುಟ್ ಬಾಲ್ ಆಡಿದಂತೆ,
ಸರಿಕ ಮುದುಕಿಯರು ಷೋಢಶಿಯರಾಗಿ
ಹಸ್ತಾಕ್ಷರಕ್ಕೆ ಸುತ್ತುವರಿದಂತೆ
ಕನಸಾಗುವುದಂತೆ!
ಈ ನಶ್ಯದ ವ್ಯವಹಾರ ರಹಸ್ಯವಂತೆ!

ಇನ್ನು ಕೆಲ ಭಯಂಕರರಿದ್ದಾರೆ:
ಆ ಮಾತು ಈ ಮಾತು, ಮಾತು ಮಾತಿನ ಮಧ್ಯೆ

ಸುತ್ತ ಕೂತವರಿಗೆ ಗೊತ್ತಾಗದಂತೆ
ಡಬ್ಬಿಯ ತೂತಿಗೆ ಬೆರಳು ಸೇರಿಸಿ
ನಿಧನಿಧಾನ ನಿಮ್ಮ ದುರಿಗೊಂದು ಸವಾಲೆಸೆದು,
ನೀವು ಕೈಮೇಲೆ ತಲೆಹೇರಿ ಕೂತಿರೋ
ಎಳೆಯುತ್ತಾರೆ ಜುರುಕಿ;
ಆಹ! ಬಯಲಾಯಿತೋ ಪರಮಸತ್ಯದ
ಬುರುಕಿ!
ದೇಶೀ ಅರುಂಧತಿಯರೆಲ್ಲ ನಗ್ನರಾಗಿ
ಕಾಕಟೇಲ್ ಸುರಕೊಂಡು ಲಂಡನ್ ಹೋಟಲಲಿ
ಕ್ಯಾಬರಿಸುವರು!
ಇದು ಸ್ವಲ್ಪ ತುಟ್ಟೀ ನಶ್ಯ.

ಕೆಲವರು,
ಮಿದ್ದಿ, ಹದಮಾಡಿ ಬೆವರಲ್ಲದ್ದಿ ಮೂಗಿನಲ್ಲಿ
ಮೊಗಮ್ಮಾಗಿ ಗಮ್ಮಂತ ತುಂಬಿ
ಚಿಟಕೆ ಹೊಡೆದರೋ
ಹಠಯೋಗದಲ್ಲಿ ಸಟ್ಟಂತ ಉಸಿರೇರಿಸಿ,
ಬ್ರಹ್ಮರಂಧ್ರದ ಪಟಲ ಚಟ್ಟಂತ ಸಿಡಿದು
ಕುಂಡಲಿನಿಯ ಬುಡಬೆದರಿ
ಷಟ್ ಚಕ್ರದ ಸಹಸ್ರಾರು ದಳದ
ಹೃದಯಾರವಿಂದವರಳಿ
ನಶ್ಯದ ಡಬ್ಬಿಯಷ್ಟು ಸ್ಪಷ್ಟವಾಗಿ
ಜೀವಾತ್ಮ ಪರಮಾತ್ಮ ನಡುವಿನಾತ್ಮಕ ಟೊಂಕದಾತ್ಮಗಳೆಲ್ಲ
ಕಾಣಿಸುತ್ತವಂತೆ!
ಇದೇ ಶಾಶ್ವತ ಸತ್ಯ
ಇದಕ್ಕೆ ಸ್ಪೆಷಲ್ ನಶ್ಯ ಅಗತ್ಯ.
ನನಗೆ ಮಾತ್ರ
ನಶ್ಯ ಏರಿಸಿದಾಗ ಟಸಟಸ ಹತ್ತೆಂಟು
ಸೀ ಸೀ ಸೀ ಸೀನು ಬಂದು
ಮುಖ ಒದ್ದೆಯಾಗಿ
ಕಣ್ಣಲ್ಲಿ ನೀರು ಬರುತ್ತದೆ!

# ಅಜ್ಜ ಅಜ್ಜಿ

ಅಜ್ಜ ಅಜ್ಜಿಗೆ ಬೇಜಾರು
ನೆನಪೂ ಬೋರು.

ಮಗ ಸೊಸೆ ಆಫೀಸಿಗೆ ಹೋದರೆ,
ಇವರು ಆಡುತ್ತಾರೆ
ಸ್ಕೂಲಿಗೆ ಹೋದ ಮೊಮ್ಮಗನ
ಆಟಿಗೆಯ ಜೊತೆಗೆ;

ರಬ್ಬರಿನ ಹಾವನ್ನ ದೂರ ಎಸೆಯುತ್ತಾರೆ,
ಕಣ್ಣು ಕಟ್ಟಿಕೊಂಡು
ಕೈಯೂರಿ ಪ್ರಾಣಿಗಳಾಗಿ ಹುಡುಕುತ್ತಾರೆ:

ಸಿಕ್ಕರೆ ಶಿಕಾರಿ
ಸಿಗದಿದ್ದರೆ ಭಿಕಾರಿ.

ನೋಡಿದಿರಾ ಈ ದಿನವೂ
ಅಜ್ಜಿಗೇ ಸಿಕ್ಕಿತು ಹಾವು.
ಹಾವು ಕಂಡರೆ ಮುದುಕಿಗೆ ಸಿಟ್ಟು,
ಹಾವಿನ ಗಾಜಿನ ಕಣ್ಣು ಕಿತ್ತು
ಕುಟ್ಟಿ ಪುಡಿ ಪುಡಿ ಮಾಡಿ ಎಸೆದರೆ -

ಈ ಕಡೆ ಕುರುಡ ಮುದುಕ ಕೈಯಾಡಿಸಿ
ಹುಡುಕುತ್ತಾನೆ:
ಎಲ್ಲಿದ್ದೀಯೆ ಮುದುಕಿ?
ಎಲ್ಲಿದ್ದೀಯೆ?

# ಸರಳ ಮಾತು

ಹೆರಿಗೆ ವಾರ್ಡಿನ ಆ ಕೊನೆ ಹಾಸಿಗೆಯಲ್ಲಿ
ಚೊಚ್ಚಲ ಬಾಣಂತಿ, ಇನ್ನೂ ಬಾಲೆ
ಅಲ್ಲೆ ಗೋಡೆಯ ಮೇಲೆ ಹೂಬಿಟ್ಟಿದೆ ಬಳ್ಳಿ,
ಗೊತ್ತೇ ಆಗೋದಿಲ್ಲ, ಅದು ಅರಳಿದ್ದು ಕ್ಯಾಲೆಂಡರಿನಲ್ಲಿ!

ಉಳಿದ ಬಾಣಂತಿಯರಿಗೆಷ್ಟೊಂದು ಕರುಳಿನ ಬಳ್ಳಿ;
ಕುಲು ಕುಲು ನಗುವ, ಕೈ ತುಂಬಾ ಕಾಣಿಕೆ ತರುವ
ಬಂಧುಬಾಂಧವ ಮಂದಿ, ಬಾಯ್ತುಂಬ ಬೂಂದಿ.

ಈಕೆಯ ಬಳಿಗ್ಯಾರೂ ಬರೋದಿಲ್ಲ, ನಗೋದಿಲ್ಲ, ಕ್ಷೇಮ ಕೇಳೋದಿಲ್ಲ.
ಗಂಡನೋ ಮಿಂಡನೋ ಈ ಪಿಂಡದ ಕಾರಣಿಕನ
ಸುಳಿವಿಲ್ಲ, ದಾಖಲೆಯಲ್ಲಿ ಅವನ ಹೆಸರೂ ಇಲ್ಲ.
ಹೋಗಲೆಂದರೆ ಈಕೆ ಮೇರಿಯೂ ಅಲ್ಲ; ಹುಟ್ಟಿದ್ದು ಏಸುವಲ್ಲ.

ಇವಳ ಬಳಿ ಸುಳಿವವಳು ನರ್ಸೊಬ್ಬಳೇ,
ಅವಳ ತುಟಿಯಂಚಿಗೂ ವಂಕಿ ನಗೆಯೇ.

ಬರುತ್ತಾರಲ್ಲ, ಬಂಧುಬಾಂಧವ ಮಂದಿ, ಬಂದವರು
ಬಂದು, ಕೊಡುವಷ್ಟು ಕೊಟ್ಟು ನೋಡುವಷ್ಟು ನೋಡಿ
ನೋಡಿದ ಮೇಲೆ, ಎಲ್ಲರ ವಕ್ರ ದೃಷ್ಟಿ ಇವಳ ಕಡೆಗೇ.
ಅವರೆಲ್ಲ ಹಿಂದು ಕಣ್ಣೊಳಗೆ ಪುಂಡುಪೋಕರಿ ಕಥೆಯ
ಹೆಣೆಯುವವರೆ:

ಇವಳ ತೋಳಿಗೆರಡು ಕಥೆ, ಮುಖಕ್ಕೆ ಮೂರು ಕಥೆ
ಕಣ್ಣಿನೊಳಗಿನ್ನೇಸು ಕಥೆಗಳಿವೆಯೋ!

ಇದ್ಯಾವುದರೆಗ್ಗಿಲ್ಲದ ತಾಯಿ
ಮೈಮರೆತು ಮಾಯಿ
ಹಿಗ್ಗಿ ಹಸಿರಾಗಿ, ಉಬ್ಬಿ ಮೊಗ್ಗಾಗಿ, ಬಿರಿದು ಹೂವಾಗಿ
ಬಗೆ ಬಗೆಯ ಧಗೆಯಿಂದ ಮಗುವನ್ನು ಕುಲುಕಿ
ಪಲುಕುತ್ತ ಲಕಲಕಿಸುತ್ತಾಳೆ ಮಳೆಯೊಳಗಿನ ಮಲೆನಾಡಿನಂತೆ!

ಅಥವಾ,
ನಾವು, ಎಷ್ಟೊಂದು ಕ್ಯಾಲೆಂಡರಿನಲ್ಲಿ ನಿಸರ್ಗವನ್ನಿಟ್ಟು
ಮೊಳೆಹೊಡೆದು ಗೋಡೆಗೆ ನೇತು ಹಾಕುವ ಮಂದಿ,
ಈ ಸರಳ ಮಾತು ನಮಗೆ ತಿಳಿದೀತು ಹ್ಯಾಗೆ?

# ರಂಗಭೂಮಿ ಮತ್ತು ನಾನು

ಏನು ಜನ! ಎಷ್ಟೊಂದು ಮಂದಿ, ಮಜ!
ಇಡೀ ಕಲಾಕ್ಷೇತ್ರ ಇಡಿಕಿರಿದು ತುಂಬಿ
ಕೂತ ಜನ ತುಂಬಿ, ನಿಂತಜನ ತುಂಬಿ,
ಕೆಳಗೂ ತುಂಬಿ, ಮ್ಯಾಲ ತುಂಬಿ
ಹೌಸ್ ಫುಲ್ಲಿನ ಬೋರ್ಡು ಒದ್ದೆಸೆದು ನುಗ್ಗುವ
ಆತುರದ ಜನ ತುಂಬಿ ತುಂಬಿ...
ಏನಕ್ಕೆ?
ನನ್ನ ನಾಟಕ ನೋಡುವುದಕ್ಕೆ!

ನಾಟಕವನ್ನ ಅಭಿನಯಿಸಿ, ಅಲಂಕರಿಸಿ
ಕುಣಿದು ಕುಪ್ಪಳಿಸಿ
ಪಾತ್ರಗಳ ಎದೆ, ಸ್ಥಾಯಿಗಳ ಬೆದೆ
ಸಂಚಾರಿಗಳ ಹದವರಿತು ಹಾರಿಸಿ
ಬೆರಸಿ ತೋರಿಸಿದರೆ, ಅರರೇ ಖರೆ ಹೇಳುತ್ತೇನೆ:

ನಿರ್ದೇಶಕನ ಅಹಂಕಾರಕ್ಕೆ ಚಪ್ಪಾಳೆ ಹಾರ ತುರಾಯಿಗಳರ್ಪಿಸಿ
ನಟನ ಭ್ರಮೆ ಬಲೂನಿಗೆ ಇನ್ನಷ್ಟು ಹೊಗಳಿಕೆ ಊದಿ
ಪ್ರೇಕ್ಷಕರ ಮೈಮರೆವಿಗೊಂದಿಷ್ಟು - ಇನ್ನೊಂದಿಷ್ಟು
ಮತ್ತಿನ ಮದ್ದು ಲೇಪಿಸಿ
ಭರತವಾಕ್ಯ ಹೇಳಿ, ತೆರೆಬಿದ್ದಾಗ
ರಂಗಭೂಮಿ ಖಾಲಿ ಖಾಲಿ.

ಈಗ ಎಲ್ಲ ಮಲಗಿದ್ದಾರೆ -
ನಟರು ಅವರ ಭ್ರಮೆಗಳು,
ನೇಪಥ್ಯದ ಕೆಲಸಗಾರರು ಅವರ ಹೆಂಡಿರು ಮಕ್ಕಳು
ನಿರ್ದೇಶಕ ಮತ್ತವನ ಅಹಂಕಾರ,
ಪ್ರೇಕ್ಷಕ ಮತ್ತವನ ಜಾರುದಾರಿಗಳು,
ವಾಚ್ ಮನ್ ಮತ್ತವನ ಸುಖಸಂಸಾರ,

ನಾವಿಬ್ಬರೇ ಈಗ ಎಚ್ಚರಿದ್ದವರು:
ರಂಗಭೂಮಿ ಮತ್ತು ನಾನು.
ನೆತ್ತರೊಡೆವ ಕಣ್ಣಿನಂಥ ಎರಡೆ ದೀಪ ತೆರೆದುಕೊಂಡು
ಎದುರೆದುರೇ ಕೂತಿದ್ದೇವೆ!

ನೆನಪು ನೆರಳುಗಳಾಗಿ, ನೆರಳು ಚಿತ್ರಗಳಾಗಿ
ರಂಗದ ಮೇಲೆ ಗಂಭೀರ ನಡೆದಾಡುತ್ತವೆ.
ವಿಂಗಿನ ಕಡೆ, ಖಾಲಿ ಖುರ್ಚಿಯ ಕಡೆ ಪ್ರಶ್ನೆಗಳನ್ನ
ಅಗಿದುಗಿದು ಎಸೆದು ರಾಚಿ ಉತ್ತರಕ್ಕಾಗಿ ಹಾರೈಸುತ್ತ
ಹರಿದಾಡುತ್ತವೆ.

ಈ ನಡುವೆ ನಾವಿದ್ದೇವೆ - ಅದೇ ರಂಗಭೂಮಿ ಮತ್ತು ನಾನು
ಆಪಾದಿಸುತ್ತ
ಸಮರ್ಥಿಸಿಕೊಳ್ಳುತ್ತ
ಪರಸ್ಪರ ನೋವಿನಲ್ಲಿ ಬೆರಳಾಡಿಸುತ್ತ.

## ನಾಡು - ಕಾಡು

೧
ಈ ನಾಡು ಆ ಕಾಡು - ಈ ಎರಡರ ನಡುವೆ
ಜೇಡರ ಬಲೆ ಹೆಣೆದು ಎಷ್ಟೊಂದು ದಾರಿ
ಹರಿದಾಡಿವೆ ನೋಡಿ:
ನಡೆವ ದಾರಿ, ತೆವಳುವ ದಾರಿ, ಸಂಚಿನ
ಒಳಸಂಚಿನ ದಾರಿ, ಗುರಿತಪ್ಪಿಸುವ, ತಲುಪಿಸುವ
ದಾರಿ, ಒಟ್ಟಾರೆ ನಿಮಗಿಷ್ಟು ತಿಳಿದಿರಲಿ
ಇದು ಬದುಕುವ ದಾರಿ.

ಉದಾಹರಣೆಗೆ ನೋಡಿ:
ಕಾಡು ನಾಡಿನ ಮಧ್ಯೆ
ಹಾವಾಗಿ ಹರಿದ ನದಿ, ಅದರ ಬದಿ ದೊಡ್ಡ ಮರ,
ಅದರಡಿಯ ಮನೆಯಲ್ಲಿ ಮಾನವರು ಅವರ ದನಕರು, –
ಇಲ್ಲಿ ಗೋಮುಖ, ಅಲ್ಲಿ ವ್ಯಾಘ್ರನಖ
ಆಹಾಹಾ ಬೇಟೆಯ ರಂಗೇರಿದ ಮೃಗನರನಾಟಕ.
ಇರಿವಕೊಂಬು, ಮಸೆದ ಕೋರೆಹಲ್ಲು,
ಪರಸ್ಪರ ಕಬಳಿಸುವ, ಹೊಂಚುವ ಚೌರ್ಯಾಂಸಿ
ಲಕ್ಷಜೀವರಾಶಿಗಳ ವಾರಾಶಿ ರಾಶಿ ರಾಶಿ!

ಒಬ್ಬೊಬ್ಬರೂ ಘಾಟಿ,
ಇನ್ನೊಬ್ಬರ ಮೈಮರೆಸಿ ಮುಗಿಸಿ
ತಾ ಮೀಸೆ ತೀಡುತ್ತ ಜೀವಿಸುವ ಭಾತಿ.
ಆದರೂ ನೆಪ್ಪಿರಲಿ, –

ಇವರ್ಯಾರೂ ಎಲ್ಲ ಕೊಲ್ಲುವುದಿಲ್ಲ, ಕೊಲ್ಲುವಷ್ಟೇ ಕೊಂದು
ತಿನ್ನುವಷ್ಟೇ ತಿಂದು, ಅದೆಷ್ಟೆಂಬ ಮಿತಿಯನುಸರಿಸಿ
ಉಳಿಸುವಷ್ಟೇ ಉಳಿಸಿ, ಬದುಕುವ ನಿಯತ್ತಿನ ರೀತಿ
ಇವರ ಬದುಕಿನ ನೀತಿ.

೧

ಇಲ್ಲಿ ಇನ್ನೇನೇನು ಇಲ್ಲವೆನ್ನ ಬೇಡಿ; ದೃಶ್ಯ ಬದಲಾದರೆ
ಹಸಿರು ಹಗಲುಗಳಲ್ಲಿ ಹೊಂಬಣ್ಣದ ಸಂಜೆ ಮುಂಜಾವಿನ
ಅಡ್ಡದಾರಿಗಳಲ್ಲಿ ಅಲೆದಾಡುವ ಖುಶಿಗಳಿವೆ.
ಬೆರಗಿನಲ್ಲಿ ಕಣ್ಣು ತೆರೆದರೆ ಮನೆ,
ಮರವು ಪರಿಪರಿಯಾಗಿ ಅರಳಿ, ಹಕ್ಕಿಗಳ ಕಂಠದಲ್ಲಿ
ಸರಿಗಮದ ಸಂಭ್ರಮ ಉಕ್ಕಿಸೋದಿದೆ.
ನದಿ ದಂಡೆಯ ತಬ್ಬಿ ತೆರೆನೊರೆಯ
ಮುತ್ತುರತ್ನಗಳ ಹೇರಳ ರಾಶಿ ಚೆಲ್ಲುವಲ್ಲಿ
ನರನು ಬಾಲಕನಾಗಿ ಹುಳುವಂಟಿಸಿದ ಗಾಳ ಹಾಕಿ
ಬಣ್ಣದ ಮೀನು ಹಿಡಿಯೋದಿದೆ.

ಇದೆಲ್ಲ ಎಲ್ಲಿಯತನಕ? ಕತ್ತಲಾದರೆ ಆಯ್ತು:
ಹರಿದಾರಿಗಳ ಗೀರಿಲ್ಲ, ಕಾಡುನಾಡುಗಳ ಎರಡಿಲ್ಲ
ಒಂದೊಂದೂ ಅಲ್ಲಲ್ಲೇ ಇದ್ದಲ್ಲೇ ಬಿದ್ದು
ಕಟ್ಟಿಸಿದ ಕೊಂಬು, ಕೋರೆಹಲ್ಲಿನ ಸೆಟ್ಟು ತೆಗೆದಿಟ್ಟು
ಕಲರಿನ ಮುಖವಾಡ ಕಳಚಿಟ್ಟು, ಬೆರಳು ಸೀಪುತ್ತ
ಕರಿಮಸಿಯಲ್ಲಿ ಕರಗುತ್ತವೆ.

ಆಕಾಶನೀಲಿಯ ಚಿಕ್ಕೆಗಣ್ಣಿಗೆ ಈಗ ಎಷ್ಟಣ್ಣ ಕಂಡೀತು?
ನದಿಯ ಎದೆಯಲ್ಲಿ ಮೂಡಿರುವ
ಅದರ ನಡುಗುವ ಬಿಂಬವಷ್ಟೆ.

೨

ಆಟ ಕಳೆಗಟ್ಟೋದು ಚಂದ್ರ ಮೂಡಿದಾಗ.
ಮೋಡದ ಮುಸುಕು ಸರಿಸಿ ಹೊರಬಂದ ಚಂದ್ರ
ತಿಂಗಳ ಮಾಯೆಯಲ್ಲದ್ದಿ ತೆಗೆದಾಗ ಚರಾಚರದೀ ಜಗ
ಭಗ್ಗನೆ ಕನಸಿನಲ್ಲಿ ಎಚ್ಚರಗೊಳ್ಳುತ್ತದೆ.
ಬೆಚ್ಚನೆಯ ಕನಸು ಒಂದೆ ಹೊಕ್ಕಳ ಬಳ್ಳಿಗೆ
ಎಲ್ಲರನ್ನು ಎಳೆತಂದು ಬಿಗಿಯುತ್ತದೆ.
ಈಗ ನೋಡಿ ಮಜ:

ನಾಡಿಗೆ ಕಾಡಿನ ಕನಸು, ಕಾಡಿಗೆ ಮರದ ಕನಸು,
ಮರಕ್ಕೆ ಹಕ್ಕಿಯ ಕನಸು, ಹಕ್ಕಿಗೆ ಮೋಡದ ಗೊಂಚಲಿಗೆ
ಬಿಟ್ಟ ಅರಳುಮಲ್ಲಿಗೆ ಚಿಕ್ಕೆಯ ಕನಸು
ಚಿಕ್ಕೆಗೆ ನೀಲಿಕೈಲಾಸದಲಿ ಲೀಲಾಜಾಲ
ತೇಲುವ ಚಂದ್ರನ ಕನಸು
ಚಂದ್ರನಿಗೆ ನದಿಯಾಳದಲ್ಲಿ ಬೆಳ್ಳಿಮೀನಾಗಿ
ಈಜುವ ಕನಸು!

ಅಕಾ ನದಿಯ ದಂಡೆಯ ಮೇಲೆ ಕೂತ
ನರಬಾಲಕನ ಕಂಡಿರಾ?
ಈತನಿಗೆ ಹುಳುವಂಟಿಸಿದ ಗಾಳಹಾಕಿ
ಈಜಾಡುವ ಬೆಳ್ಳಿ ಮೀನನ್ನ
ಹಿಡಿವ ಕನಸು!

## ಇಟ್ಟಿಗೆಯ ಪಟ್ಟಣ

ಹಸಿರನ್ನಲ್ಲ,
ಈ ಸಿಟಿಯಲ್ಲಿ ಬಿತ್ತಿ ಬೆಳೆಯುತ್ತಾರೆ
ಮಣ್ಣಿನಿಟ್ಟಿಗೆಯನ್ನ.
ಇಟ್ಟಿಗೆ ಬೆಳೆಯುತ್ತದೆ,
ಕಟ್ಟಡವಾಗುತ್ತದೆ.
ಕಟ್ಟಡ ಆಕಾಶದವಕಾಶವನ್ನ
ಚುಚ್ಚಿ ಬಿಸಿ ಮಾಡುತ್ತದೆ.
ಸೂರ್ಯನ ಬಿಸಿಲಿಗೆ ದೀಪದ ಬೆಳಕಿಗೆ
ಕಿಸಕ್ಕಂತ ಹಲ್ಲು ಕಿರಿದು ಹಳದಿಯ ನಗುತ್ತದೆ.

ಕಟ್ಟಡದ ಇಕ್ಕಟ್ಟು ಸಡಿಲಿ, ಬಿರುಕಿನಲ್ಲಿ
ಹಸಿರು ಇಣುಕಿದರೆ,
ಇಟ್ಟಿಗೆ ಅದರ ಕತ್ತು ಹಿಸುಕಿ ಕೊಲ್ಲುತ್ತದೆ.
ಪಾಪಾತ್ಮ ಹಸಿರು ಹುತಾತ್ಮನಾಗದೆ
ಸಾಯುತ್ತದೆ.

ಗೊತ್ತ ನಿಮಗೆ? – ಈ ಸಿಟಿಯೊಳಗೆ
ಆತ್ಮದ ಮಾರ್ಕೆಟ್ಟಿದೆ.
ತಲೆಯ ಕೊಯ್ದು, ತೊಗಲ ಸುಲಿದು
ತಿಪ್ಪರಲಾಗ ತೂಗು ಹಾಕಿದರೆ ತಗೊ, ಹಲೊ
ಕಾಸಿಗೊಂದು ಕಿಲೊ ಕೊಸರಿಗೊಂದೂ ಕಿಲೊ.

ತಲೆ ತಿಂಬವರಿಗೆ ಸೂಚನೆ:
ಅದು ಹಲ್ಕಿರಿದು ಅಣಕಿಸಿದರೆ
ಹೆದರಬೇಡಿರಿ.

## ನೀರು

ಗೆರೆಯಿಂದ ಕೊರೆದಿಡಲಾದೀತೇ ನೀರನ್ನ?
ಗೆರೆಯ ಬರೆವುದರೊಳಗೆ, ನೀರು ಕರಗಿ
ಸ್ಪೇಸಾಗಿ ತೇಲಿ, ಮಳೆಯಾಗಿ ಸುರಿದು,
ನದಿಯಾಗಿ ಹರಿದು,
ಕಾಲನ ಇರಿದು ಅಲೆ ಅಲೆ ರಿಪೀಟಾಗಿ
ಹಾಳು ಹಾಳಿನ ಮೇಲೆ ಹಾಡಿನ ಬಳ್ಳಿ ಹಬ್ಬಿಸುತ್ತ
ಮತ್ತೆ ನೀರಾಗುವುದರೊಳಗೆ
ನೀವೆಲ್ಲಿರುತ್ತೀರಿ?

ಇಷ್ಟಾಗಿ ನೀವೆಳೆದ ಎರಡು ರೇಖೆಗಳಲ್ಲಿ
ಕೂಡಬೇಕಾದ್ದಿಲ್ಲ. ಕೂಡಿದರೂ ಅಡ್ಡಿಯಿಲ್ಲ.
ನೀರಿನಲ್ಲೊಮ್ಮೊಮ್ಮೆ ಸಮಾಂತರ ಗೆರೆ
ಮೂಡಿದ್ದಿದೆ, ಕೂಡಿದ್ದಿದೆ.
ಮುರಿದು ಅಗಲಿದ್ದೂ ಇದೆ.

ಗೆರೆ ನಂಬಿ ಜಗಳಾಡಿದ್ದಿದೆ, ಕೊಲೆಗಳಾಗಿದ್ದಾವೆ.
ಇಷ್ಟಾಗಿ ನೀವು ಬೆರಳೂರಿದ್ದೆ ಕೇಂದ್ರ
ಸುತ್ತಿದ್ದೆ ಪರಿಘ.
ಪರಿಘದ ಹಾಗೆ ಕೇಂದ್ರಗಳೂ ಅಪರಂಪಾರ

ಯಾಕೆಂದರೆ ನೋಡಿ ಇದು ನೀರಿನ ವ್ಯವಹಾರ ||

## ಅಂಬಿಗರಣ್ಣನ ಲಾವಣಿ

೧
ನದಿಯಾಚೆ ದಡದ ತಿಳಿನೀರಿನಲಿ ಚಂದಿರನೆ
ಬೆಳ್ಳಿಮೀನಾಗಿ ಈಜುವನು ಎಂದು
ಬಲೆಹಾಕಿ ಅವನನೀಗಲೆ ಹಿಡಿಯಬೇಕೆಂದು
ಅಂಬಿಗರ ಹುಡುಗ ಹೊರಟಾನು.

“ಗಗನದ ತುಂಬೆಲ್ಲ ಘನಘನ ಘನವೆಂದು
ಗುಡುಗ್ಯಾಡತಾವಲ್ಲ ಮೋಡ
ಪ್ರಳಯದ ನೀರು ನೀರೇ ಎಲ್ಲ ಕಡೆಗೂನು
ಹೋಗಬ್ಯಾಡೆಲೊ ಎಳೆಯ ಹುಡುಗ.”

“ನುಡಿಯಾಚೆಗಿನದೇನೋ ಕೈಮಾಡಿ ಕರೆಯುತಿದೆ,
ಇಗೊ ಹತ್ತು ಬಾ ಸುಖದ ಶಿಖರ.
ಲಗ್ಗೆ ಹಾಕಲೆಬೇಕು ಆ ಬೆಳಕಿನರಮನೆಗೆ
ಈಗ ಸಿಕ್ಕಲೆಬೇಕು ಚಂದ್ರ.”

೧
ನೀಲಿಗಿಂತಾ ಹೆಚ್ಚು ನೀಲಿಯಾಗಿದೆಯಲ್ಲ
ಇಂದ್ಯಾಕೆ ಆಕಾಶ ಹೀಗೆಂದವು.
ಹಲ್ಲುಗಿಂಜುವ ಕ್ಷಿತಿಜ ಹೌಹಾರಿ ಸರಿದಾವು
ಇಂದ್ಯಾಕೆ ದಿಕ್ಕುಗಳು ಹೀಗೆಂದೆವು.

ಹೊಳೆವ ತಾರೆಗಳೆಲ್ಲೊ ಇದ್ದಿಲಾದನುಭವ
ಸುಟ್ಟ ಕನಸಿನ ಸೀದ ವಾಸನೆಗಳು.

ಅಗಬಾರದ್ದಾಗಿ ಹೋಗಿತ್ತು ಅಗಲೇ
ಅದೆನೀರು ಅದೆಗಾಳಿ ಕೈಕೊಟ್ಟು ನಿನ್ನನ್ನ
ನೀರಿನಾಳದ ತಳಕೆ ಎಳೆದಿದ್ದವು.

ತಂಪಾಗಿದ್ದವು ಕಂಚಿನ ದೇವರ
ಆಶೀರ್ವದಿಸುವ ಹಸ್ತಗಳು.

೨
ಅಂಬಿಗರಣ್ಣಾ,
ಕನಸು ತುಂಬಿದ್ದ ನಾವೆಯ ರಭಸಕ್ಕೆ
ಆಳದಲ್ಲಿ ಮುಳುಗಿದ್ದ ವೈಭವಗಳೆಲ್ಲ ಮ್ಯಾಲೆದ್ದು
ತೇಲುವ ಹಾಗೆ ಮಾಡಿದಣ್ಣಾ.
ಚಿಳಿಮಿಳಿ ಮೀನಾಡುವ ಹಾಡುಗಳ ಹೇಳಿ
ನೀರಿನ ನೀರವತೆಯನ್ನು ಭರ್ತಿಮಾಡಿದ ಕವಿಗಾರಣ್ಣಾ,
ಹೊಳೆವ ಆಯುಧದಂತೆ ಝಳಪಿಸುವ ತೆರೆಗಳಲ್ಲಿ
ನಾವೆ ಹೊಗುವಾಗ ಮಳೆಬಿಲ್ಲಿಂದ ಬಿರುಗಾಳಿಯ ಬೆನ್ನಟ್ಟಿ
ಬೇಟೆಯಾಡಿದ ಬೇಟೆಗಾರಣ್ಣಾ –

ಕಾಣದ ವೈರಿಯ ಜೊತೆಗೆ ಕೊನೆಯ ಕಾಳಗವಾದುವಂತೆ
ಹುಟ್ಟು ಹಾಕುತ್ತಿದ್ದ ನಿನ್ನ ಹಟ ಎಲ್ಲಿದೆ ಈಗ?
ನೀರ ಪಳಗಿಸಿದಣ್ಣಾ
ನೀರಲ್ಲಿ ಕನಸುಗಳ ಬಿತ್ತಿ ಹೋದಣ್ಣಾ,
ಅಂಬಿಗರಣ್ಣಾ,
ನೀನು ಮುಳುಗುವಿ ಅಂತ ಅನ್ನಿಸಿರಲೇ ಇಲ್ಲ.
ದೇವರೂ ನಮ್ಮ ಪರ ಇರಲಿಲ್ಲ.
ನೀರಿಗೆ ತಾ ಮಾಡಿದ್ದರ ಅರಿವಿರಲಿಲ್ಲ.

ಅನಂತವನ್ನ ಅನುಕರಿಸಿದ ನಟುವಾನ
ಪೂರ್ಣತೆಯನಣಗಿಸಲಿಕ್ಕೆ ಹೋಗಿ ತಪ್ಪುಮಾಡಿ
ನಗುವಂತಿತ್ತು ನಿನ್ನ ಭಂಗಿ.

ಗುಡ್ಡದಿಕ್ಕಟ್ಟಿನ ದಾರಿಯ ಕತ್ತುಹಿಸುಕುತ್ತ
ಹರಿಯುತ್ತಲೇ ಇದೆ ನದಿ ನಿರಾತಂಕ.

೪

ಸಾವಲ್ಲ ಇದು ದಾಹ.
ಮಿಂಚಾಗಿ ಹರಿದು ಕಾಲನೆದೆಯಲೊಂದು
ಮರೆಯಬಾರದ ಗೆರೆ ಗೀರಿ ಮೆರೆದು
ಮರೆಯಾಗುವ ದಾಹ.
ಸಾವಲ್ಲ ಅಮರ
ಕಸುಗಳೆಂದು ತೋರಿಸುವ ದಾಹ.

೫

ಹುಡುಕಿ ಹೋದದ್ದು ಸಿಕ್ಕಲಿ ಬಿಡಲಿ
ನೀರಲ್ಲಿ ತೊಳೆದ ಹುಣಸೆ ಹಣ್ಣಲ್ಲ ನಿನ್ನ ಕ್ಯಾತಿ -
ಕಿಲುಬಿದ ದೇವರಿಗೆ ಬೆಳಕಾಡುವ ಕಣ್ಣುಕೊಟ್ಟೆ,
ನಿನ್ನ ಲಾವಣಿ ಕೇಳುವ ಕಿವಿಕೊಟ್ಟೆ,
ಮತ್ಸರಿಸುವ ಎದೆಕೊಟ್ಟೆ.
ಖುಷಿಕೊಟ್ಟೆ ಜಲದೇವತೆಗೆ
ನೀರಿಗೆ ಕೊಟ್ಟೆ ಮಹಾಕಾವ್ಯದ ಗೌರವ ರಕ್ಷೆ.

ಮುಳುಗಿದ ನಾವೆಗೆ
ತೇಲುವ ಹುಟ್ಟಿಗೆ
ತಳಹಿಡಿದ ಮೂಳೆಗೆ
ಬೀಳುವ ಸ್ವಾತಿಗೆ

ಸಿಂಪೆಯ ಮುತ್ತಿಗೆ
ನಿಟ್ಟುಸಿರಿನ ಹಬೆಯಾಗುವ ಮೋಡಗಳಿಗೆ
ಮಹಾಕಾವ್ಯದ ಗೌರವ ಕೊಟ್ಟೆ.

ನದಿ ಹರಿಯುತ್ತಲೇ ಇದೆ ನಿರಾತಂಕ.
ಬೆಳೆದ ಕನಸು ತೇಲಿಬರುತ್ತಿವೆ
ವಿಶ್ರಾಂತಿ ತಗೊ ನಾವಿಕ.

## ಶಬ್ಧದ ಲಜ್ಜೆಯ ನೋಡಾ

೧

ಹೇಳಿದರ ಕತಿಗಿತಿ ಅಂದೀರಿ ದೇವರೂ
ಶಾಸ್ತ್ರ ಸಂಪದನೀತ, ನಮ್ಮ ನಿಮ್ಮಂಥ
ಪೋಸ್ಟಿನ ವಿಳಾಸವಂತ, ಮತಿವಂತ, ಹಾಗಂತ
ಅರಸಿಕನಲ್ಲ, ಕಿಟ್ಟಲ್‌ಕೋಶವಿನಾ ಹಳಗನ್ನಡ
ಪದಾರ್ಥ ಮಾಡಬಲ್ಲ; ಹೊಸೆಯ ಬಲ್ಲ
ಚುಟುಕಗಿಟಕ ಮುಕ್ತಕ, ಹೇಳಬಲ್ಲ ಸಂಸ್ಕೃತದಲ್ಲಿ
ಮಾರುದ್ದದ ಸಮಸ್ತಪದಗಳ ಪ್ರಾಸಾನುಪ್ರಾಸಗಳ
ಪನ್ನು ಜೋಕುಗಳ ಕಟ್ಟಬಲ್ಲ.
ಹೇಳಿದರ ಕತಿಗಿತಿ ಅಂದೀರಿ ದೇವರೂ
ಕಿವಿಗೊಟ್ಟು ಕೇಳಿರಿ ಹೇಳುವೆನೀತನ
ನಿವಳ ಹಕೀಕತ್ತ.
ನವ್ಯ ಕಾವ್ಯದ ಹೊರಗೆ ಕೂತ ಸರಸ್ವತೀ
ಕೊಡು ನನಗೆ ತಾಕತ್ತ.

ವಿಳಾಸವಂತ ಎಂದೆನಲ್ಲ - ಮನೆಯಿದೆ ಅವನಿಗೂ ಊರಿನ ಕೇರಿಯ ರಸ್ತೆಯ ಪಕ್ಕದಲ್ಲಿ, –

ಎಲ್ಲಿ ಊರಿನ ಮೂರು ರಸ್ತೆಯ ವಕ್ರಕೂಟದ ಮಾಟವೋ
ಎಲ್ಲಿ ಮುದಿ ಎತ್ತೊಂದು ಮಲಗಿದೆ ಮೈಗೆ ಸಾವಿರ ನೊಣಗಳೋ
ಎಲ್ಲಿ ಎತ್ತಿನ ತುದಿಯ ಬಾಲನು ಕಣ್ಣಿಗೊತ್ತುವ ಜನಗಳೋ
ಎಲ್ಲಿ ಟ್ರಕ್ಕಿನ ಸರ್ಪನೆರಳಲಿ ಕಿರಚಿ ಓಡುವ ಸ್ಕೂಟರೋ

ಅಲ್ಲೆ ಅಲ್ಲೇ ಅವನ ಮನೆಯುಂಟು. ಅಲ್ಲಿಗೂ ಹೋಗುವರು ಜನ - ಜನಗಣತಿಯಧಿಕಾರಿ, ಚುನಾವಣೆ ಹುರಿಯಾಳು,
ಅರಿಷಿಣಕುಂಕುಮದ ಗರತಿ, ಹಾಲಿನ ಗೌಳಿ, ತರಕಾರಿಯ ಥರಾವರಿ ಮಂದಿ.

೧

ಅಕೊ ಬಂದ ಬಂದ! ಅವನೆಂಬಂಥ ಮತಿವಂತ, ಕುಲಗೋತ್ರಗಳ ವಿಷಯ ನನಗೆ ಗೊತ್ತಿರದಂಥ, ರಹಿತಾದಿ ಮಧ್ಯಂತ, ಬಿರುದುಬಾವಲಿರಹಿತ ಕಥಾನಾಯಕ ಬಂದಂಥವನು ಎತ್ತಿನ ಬಾಲದ ತುದಿ ಮುಟ್ಟಿ ಕಣ್ಣಿಗೊತ್ತಿಕೊಂಡಂಥವನು ನಾಕೈದು ಸಲ ಪ್ರದಕ್ಷಿಣೆಹಾಕಿ ಮಹಮನೆಗೆ ಬಂದು ಬಾಗಿಲು ತಟ್ಟಿದಂಥವನಾದಾಗ - ಸುವಿಶಾಲವಾದ ಆಳೆತ್ತರ ಆಳಗಲದ ಒಂದು ಮೊಲೆ ಬಂದು ಬಾಗಿಲು ತೆರೆದು ಮಾಮೂಲಿನಂತರದ ತುದಿ ಅವನ ಕಿವಿ ತುರಿಸಿ ಮಾಮೂಲು ನಗೆ ನಕ್ಕು ಒಳಬಂದು ಬಾಗಿಲಿಕ್ಕಿಕೊಂಡು -

ತಾಳ್ರಿ - ನಿಮಗೆ ಈ ಮನೆಯ ವಿಚಾರ, ಹೊಸದಾಗಿ ಬಂದಿದ್ದೀರಲ್ಲ - ಹೇಳಬೇಕು, ನೋಡ್ರಿ ಇದೊಂದು ರೂಮು, ರೂಮಿಗಂಟಿ ಬಾಕೀ ಮನೆ. ಬಾಕೀ ಮನೆ ವಿಚಾರ ಇತ್ತ ನಮಗೂ ಗೊತ್ತಿಲ್ಲ, ಅತ್ತ ನಾಯಕನಿಗೂ ಗೊತ್ತಿಲ್ಲ.

ರೂಮಿನ ಮೂರು ಗೋಡೆ ಕಲ್ಲುಮಣ್ಣಿನದೆ. ನಾಲ್ಕನೇ ಕರಿಗೋಡೆಯಿದೆಯಲ್ಲಾ ಮೂಲೆಗೂ ಅವನಿಗೂ ಮದುವೆಯಾದಾಗ ಇರಲಿಲ್ಲ. ಅಥವಾ ಅಪಾರ್ಥವಾಗದಂತೆ ಹೇಳಬೇಕೆಂದರೆ ಅವನು ಮದುವೆಯಾದದ್ದು ಮೊಲೆಯನ್ನಲ್ಲ - ಹೆಂಗಸನ್ನೆ. ಸುಳ್ಳು ನಾ ಯಾಕೆ ಬೆರಸಲಿ? ಇಬ್ಬರೂ ಚೆಲುವರೆ. ಆದರೆ ಅಗ್ನಿಸಾಕ್ಷಿಯಾಗಿ ಸರ್ವಸಮಸ್ತರ ಎದುರು ಅವನು ಕಟ್ಟಿದ್ದ, ಆಕೆ ಕಟ್ಟಿಸಿಕೊಂಡಿದ್ದ ಕರಿಮಣಿ ತಾಳಿ ಅವರಿಬ್ಬರಿಗಿಂತ ಸುಂದರವಾಗಿತ್ತು ಚೆಲುವಾಗಿತ್ತು. ಅಷ್ಟೇ ಯಾಕೆ ಮದುವೆಗೆ ಬಂದಿದ್ದ

ಅಚ್ಚ ಮುತ್ತೈದೇರು ಮೆಚ್ಚಿ ಕೊಂಡಾಡಿದರು
ಹೆಚ್ಚೀನ ತಾಳಿಯ ಹೊಗಳಿ
ದಾರಕೆ ಬೆಲೆಯೆಷ್ಟು ಕರಿಮಣಿಗೆ ಬೆಲೆಯೆಷ್ಟು
ಬಂಗಾರಕೆಷ್ಟು ಬೆಲೆಹೇಳಿ

ಎಲ್ಲಿ ಮಾಡಿಸಿದಿರಿನ್ನೆಲ್ಲಿಂದ ತಂದೀರಿ
ಎಷ್ಟೊಂದು ಹಣ ತೆತ್ತೀರಿ
ಕರಕುಶಲ ಪತ್ತಾರ ಮೊದಲು ಹೇಳಿದ್ದೆಷ್ಟು
ನೀವು ಕೊಟ್ಟದ್ದೆಷ್ಟು ಹೇಳ್ರೀ.

ಎಂದು ಮುಟ್ಟಿ ಮುಟ್ಟಿ ನೋಡಿ ತಟ್ಟಿ ತಟ್ಟಿ ಕೇಳಿದರೆ ಅದು ಕೇಳಿಕೇಳಿ ಅವನಿಗೆ ಹೆಮ್ಮೆಯಾದದ್ದು ನಿಜ. ಅಷ್ಟೇ ಅಲ್ಲ, ಅಷ್ಟೇ ಆಗಿದ್ದರೆ ನಿಮ್ಮೆದುರಿಗೆ ಇದೆಲ್ಲಾ ಯಾಕೆ ಹೇಳುತ್ತಿದ್ದೆ - ಆ ದಿನ ಹಿರಿಯರೆಲ್ಲ ಅವರಿಬ್ಬರನ್ನು ಬಿಟ್ಟು ಆ ತಾಳಿಗೇ ಆಶೀರ್ವದಿಸಿದರು. ಅದಕ್ಕೆ ಆಯುರಾರೋಗ್ಯ ಅಷ್ಟಪುತ್ರ ಸುಖ ಸೌಭಾಗ್ಯ ಹಾರೈಸಿದರು. ಅವರ ತುಟಿಯಂಚಿನ ವಂಕಿನಗೆ ಗುರುತಿಸಿ ಅವನು ಹಾಗೆಂದು ಹೇಳಿದರೆ 'ಕೆಟ್ಟ ಅಭಿರುಚಿ' ಯೆಂದರು.

೨

ಹೇಳಿದರ ಕತಿಗಿತಿ ಅಂದೀರಿ ದೇವರೂ, ಅಂದಿನಿಂದ ಅವನೂ ಒಬ್ಬ ಮನುಷ್ಯನಾದ. ಈಗ ಜನ ಅವನ ನಂಬುತ್ತಾರೆ, ಮದುವೆ ಮುಂಜಿ ವಿಧಿ ಆಚರಣೆಗಳಿಗೆ ಆಮಂತ್ರಿಸುತ್ತಾರೆ. ಬೆಳೆದ ಹುಡುಗಿಯರ ತಂದೆಯರು, ಸುಂದರಿಯರ ಗಂಡಂದಿರು, ರೋಟರಿ ಕ್ಲಬ್ಬು ಅಕ್ಕಪಕ್ಕ ನೆರೆಹೊರೆ ಅಂಗಡಿ ಶೆಟ್ಟಿ ವಿಶ್ವಾಸದಿಂದ ಇರುತ್ತಾರೆ. ಸ್ವಲ್ಪ ಹಿಂದು ಮುಂದಾಯಿತು ಕ್ಷಮಿಸಿರಿ. ಹೀಗೆ ಹೇಳಬೇಕಿತ್ತು - ತಾಳಿಯಿತ್ತಲ್ಲ ಇಬ್ಬರಿಗೂ ಅಚ್ಚುಮೆಚ್ಚಿನದಾಯಿತು. ನೀವು ಪ್ರೀತಿಯಿಂದ ಏನನ್ನಾದರೂ ನೋಡತೊಡಗಿದರೆ ಅದು ಬೆಳೆಯತೊಡಗುತ್ತದೆಂದು ನಂಬಿಕೆಯಿದೆ. ಮೊದಮೊದಲು ಅದರೊಂದಿಗೆ ಹೊಂದಿಕೊಳ್ಳುವುದಕ್ಕೆ ಕಷ್ಟವಾಗುತ್ತದೆ ಹೌದು. ಆಮೇಲೆ ಭಾರೀ ಸರಳ. ತಾಳಿಯಿತ್ತಲ್ಲ ಅವರಿಬ್ಬರ ಪ್ರೀತಿಯಿಂದಿರಬೇಕು - ಬೆಳಯತೊಡಗಿತು, ಹೀಗೆ:

ಪ್ರಸ್ತದ ದಿವಸ
ಮನೆತುಂಬಿದ ನೆಂಟರ ಕಣ್ಣಲ್ಲಿ,
ಅಶ್ಲೀಲ ಹನಿಮೂನೊಂದು ಹೊಳೆಯುವುದ ನೋಡಿ
ಕುಲುಕುಲು ನಕ್ಕು ಖುಶಿಖುಶೀ ಪಡುವಾಗ
ಹಾ -
ಮೈವಾಡದ ನೆನಪಾಯಿತು!

ಸ್ವಲ್ಪ ವಿಷಯಾಂತರವಾಗುತ್ತದೆ ಕ್ಷಮಿಸಬೇಕು. ಆದರೂ ಮಹತ್ವದ ಮಾತು ಬಿತ್ತು. ಅದಕ್ಕೇ ಹೇಳುತ್ತೇನೆ: ಅವನಜ್ಜ ಸಾಯುವಾಗೊಂದು ಕೋತಿಯ ಮೈಚರ್ಮ ಕೊಟ್ಟಿದ್ದ:

ತಗೊ ಮಗಾ
ಸಿಕ್ಕಿದೆಯಂತ ಸಿಕ್ಕಸಿಕ್ಕಲ್ಲಿ ಬಿಚ್ಚಬೇಡ,
ಹಡಬಿಯರ ಹರಿತ ಬೆರಳಿಗೆಚ್ಚರ ತಪ್ಪಬೇಡ
ಟೊಂಕದ ಬೆದೆಯ ಹದವರಿತು ತೋರಿಸು ನಿನ್ನ
ಹನಿಮಂತನವತಾರ, ಮರೆಯಬೇಡ ನೀನು
ಕೋತಿಗೆ ಕುಮಾರ.

ಆಗಲೆಂದನು ಅವನು |
ಮೈವಾಡವೆಂದು ಹೊಸ |
ಹೆಸರು ಕೊಟ್ಟನು ಅವನು |
ಧರಿಸಿಕೊಂಡನು ಮೈಗೆ |
ಮರವೇರಿದನು ಹೊಂಗೆ |
ಹುಣಸೆ ಮಾಮರ ಅತ್ತಿ |
ಹರಿದು ತಿಂದನು ಹತ್ತಿ |
ಸರಿಕರೆದುರಿಗೆ ಹಾಕಿ |
ಮೆರೆದಾಡಿದನು ಶೋಕಿ |
ಸ್ಕೂಲು ಕಾಲೇಜುಗಳ |
ವಾರ್ಷಿಕೋತ್ಸವ ನಿವಳ |
ಅವಕಾಶಗಳಲೆಲ್ಲ |
ಬಲ್ಲವರ ನಗಿಸಿದ |

ಕಾಲೇಜಿನಲ್ಲಿರಲು |
ಪುಟ್ಬಾಲ್ ಖಯಾಲಿ ಬಲು |
ಗೋಲು ಏಟಿಗೆ ನಾಲ್ಕು |
ಹೊಡೆದ ಹೊಡೆದಯ್ ಅವನ್ |
ಹುಡಿಗಿಯರ ಅರೆಡಜನ್ |
ತೊಡೆಯ ಬೆವರಿಸಿದ |

ಆ ಪೈಕಿ ಇಬ್ಬರಿಗೆ |
ಅವನ ಚಂಡಿಕೆಯೊಳಗೆ |
ಬೆರಳನಾಡಿಸಿದಂತೆ |
ಹಿಡಿದು ಎಳೆ ಎಳೆದಂತೆ |
ಕನಸಾಯಿತಂತೆ |

ಬಂತಂತೆ ಕರುಣೆ ಆ ಬಾಲೆಯರ ಕಣ್ಣ ಕನಸಿಗೆ ಮೈಯ ಹಸಿವಿಗೆ. ಅಂಗಾಂಗಗಳ ಸಂದುಗೊಂದಿಯ ಚಡಪಡಿಕೆಗೆ ಕೋತಿಯ ಮೈವಾಡ ತೊಟ್ಟು ರೂಮಿನಲ್ಲಿ ಫುಟ್ ಬಾಲವಾಡಿದ್ದನಂತೆ! ಅಂತೆ ಇದು ಹಳೆಯ ಕತೆ.

ಹೇಳಿದರ ಕತಿಗಿತಿ ಅಂದೀರಿ ನೆನಪಾಯಿತು ಪ್ರಸ್ತದ ದಿವಸ ಈ ಮೈವಾಡದ ನೆನಪಾಯಿತು. ತೊಟ್ಟ. ಹಾಸಿಗೆಯ ಮೇಲಿನ ಹೆಣ್ಣು ಹುಣಸೆ ಹಣ್ಣಿನ ಹಾಗೆ ಕಂಡು

ಅಕಾ ಅಕಾ ಅಂದು
ಗಪಗಪಾ ತಿಂದ
ಪಿತ್ತನೆತ್ತಿಗೆ ಏರಿ
ಹಾಸಿಗೆಗೆ ಬೆಂಕೀ ಹಚ್ಚಿ,
ಹಚ್ಚಿದ ಕಿಚ್ಚಿನಲ್ಲಿ ಫುಟ್ ಬಾಲನಾಡತೊಡಗಿದಾಗ -
ಸಂದುಸಂದುಗಳಲ್ಲಿ ಬೆಂಕಿಯ ಜಳ
ಬುಗ್ಗೆಂದು ಹೊತ್ತಿದಾಗ - ಘಮಘಮ ಗಾಳಿ ತುಂಬಿದ
ಬಿದಿರು ಮಳೆಯಂತೆ
ಅದುರಿ ಚೆದುರಿ ಚೆಲ್ಲಾಪಿಲ್ಲಿ ಒಡಮುರಿದು ಒಟ್ಟಾದಾಗ -
ಕುಡಿವರಿದ ತೋಳತೀಟೆಗೆ ಕೈಕಟ್ಟಿ
ಹುರಿಮಾಡಿ ಹೊಸೆವಾಗ
ಕಣ್ಣಿನ ತುಂಬ ಹಂಬಲವಿಂಬಾಗಿ ಸೂಸಾಡುವಾಗ

ಯಾರೋ ಓಡಿಬಂದು ಜಿಗಿದಾಡುವ ಕೋತಿಯನ್ನು ಹಿಡಿದು ಚೆನ್ನಾಗಿ ಬೆನ್ನು ಬಾರಿಸಿ ಕಿತ್ತಾಡಿದರು. ಕತ್ತಿಗೆ ಕೈ ಹಾಕಿ ಹಿಂದಕ್ಕೆಳೆದರು. ಏನು ಎಂತಂತ ಅನ್ನೋದರಲ್ಲಿ ಕೆನ್ನೆಗರಡೇಟು ಬಿಗಿದು ಮೈವಾಡ ಹಿಡಿದು -

ಯಾರೊ: ಏ ಕೋತಿ, ಸ್ವಲ್ಪ ಕಿರುಚೊ

ಅವನು: ಯಾಕಲೇ ಮಗನ ಬಾಯಿಗಿ ಬಂಧಾಂಗ ಆಡತಿ? ತಲಿಗಿಲಿ ನೆಟ್ಟಗಿಲ್ಲಾ? ನೀ ಯಾರೊ ಏನಂತ ಹೇಳ್ತೀಯೊ ಇಲ್ಲಾ ಪೋಲಿಸರಿಗಿ ಹೇಳಲೊ?

ಯಾರೊ: ಏ ಇನ್ನಷ್ಟು ಜೋರಿನಿಂದ ಒದರು.

ಅವನು: (ಇನ್ನೂ ಜೋರಿನಿಂದ) ಮತ್ತ ಅದನ್ನs ಅಂತಾನಲ್ಲೋ! ಯಾಕೆ ಬಾಯಾಗ ಹಲ್ಲ ಇದ್ದದ್ದ ಸಮ ಆಗವೊಲ್ದೇನ? ಸುಮ್ಮನ ಹೊರಬೀಳ್ತೀಯೊ, ಹಲ್ಲ ಕೀಳಂತೀಯೊ?

ಯಾರೊ: ಇನ್ನ ಸಾಕು ಸುಮ್ಮನ ಬಿದ್ದಕೊ.

ಮೈವಾಡ ಸುಮ್ಮನೆ ಕೆಳಗೆ ಬಿತ್ತು. ಮೊದಲಿನ ಕೆಲನಿಮಿಷ ಕೈಕಾಲು ಅಲುಗಿಸಲಿಕ್ಕೂ ಭಯ. ಎದ್ದು ಲೈಟ್ ಹಚ್ಚಿದ. ಆಮೇಲಾಮೇಲೆ ನೋಡಿದರೆ ತನ್ನ ಮೈಕಪ್ಪಿನೊಂದಿಗೆ ಹೆಣ್ಣಿನ ಮೈ ಬಿಳಿ ವ್ಯತ್ಯಾಸಗೊಂಡಿತ್ತು. ಕಾಣದ ಅಂಗಾಂಗಳ ಕಲ್ಪಿಸಿ ಇಬ್ಬರಿಗೂ ಅಂಟಿಸಿಕೊಂಡು ಇಡಿಯಾಗಬಯಸಿದ. ತನ್ನಂತೇ ಕೈಬಾಯಿ, ತನ್ನಂತೇ ಕಿವಿ ಮೂಗು ತನ್ನಂತೆಯೇ ಅಂತ ಅಂತೆವೋಲ್ ಹಾಗೆಗಳ ಚಾಚಿ ಒಂದಾಗಬಯಸಿದ. ಎಚ್ಚತ್ತ ಅವಳು 'ನೋಡಬಾರದೆ ಮೊಲೆಯಷ್ಟು ಊದಿಕೊಂಡಿದೆ' ಅಂದಳು. 'ನಿನಗೆ ದಣಿವಾಗಿಲ್ಲವೆ' ಅಂದ. ಮಲಗಿದ. ಮಣಮುಕ್ಕ ಹಾವಿನ ನೆನಪಾಯಿತು:

ಮಣಮುಕ್ಕ ಹಾವಿಗೆ ಎರಡೂಕಡೆ ಎರಡು ತಲೆ
ಮೈತುಂಬ ಕಾಲು, ತಿನ್ನುವುದು ಮಣ್ಣ.
ಸ್ವಂತಕ್ಕೆ ಹುತ್ತಿಲ್ಲ ಅದೂ ಸಾಲದಕ್ಕೆ
ಕಣ್ಣಿಲ್ಲ, ಗೊತ್ತಿಲ್ಲ ಸ್ವಂತ ಬಣ್ಣ.

ಅವರಿವರ ಹುತ್ತದಲಿ ನುಗ್ಗಿ ಐಷಾರಾಮ
ಐಹಿಕದ ಬಗೆಗಷ್ಟು ಯೋಚಿಸೋಣ
ಕಾಣದೊಡೆಯರ ಏಟು ಒದೆ ತಿವಿತ ಮೂದಲಿಕೆ
ಲೋಕವೇ ಇಂತೆಂಬ ಮುಸಾಫಿರ ತೀರ್ಮಾನ.

ಇದ್ದೆರಡು ತಲೆಯಲ್ಲಿ ಬಾಲ ಯಾವುದು ಎಂದು
ಎರಡಕ್ಕು ಕೊನೆಯಿರದ ಪರದಾಟವೆ.
ಮುಂದೆ ಹೊರಟದ್ದೆ ತಲೆ ಹಿಂದೆ ಇದ್ದುದೆ ಬಾಲ
ಹಿಂದುಮುಂದುಗಳ ನಿರ್ಧರಿಸಬಹುದೆ?

ಹುತ್ತದಲಿ ತಲೆಯೊಂದು ಹೊಕ್ಕು ಗುದ್ದುತ್ತಿರಲು
ಇನ್ನೊಂದು ಕೂರುವುದು ಯೋಚಿಸುತ್ತ
ಕಲೆ ಗಣಿತ ಜ್ಯಾಮಿತಿಯ ಪರಿಮಿತಿಯ ಪರಿಘಕ್ಕೆ
ಸುತ್ತಿ ಬರೆವುದು ಸೊನ್ನೆ ತನ್ನ ಸುತ್ತ.

ಸೊನ್ನೆಯಂಚಿನಗುಂಟ ಬಣ್ಣಬಣ್ಣದ ಭ್ರಾಂತಿ -
ಬಾ ರಾಜಾ ಏನು ಸುಖ ತಾಜಾ ತಾಜಾ
ಎಲ್ಲೋಡಿ ಅಡಗಿದರು ಅಲ್ಲಿಂದ ಎಳೆಯುವುದು
ಮಣ್ಣೊಳಡಗಿದ ತಲೆಗೆ ಮಣ್ಣಿನ ಮಜ.

ಅತ್ತ ಎಳೆಯುವುದದು ಇತ್ತ ಇದು ಎಳೆಯುವುದು
ಎಳೆತದಲ್ಲಿದ್ದೀತೆ ಸುಖದ ನೋವು?
ನರನರಕವಾಗುತ್ತ ಅದಕಿದೂ ಇದಕದೂ
ಸಂಶಯವೆ ನಾಚಿಕೆಯೆ ಶೇಷವೇನು?

೪

'ಬೆಳಿಗ್ಗೆದ್ದಾಗ ಮೊಲೆಯೂದಿ ಕೊಡದಷ್ಟಾಗಿತ್ತು ಸ್ವಾಮೀ ಕೊಡದಷ್ಟಾಗಿತ್ತು. ತಾಳಿಯಿತ್ತಲ್ಲ ತಾಳಿ - ಅದರ ಕರಿಮಣಿಗಳು ಪೇಪರ್ ವೇಟ್ ದಷ್ಟು ದೊಡ್ಡ ಕರೀಕರೀ ಗುಂಡುಗಳಾಗಿದ್ದವು ಸ್ವಾಮೀ ಗುಂಡುಗಳಾಗಿದ್ದವು. ಅದರ ಮಾರನೇ ದಿನ ಇನ್ನೂ ಇಷ್ಟು ದೊಡ್ಡದಾಗಿ ಕಟ್ಟಿದ ಕಟ್ಟೆಯಾಗಿ ನಿಂತ ಗೋಡೆಯಾಗಿ ಬೆಳೆಬೆಳೆದು ಮನೆಯಲ್ಲೊಂದು ಕೋಣೆ ಖರ್ಚಿಲ್ಲದೆ ಹೆಚ್ಚಾಯಿತು ಸ್ವಾಮೀ ಕೋಣೆ ಹೆಚ್ಚಾಯಿತು. ಗೋಡೆಯಾಚೆಗೆ ಅವಳ ಮುಖ, ಈಚೆ ಮೊಲೆ! ಮುಖವಿರುವ ಕೋಣೆಯಲ್ಲಿ ಏನಿದೆಯಂತ ಅತ್ತ ಅವನಿಗೂ ಗೊತ್ತಿಲ್ಲ, ಇತ್ತ ನಮಗೂ ಗೊತ್ತಿಲ್ಲ.

ಏನಿರಬಹುದು?
ಐಲೆಂಡಿರಬಹುದು

ಭೂಗೋಳ ಇತಿಹಾಸ ಕುದುರೆಸವಾರ ಕೈಕಾಲಾಳು ಚೇಟಿ ಚಾರ ಮೊಳಕಾಲನೂರಿದ ರಾಜಕುಮಾರ ಪರಿಪರಿಯುಪಚಾರ ಪರಿಚಾರ... ಕನವರಿಕೆಯಂತೆ ಆಗೀಗ ಅಲ್ಲಿಂದ ಮಾತು ಕೇಳಿಸುವುದುಂಟು. ಬರೀ ಪ್ರತ್ಯಯಗಳು. ಅವನ ಗೊರಕೆ ಹೆಚ್ಚಾದಂತೆ ಅಲ್ಲಿಯ ನಗು ಕೇಕೆ ಗದ್ದಲ ಗಲಾಟೆ ಹೆಚ್ಚುತ್ತದೆ; ಗೊರಕೆ ಬಿಟ್ಟನೋ ಮೊಲೆಗೆ ನವಿರೆದ್ದು ಒದ್ದೆಯಾಗಿ ಸುಸೂಕ್ಷ್ಮ ಆಕುಂಚನ ಪ್ರಸರಣ ಉಕ್ಕುಸೊಕ್ಕು ಗರ್ದೀಗಮ್ಮತ್ತಾಗಿ

ಅಬ ಅಬಾ ಕಾ ಅಲ್ಲಿ ಕಾ ಇಲ್ಲಿ
ಎಲ್ಲಿ ನೋಡಿದರಲ್ಲಿ ಚಿಗುರಿರುತ್ತದೆ.

ಯಾಕೆ ವಿಷಯಾಂತರವಾಯಿತೆಂದು ಗೊತ್ತಾಯಿತಲ್ಲ. ಕಾವ್ಯದ ಆರಂಭದಲ್ಲಿ ಮಾಮೂಲು ಬಾಗಿಲು ತಟ್ಟಿದನಲ್ಲ, ಮಾಮೂಲು ಮೊಲೆಬಂದು ಬಾಗಿಲು ತೆರೆಯಿತಲ್ಲ - ಮಾಮೂಲಿನಂತದರ ತುದಿ ಅವನ ಕಿವಿ ತುರಿಸಿ ಮಾಮೂಲು ನಗೆನಕ್ಕು ಮಾಮೂಲು ಒಳಬಂದು ಮಾಮೂಲು ಬಾಗಿಲಿಕ್ಕಿಕೊಂಡ.

೫

ಮಾಮೂಲುಗಳಾಗಿ ರಾತ್ರಿಯಾಗಿ ಮೊಲೆ ಗುಡುಗಿತು: ಕರಿದೇವರೆಲ್ಲಿ? (ಕರಿದೇವರೆಂದರೆ ಆ ಕುಟುಂಬದ ಉಪಭಾಷೆಯಲ್ಲಿ ಮೈವಾಡ ತೊಟ್ಟಾಗಿನ ಅವನು ಎಂದರ್ಥ). ಮನಸ್ಸಿರಲಿಲ್ಲ, ಸುಮ್ಮನಾಗಿ ಕೂತು ಮಾಮೂಲಿನಂತೆ ಅಲ್ಲಲ್ಲಿ ಹರಿದ ಮೈವಾಡ ಹೊಲಿದು ರಿಪೇರಿ ಮಾಡತೊಡಗಿದ. ಮೊಲೆ ಮತ್ತೆ ಮತ್ತೆ ಗುಡುಗಿ ಪೀಡಿಸತೊಡಗಿತು. ಎದ್ದುಬಂದು ಮೈವಾಡ ತೊಡಿಸಿತು. ಮೇಲೆ ಕೂತು ನಿಧನಿಧಾನ ಹುಪ್ಪಾಹುಮ್ಮಾ ಜೈಬಜರಂಗಾ ಸುರುಮಾಡಿದ.

ಇತ್ತ ಇನ್ನೊಂದು ತಲೆ ಸಿಗರೇಟು ಹೊತ್ತಿಸಿ ಯೋಚಿಸತೊಡಗಿತು:

ಈ ಸಿಗರೇಟು ತಾನು ಯಾವಾಗಲೋ ಸೇದಿದ್ದೆನಲ್ಲಾ! ನಿನ್ನೆ-ಮೊನ್ನೆ-ಬಹುಶಃ ಚಿಕ್ಕವನಿದ್ದಾಗ - ತನ್ನಜ್ಜ ಮುತ್ತಜ್ಜ - ಹೊಗೆ ಕೂಡ ದಿನನಿತ್ಯದಂತೇ ಹಾರಿ ಇಂಗಿಹೋಯ್ತು. ತನಗೆ ಸಾವಿರಾರು ವರ್ಷ ವಯಸ್ಸಾಗಿರಬೇಕೆನ್ನಿಸಿತು. ತನ್ನ ಮೀಸೆ ಥೇಟು ತನ್ನಪ್ಪನಂತೆ ಅವನ ಮೀಸೆ ಅವನಪ್ಪನಂತೆ ಅವನಪ್ಪನ ಮೀಸೆ ಅವನಪ್ಪನಂತೆ - ಬಹುಶಃ ಈ ಮೀಸೆಯಗುಂಟ ಇಳಿದರೆ ಮೈತುಂಬ ಮೀಸೆಯ ಮೈವಾಡದಂಥ ವ್ಯಕ್ತಿ ಸಿಕ್ಕಬಹುದು, ಆತ ಹೇಳಬಹುದು: ಹೇಗಿದ್ದೀ? ಮದುವೆಯಾಯ್ತ? ಮಕ್ಕಳ ವಂಶೋದ್ಧಾರಕರು? ನಾನೊಂದು ಪಡಿಯಚ್ಚು ಕೊಟ್ಟಿದ್ದೆನಲ್ಲ, ಅದಿನ್ನೂ ಇದೆಯಾ? ಜೋಪಾನವಾಗಿ ಮುಂದುವರಿಸು. ಇರಲಿ ಗೌರವ ಹಿರಿಯರ ಬಗ್ಗೆ ನನ್ನ ಬಗ್ಗೆ ಕುಲದ ಬಗ್ಗೆ ಪರಂಪರೆಯ ಬಗ್ಗೆ - ಹೀಗನ್ನಬಹುದಾತ. ಅದಕ್ಕೇ ಅನಿಸುತ್ತದೆ: ನನ್ನ ಕಣ್ಣಿಗೆ ಮೂಗು ನಾಲಗೆಗೆ ಚರ್ಮ ಮನಸ್ಸಿಗೆ ಸಾವಿರಾರು ವರ್ಷ ವಯಸ್ಸು. ಇನ್ನು ಮೇಲೆ ಇತಿಹಾಸ ಬೆಳೆಯುವುದಿಲ್ಲ, ಡಿಕ್ಷನರಿ ಬೆಳೆಯುವುದಿಲ್ಲ. ಅಕ್ಷರಗಳ ಸಂಖ್ಯೆಯಲ್ಲಿ ಬೆಳೆದಿದೆ? ಥತ್.

ಕುಟುಂಬ ದೇಶ ಸಮಾಜ ದೇವರು ಹೆಣ್ಣು - ಛೇಛೇ ಈ ಪದಗಳ ಅರ್ಥವೇನು? ಡಿಕ್ಷನರಿಯಲ್ಲಿದೆ ಅಲ್ಲವೆ? ಜನಗಳೆಲ್ಲ ಡಿಕ್ಷನರಿಯ ಶಬ್ದಗಳ ಹಾಗೆ ಕಾಣುತ್ತಾರೆ, ಡಿಕ್ಷನರಿಯೇ ಇದ್ದಮೇಲೆ ಈ ಜನಗಳೇಕೆ ಇರಬೇಕು? ಅಥವಾ ಈ ಜನಗಳಿದ್ದರೆ ಡಿಕ್ಷನರಿಯೇಕೆ ಬೇಕು? ಅಥವಾ ಅವರಿಗೆ ಡಿಕ್ಷನರಿಯ ಅರ್ಥ ಬೇರೆ ಇರಬಹುದೆ? ಅಥವಾ ಇವರಿಗೆ ಲೋಕದಲ್ಲಿ ಮತ್ತು ಡಿಕ್ಷನರಿಯಲ್ಲಿ - ಹೀಗೆ ಎರಡೆರಡು ಅಸ್ತಿತ್ವಗಳಿವೆಯೇ? ಓಹ್ ಡಿಕ್ಷನರಿಯ ಅರ್ಥಕ್ಕೆ ಹುಟ್ಟಿದ ಮನುಷ್ಯರೆಷ್ಟು ಬೋರ್ ಮಾಡುತ್ತಾರೆ! ಅಥವಾ ಮನುಷ್ಯ ಅಂದರೇನು -

ಸಣ್ಣ ಸೊನ್ನೆಯ ಮೇಲೆ ಥರಥರ ನಮೂನೆ ಬಣ್ಣ.
ಬಳಿದು ಊದಿ ಉಬ್ಬಿಸಿ, ಆಮೇಲೆ ಬೇಕಾದರೆ
ಕೈ ಮೈ ಕಾಲು ಬರೆದು ಕಣ್ಣು ಮೂಗು ಕೊರೆದು
ಶೀತೋಷ್ಣ ಇಲಾಸ್ಟಿಕ್ ಪ್ರಸರಣ ಆಕುಂಚನ
ಚುಂಬನ ಘರ್ಷಣ ಆತನೀತನವಳಿವಳ
ಹೆಸರಿಟ್ಟುಸಾಮಾಜಿಕವಾಗಿಸಿದರೆ
ಒಪ್ಪಿಕೊಳ್ಳುತ್ತೇವೆ, ಪರರ ಒಪ್ಪಿಸುತ್ತೇವೆ.

ಇದೂ ಡಿಕ್ಷನರಿಗೆ ಹುಟ್ಟಿದ ಅರ್ಥವಲ್ಲವೆ?

ಬುದ್ಧಿವಂತಿಕೆ - ಎಂಥ ಚಿತ್ರಹಿಂಸೆ ಕೊಡುತ್ತದಂತ! ಗಾಯಗಳೆದ್ದಲ್ಲೆಲ್ಲ ಜ್ಞಾನದ ತಂತು ಹರುದಾಡುವಂತೆ ಮಾಡುತ್ತದೆ. ಕಾಣಬಾರದಲ್ಲಿ ಗಾಯಗಳು ಕಾಣತೊಡಗುತ್ತವೆ. ನೋಡನೋಡುವುದರಲ್ಲಿ ಅವು ಹುಣ್ಣಾಗಿ ಒಡೆದು ಕೀವು ರಕ್ತ ಬಸಿಯಾತೊಡಗುತ್ತದೆ. ನಿಜ ಹೇಳಬೇಕೆಂದರೆ ಹುಣ್ಣು ಉಸಿರಾಡುತ್ತದೆ, ಮಾತಾಡುತ್ತದೆ, ತಿನ್ನುತ್ತದೆ, ನಗಬಲ್ಲದು ಕೂಡ ತನ್ನ ನೋಡಿ, ಮನೆ ಮಾರು ರಸ್ತೆ ಪೇಟೆ ಪುಸ್ತಕ ಜನ ಡಿಕ್ಷನರಿ ನೋಡಿ. ಅದು ಹ್ಯಾಗೆ ಇಷ್ಟೊಂದು ಡುಪ್ಲಿಕೇಟ್ ಪ್ರತಿ ಸಾಧ್ಯವಾಯ್ತು? ಜನಾಂಗ ಜನಾಂಗ ಹೋಗಲಿ, ದೇಶದೇಶ ಹೋಗಲಿ, ಭಾಷೆ ಭಾಷೆಗಳಲ್ಲಿ ಕೂಡ ವ್ಯತ್ಯಾಸ ಉಳಿಯದ್ದಿದ್ದರೆ ಹೇಗೆ? ಇಂಗ್ಲಿಷ್ ಮಾತಾಡಿದರೆ ಕನ್ನಡದ ಹಾಗೆ ಕೇಳಿಸುತ್ತದೆ. ಕನ್ನಡ ಇಂಗ್ಲಿಷ್ನಂತೆ ಸಂಸ್ಕೃತದಂತೆ ಜರ್ಮನ್ ಚೀನಾದಂತೆ....

ಸಿಗರೇಟು ಸುಟ್ಟು ಬೂದಿಯಾಗಿ ಕೆಳಗೆ ಬಿತ್ತು, ಕೈ ಸುಡಲಿಲ್ಲ. ಯಾಕೆಂದರೆ ಸುಟ್ಟು ಸುಟ್ಟು ಕೈ ದಡ್ಡು ಬಿದ್ದಿತ್ತು. ಮೈವಾಡದ ಕಡೆ ನೋಡಿದ:

ಮೊಲೆಯ ಚೂಪುತುದಿ ಬಾಯೊಳಗಿತ್ತು
ಕೈಯಿಂದ ಕಾಲಿಂದ ತಬ್ಬಿಕೊಂಡಿತ್ತು
ಗಿರಗಿರ ತಿರುಗುತ ಏರುತ ಇಳಿಯುತ
ಜಾರಿ ತೂರಿ ಹಾರ್ಯಾಡಿ ಬಾಲವಿಲ್ಲದ ಕುಣಿಯುತ
ತೇಪೆಯ ತೊಗಲಿನ ಬಾಲವಿಲ್ಲದ ಕಪಿ
ಮೊಲೆಯ ಸುತ್ತುತಿತ್ತು - ಸೀಪುತ
ಮೊಲೆಯ ಸುತ್ತುತಿತ್ತು ||

ಇದೆಲ್ಲದರ ಅರ್ಥ ಕಂಡುಹಿಡಿಯಲೇಬೇಕೆಂದು ಎದ್ದ, ಹೋಗಿ ಕುಣಿಯುವ ಕೋತಿಯ ಮೈವಾಡ ಕಳಚಿದ. ಮುದ್ದೀ ಮಾಡಿದ. ಬಗಲಲ್ಲಿ ಹಿಡಿದ. ಮಧ್ಯರಾತ್ರಿಯಾಗಿತ್ತು ಹೊರವಂಟ. ಮೊಲೆ ಗುರ್ ಎಂದಿತು. ದಾದು ಮಾಡದೆ ಹೊಂಟ. ಸಿಕ್ಕಾಪಟ್ಟೆ ಕಿರುಚುತ್ತ ಬೆನ್ನುಹತ್ತಿತು. ಓಡಿದ. ರಸ್ತೆಯಲ್ಲಿ ನಿಂತಿದ್ದ ಎತ್ತಿನ ಬದಿ ಅಡಗಿದ. ಎತ್ತು ಓಡತೊಡಗಿತು, ಅದರೊಂದಿಗೆ ಇವನೂ ಓಡಿದ. ಓಡಿದಲ್ಲೆಲ್ಲ ಗೋಡೆಯಿತ್ತು. ಗೋಡೆಯೆಂದಮೇಲೆ ಅದಕ್ಕೊಂದು ಬಾಗಿಲಿರಲೇ ಬೇಕು. ಎಲ್ಲಿ ಬಾಗಿಲು? ಮುಂದಿರಬಹುದು. ಓಡಿದ. ಆ ಮುಂದಿರಬಹುದು, ಓಡಿದ ಓಡಿದ ಓಡಿದ. ಅದೋ ತುದಿಮೊದಲಿಲ್ಲದ ಭಯಂಕರ ಗೋಡೆ. ಈ ಗೋಡೆಯನ್ನು ಈ ಮೊದಲು ಗಮನಿಸಲೇ ಇಲ್ಲವಲ್ಲ! ಓಡುತ್ತೋಡುತ್ತ

ಗೋಡೆ ಒಡೆಯುವುದು ಸಾಧ್ಯವೇ ಎಂದು ತಲೆಯಿಂದ ಹಾದ. ನೋವಾಯಿತಷ್ಟೆ. ಮತ್ತೆ ಓಡಿದ. ಓಡಿ ಓಡಿ ಓಡಿ ಬೆಳಗಾಯಿತು. ನೋಡಿದರೆ ಎಲ್ಲಿದ್ದರೋ ಅಲ್ಲೇ, ಮನೆ ಮುಂದೇ ಇದ್ದರು. 'ಹಾಗಿದ್ದರೆ ಬೆಳತನಕ ಓಡಿದ್ದು ಸುಳ್ಳೆ? ಏನಿದರ ರಹಸ್ಯ?' ಎಂದ -

೬

ಹೇಳಿದರ ಕತಿಗಿತಿ ಅಂದೀರಿ ದೇವರೂ,
ಹೇಳಲೆ? – ನಾ ಬಲ್ಲೆ -
ನೀವು ಹೊಗಳುವ ಕೀರ್ತಿಗೆ ಅರ್ವಾಡಿಗೆ
ಹೊದಿಸುವ ಶಾಲಿಗೆ ಅಂಟಿಸುವ ಪದ್ಮಶ್ರೀಗೆ
ತಕ್ಕ ಹಾಗೆ ಸ್ವಾಮೀ ಈ ತನಕ ಬದುಕಿನ
ಮೈಮ್ ಮಾಡಿದ್ದೇನೆ.
ನನ್ನ ನಗೆ ಜೋಕು ಮಾತು ಸಂಸ್ಕೃತಿ ನಾಗರೀಕತೆ
ಎಸ್ ನೋ ಗಳನ್ನೆಲ್ಲಾ ಸಾಮಾಜಿಕವಾಗಿಸಿದ್ದೇನೆ,
ನಿಮ್ಮ ಸಣ್ಣ ಜೋಕಿಗೆಷ್ಟೊಂದು ನಗೆ ನಕ್ಕು
ಸಕ್ಕರೆಯ ಭ್ರಾಂತಿಗಳನುಂಡುಂಡು ತೇಗಿದ್ದೇನೆ,
ಕುಣಿದಿದ್ದೆನೆ ಬಣ್ಣ ಬಳಿದತ್ತಿದ್ದೇನೆ
ಸಾಕು
ನಾನೀಗ ನನ್ನ ಖಾಸಗಿಯನ್ನು ಕಾಣಬೇಕು.
ಮಾತಾಡಬೇಕು ಅದರೊಂದಿಗೆ ನಿಜ ನೋಡಬೇಕು.
ಶಬ್ಧವೇ ನನ್ನ ಶಬ್ಧವೇ
ತೋರು ನಿಜವನ್ನ
ನನ್ನಳತೆಯ, ಮನುಷ್ಯನಳತೆಯ ಸತ್ಯವನ್ನ.

೭

ಓಡಿದ್ದರ ರಹಸ್ಯ ಕೇಳಿದ್ದನಲ್ಲ - ಎತ್ತು ಹೇಳಿತು:

"ಏನು ಹೇಳಲಿ ಸಾಬರs ಹೆಂಗ ಹೇಳಲಿ? ಅತ್ತರ ಅಗ್ಗ, ನಕ್ಕರ ನಗ್ಗೇಡ, ನಗೋವಾಗೆಲ್ಲ ಕಣ್ಣಾಗ ನೀರ ತುಂಬತಾವ, ಏನ ಹೇಳಲಿ ಸಾಬರs ಹೆಂಗ ಹೇಳಲಿ? ಅಂದುಕೊಂಡಿದ್ದೆ: ನಾ ಗಾಣದೆತ್ತು, ನನ್ನ ಯಾರೋ ಹೂಡ್ಯಾರ, ಕಣ್ಣ ಕಟ್ಯಾರ, ಸುಳ್ಳಲ್ಲ ಖರೆಖರೆ ನಂಬಿ ತಿರುಗಿದೆ, ತಿರುಗಿದೆ, ತಿರುಗೇ ತಿರುಗಿ ಗುದಮುರಿಗಿ ಹಾಕಿದೆ. ಅಂದುಕೊಂಡಿದ್ದೆ: ತಿರುಗೋದಕ್ಕೊಂದ ಗುರಿ, ಗೊತ್ತ ಐತಿ. ನಾವು ರಾತ್ರಿ ನೋಡಿದಿವಲ್ಲ; ಆ ಗೋಡೆಯಾಚೆ ನನ್ನ ಹೂಡಿದ ಗಾಣಿಗ್ಯಾ ಇದ್ದಾನ. ಅದs ನನ್ನ ಗುರಿ,ಅಲ್ಲಿ ಬರೀ ಹಸುರು ಅಥವಾ ಎಲ್ಲಾ ಪ್ರಶ್ನದ ಉತ್ತರ ಅವ. ಈಗ ನನ್ನ ಮೈಮ್ಯಾಲ ನೊಣ ಕೂರತಾವ ನೋಡ್ರಿ ಆನೊಣಕ್ಕ ಅಲ್ಲಿ ಜಾಗಾನs ಇಲ್ಲ. ಅಥವಾ ನೊಣ ಇರಬಹುದೋ? ನೊಣ ಇದ್ದರ ಹುದಲ ಖಾತ್ರಿ. ಗಾಣಿಗ್ಯಾನ ಏಟ ಸಹಿಸಬಹುದು; ಈ ನೊಣ ಮಾತ್ರ ಸಹಿಸೋದು ಸಾಧ್ಯs ಇಲ್ಲ ತಗೀರಿ. ನೊಣ ಅಂದರ ಅಂತಿಂಥ ನೊಣ ಏನ್ರಿ? ಅವುಗಳ ಮೋತಿಗೆ ಕನಿಷ್ಠ ಪಕ್ಷ ಜೋಡಸೂಜಿ ಇರಬೇಕು. ಇವೆಂಥಾ ಜಾಣ ನೊಣ ಗೊತ್ತೇನ್ರಿ? ಮೊದಮೊದಲು ಸಣ್ಣಾಗಿ ಚುಚ್ಚಿ ಚುಚ್ಚಿ ಅಕ್ಕೀಕಾಳಿನಷ್ಟು, ಆಮ್ಯಾಲತಾವs ಹೊಕ್ಕ ಹೊರಬರೋವಷ್ಟು ಹುಣ್ಣ ಮಾಡಿ ಹಾರ್ಯಾಡತಾವ. ಮಾಡಿದ ತೂತನ್ನ ಸ್ವಂತಕ್ಕ ಮನಿಮಾಡಿಕೊಂಡು ಮರಿಹಾಕಿ ಮೂರು ಸಾಕು ಎರಡು ಬೇಕಿನ ಚಿಕ್ಕ ಚೊಕ್ಕ ಸಂಸಾರ ಮಾಡಿಕೊಂಡು ಬದಕತಾವ. ನಾನೇನೂ ಸುಮ್ಮನಿರೋಣೆಲ್ಲರಿ ಮತ್ತ; ಬಾಲದಿಂದ ಹೊಡೀತೀನಿ. ಹೊಡೆದಾಗೊಮ್ಮಿ ಸಾಯತಾವ, ಹಾರ್ಯಾಡತಾವ ಮತ್ತ ಬರತಾವ - ಛೇ ಛೇ ಈ ಸಂಸಾರಗಳಿಂದ, ನೋಡ್ರಿ ಸಾಹೇಬರ ನನ್ನ ಮೈ ಚರ್ಮ ಈಗ ಗೋಣೀ ಚೀಲಧಾಂಗ - ಒಣಗಹಾಕಿದ

ಮೀನ ಬಲೀ ಹಾಂಗ ಆಗೇತಿ ನೋಡರಿ. ಬೇಕಾದ ಜಿದ್ದ ಕಟ್ಟಿರಿ, ನನ್ನ ಮೈಮ್ಯಾಲ ಸಾವಿರ ಸಂಸಾರ ಅವs ನೋಡ್ರಿ. ಯಾಕಂದರ ನಡೀಲಿ, ಓಡಲಿ ಕನಿಷ್ಠ ಒಂದು ಸಾವಿರ ಕಡೆ ನನ್ನ ಮೈ ನೋಯತ್ತೈತಿ!

ಇದಕ್ಕಲ್ಲರಿ ನನಗ ಸಿಟ್ಟು ಬರೋದು - ನನ್ನ ಮೈಮ್ಯಾಲ ಕೂರತಾವ, ಕೂರಲಿ; ನನ್ನ ಮಾಂಸ ತಿಂತಾವ, ತಿನ್ನಲಿ - ಅದರ ಅಸಹ್ಯ ಕಿರಚತಾವ ನೋಡ್ರಿ - ಛೇಛೇ ಶಾಸ್ತ್ರೀಯ ಸಂಗೀತಕ್ಕ, ಸುಬ್ಬಲಕ್ಷ್ಮಿ ಪೂರ್ವಿ, ಛಾಯೋನಟದ ಜೋಷಿ, ಮನ್ಸೂರರ ಭೈರವಿ, ಖಾನರ ಗುಣಕಲಿಗೆ ತಲಿಹಾಕಿದ ಮಗಾ ನಾನು. ಅಂದರ ನಾ ಹೇಳೋದಿಷ್ಟು ಸಾಹೇಬರಃ ನೋವಿಗೇನೂ ಅರ್ಥ ಇಲ್ಲಂತೀರೇನು?

೮

ನಿನ್ನಿ ಮತ್ತ ಕಾಡಿಗೆ ಹೋಗಿದ್ದೆಃ ಇಲ್ಲೆ ಸನೇದಾಗೊಂದ ಕಾಡ ಐತಿ, ಸಡವಾದಾಗ ನೀವು ಒಮ್ಮಿ ಹೋಗಿ ಬರ್ರಿ ಬೇಕಾದರ. ನೀವು ಭಾಳಂದರ ಟ್ರೇನಿನಾಗ ಕೂತಾಗ ಕಾಡ ನೋಡಿದವರು. ನೆಹರೂ ಕೋಟಿನ ಮ್ಯಾಲ ಮಾತ್ರ ಹೂ ನೋಡಿದವರು. ನೀವು ಹೆಂಗಸರಿಗೆ ಹೋಲಿಸೋ ಬಳ್ಳಿ, ಅವೆಲ್ಲ - ಈ ಕಾಡಿನಲ್ಲಿ ಅಲ್ಲ. ನೆನಪಿನಾಗಿಡರಿಃ ಮರ ನುಂಗೋ ಬಳ್ಳಿ, ಹುಲಿ ತಿಂಬೋ ನವಿಲು, ಅಯ್ಯೋ ಇರಿವೀಯಂಥಾ ಇರಿವಿಗೆ ಸಿಟ್ಟ ಬರತ್ತೈತ್ರಿ - ಈ ಕಾಡಿನಾಗ!

ನೀವು ಒಮ್ಮಿ ಹೊಕ್ಕಿರೋ ನಿಮಗ ಅನ್ನಸ್ತದಃ ಈ ಕಾಡು ನನಗ ಮಾತ್ರ ತನ್ನ ರಹಸ್ಯ ತೋರಸ್ತದಲ್ಲವ? ಅಂತ. ಆದರ ಅದಲ್ಲ, ಖರೇ ಅಂದರ ಅದು ಒಳಗೊಳಗs ಅಂದಕೊಳ್ಳತದಃ ಮೂರ್ಖ, ನಾ ಜಗತ್ತಿನಾಗಿದ್ದದ್ದೆಲ್ಲಾ ಮುಟ್ಟಿದವಳು, ಅಪ್ಪಿಕೊಂಡವಳು. ಅವರಿವರೆನ್ನದೆ ಎಲ್ಲರಿಗೂ ತೆರೆದಿಟ್ಟುಕೊಂಡವಳು. ನೀ ಕಂಡು ಕೇಳರಿಯದ ಪಾಪ ಮಾಡಿದವಳು , ಪುಣ್ಯ ಮಾಡಿದವಳು - ಅಂತ. ಅಷ್ಟs ಅಲ್ಲರಿ - ತನ್ನ ಮೀಸಲ ಒಡಪದ ಅರ್ಥ ನಿಮಗ ಮಾತ್ರ ತೆರೆದಿಟ್ಟಾಂಗ, ನಿಮ್ಮನ್ನು ಬಿಟ್ಟ ಉಳಿದವರನ್ನೆಲ್ಲಾ ನೋಡಿ ಅಪಹಾಸ್ಯ ಮಾಡಿಧಾಂಗ ನಾಟಕ ಮಾಡತ್ತೈತಿ. ನೀವು ಈ ನಾಟಕ ನಂಬಿದರೋ ಕಾಡಿನಾಚೆ ಇರೋದೆಲ್ಲ ಮಾಯೆ. ಎಲ್ಲಿ ತೊಂದರೆ ಅಂದರ - ನೀವೆಷ್ಟು ಆಳಕ್ಕಿಳಿದರೂ ಇದರ ತಳ ಮುಟ್ಟಿಲ್ಲ ಅಂತ ಅನ್ನಿಸಿ ಇಳಿಯೋ ಹಂಬಲ ಬರಬರತ ಜಾಸ್ತಿಯಾಗಿ ನೀವs ಕಾಡಾಗತೀರಿ, ಕಾಡs ನೀವಾಗತೀರಿ. ಆಯಿತಲ್ಲ, ನಿಮ್ಮನ್ನೀಗ ಕಾಡಿನಿಂದ ಬೇರ್ಪಡಿಸೋದಂದರ ನಿಮ್ಮನ್ನs ಖೂನಿ ಮಾಡಿಧಾಂಗ! ಏನಂತೀರಿ?

ಆದರ ಖರೋಖರಂದರ, ಸಾಹೇಬರ ಈ ಕಾದಿಗೆಷ್ಟು ಮಿತಿ ಅವ ಗೊತ್ತೇನ್ರಿ? ಒಂದ ದಿನಧಾಂಗ ಇನೊಂದ ದಿನಾ ಇರೋದಿಲ್ಲಾಂತ ಅನ್ನಸ್ತದಲ್ಲ - ಅದೆಲ್ಲಾ ಸುಳ್ಳರಿ ಸಾಹೇಬರ ಸುಳ್ಳು. ಆದರ ಕಲರ ಕಾಂಬಿನೇಶನ್ ಭಾಳ ಕಮ್ಮಿ. ಅಷ್ಟಾಗಿ ಪ್ರಗತಿ ಬದಲಾವಣೆ ಅಂತೀರಲ್ಲ - ಸಾಧ್ಯs ಇಲ್ಲ. ಸಸಾರ ಮಾಡಿ ಹೇಳಲ್ರಿ? ಮೂರು ಋತುಮಾನ ಅವ. ಈ ಕಾಡಿನ ಹತ್ತಿರ ಮೂರ ಬಣ್ಣ ಅವ. ಒಂದೊಂದು ಋತುಮಾನಕ ಒಂದೊಂದ ಬಣ್ಣ . ಒಮ್ಮೊಮ್ಮಿ ಅದಲಿ ಬದಲಿ, ಎರಡೆರಡು ಅಥವಾ ಹೆಚ್ಚು - ಒಟ್ಟು ಹದಿನೆಂಟು; ಅಷ್ಟ! ಹಿಂಗ್ಯಾಕಂದ್ರಿ? ಈ ಕಾಡಿಗೆ ರಿಪೀಟ್ ಮಾಡೋದs ಫ್ಯಾಶನ್ನರಿ!

ನನಗ ಚಿಂತಿ ಕಡಿಮಿ ಅಂತ ತಿಳೀಬ್ಯಾಡ್ರಿ. ಇಲ್ಲಿ ನೋಡ್ರಿ, ನನ್ನ ಕೊಂಬು ಯಾಕ ಮುರದವ ಹೇಳ್ರಿ? ಈ ಗೋಡೆಯಾಚೆ ಏನೋ ಇರಬೇಕಂತ ತಿರುಗಿದೆ. ಬಾಗಲs ಸಿಗಲಿಲ್ಲ, ಸಿಟ್ಟಿಗೆದ್ದ ಗೋಡೆ ಒಡಯೋಣಾಂತ ಹಾದೆ ಹಾದೆ. ಬಂತೇನು? ಕೊಂಬು ಮುರಕೊಂಡೆ ಅಷ್ಟೆ. ಈ ಗೋಡೆಯಾಚೆ ಏನ್ನೈತಿ ಅಂತ ಗೊತ್ತೇನ್ರಿ? ಖಾಲಿ! ಆ ಖಾಲಿಗೆ ಸಾಂಪ್ರದಾಯಕವಾದ ಹೆಸರೇನು ಗೊತ್ತ? – ದೇವರು! ನನಗೆ ಈಗ ಅನಿಸೋದಂದರ ಇಷ್ಟಃ ನಾನೂ ದೇವರs ಸಾಹೇಬರ, ಆದರ ನಿಮ್ಮರ್ಥದೊಳಗಲ್ಲ - ಹೋಗಲಿ, ನಿಮ್ಮ ದೇವರೂ ನಿಮ್ಮ ಡಿಕ್ಷನರಿ ಬುದ್ದಿಗಿ ಹುಟ್ಟಿದವನು ! ಹೌದಂತೀರೋ? ಅಲ್ಲಂತೀರೋ?

ನಿನ್ನಿ ಓಡತಿದ್ದಿವಲ್ಲ - ಆಗ ನನಗೆಷ್ಟು ನಾಚಿಕಿ ಬಂತ ಗೊತ್ತೇನ್ರಿ? ಮೂಗ ಕಳಚಿ ಬಿದ್ದ ಬಿಟ್ಟಿತಲ್ಲಾ! ನೋಡ್ರಿ ಇನ್ನs ನೆತ್ತರ ಸೋರತ್ತೈತಿ! ಹೌದರಿ? ಏನ ಹೇಳಲಿ ಸಾಹೇಬರ, “ಹೆಂಗ ಹೇಳಲಿ?”

೯

ನಿಜ, ಎತ್ತಿಗೆ ಮೂಗಿರಲಿಲ್ಲ,
ಮನೆಗೋಡಿ ಕನ್ನಡಿ ನೋಡಿಕೊಂಡ,
ಹೇಳಿದರ ಕತಿಗಿತಿ ಅಂದೀರಿ ದೇವರೂ,
ಅವನಿಗೂ ಮೂಗಿರಲಿಲ್ಲ!
ಅದರ ಸ್ಥಳದಲ್ಲೊಂದು ಹುಣ್ಣಿತ್ತು.
ಬಾಯೊಂದಿಗೆ ಅದೂ ಸೇರಿ ದೊಡ್ಡ ತೂತು ಬಿದ್ದಿತ್ತು!
ಇನ್ನು ಮೇಲೆ ಹೊರಗಡೆ ಹೋಗೋದು ಹ್ಯಾಗೆ?
– ಎಂದು ಮೂಗಿನ ಮೇಲೆ ಕೈ ಇಟ್ಟುಕೊಂಡೇ
ಹೊರಗೆ ನೋಡಿದ -
ಅರೆ ಯಾರಿಗೂ ಮೂಗಿಲ್ಲ!

## ಪ್ರೇಮ ಕಾಮ

ಕಾಮವೆಂಬುವುದೇನೊ ಪ್ರೇಮವೆಂಬುವುದೇನೊ
ಶಬ್ದಸೂತಕ ಬಾಯಿ ಬಿಟ್ಟುದಕ್ಕೆ.
ಮಿತಿಮೀರಿ, ಅತಿಮೀರಿ, ಹತ್ತು ಅಂಗುಲ ಹಬ್ಬಿ
ನಿಂತ ಚೇತನಕೆಲ್ಲಿ ಯಾ ಹೋಲಿಕೆ?

ಕಾಮ ಸುಡುಸುಡು ಬೆಂಕಿ; ಬೆಂಕಿಗುರುವಲು ಒಡಲು;
ಬೀಸುವವು ನಿಟ್ಟುಸಿರ ಗಾಳಿ.
ಸುಡುವ ವೇದನೆಯಲ್ಲಿ ಸುಖಪಡುವ ಪರಿ ನೋಡೊ
ಇರುವುದರ ಮೇಲೆಲ್ಲ ದಾಳಿ.

ಸುಡುಸುಡುತ ಆಸೆಗಳ, ಹುಸಿಖುಶಿಯ ಕನಸುಗಳ,
ಮೈಯ ನರಮಂಡಲವ ಹುರಿಗೊಳಿಸುತ, –
ನಿಜ ಧಸಕ್ಕನೆ ಕುಸಿದು ಇದ್ದುದಿಲ್ಲೆನಿಸುವುದು;
ಈಗ ಉಳಿವುದು ಒಂದು ಸೊನ್ನೆ ಮಾತ್ರ.

ಪ್ರೇಮ ಬೆಂಕಿಯ ಬೆಳಕು, ಸೊನ್ನೆಯನು ತುಂಬುವದು
ಶಬ್ದ ಪಾತ್ರೆಗೆ ಅರ್ಥ ತುಂಬಿದಂತೆ.
ಇಡಿಲೋಕ ಬೆಳಕಿನಲಿ, ಬೆರಗಿನಲಿ, ಬೆಳಗುವುದು
ಈಗಷ್ಟೆ ಕಣ್ದೆರೆದ ಕೂಸಿನಂತೆ.

**(ಪ್ರೇಮ ಕಾಮ)**

## ಯಾರು ತಿಳಸ್ತೀರಿ?

ಈ ಆಳೋ ನನ್ನ ಮಕ್ಕಳಿಗಿ ಏನಾಗೇತಿ?
ಏನಾಗೇತಿ?
ತಿಳಕೋಬೇಕಂತೀನಿ ಯಾರು ತಿಳಸ್ತೀರಿ?
ಯಾರು ತಿಳಸ್ತೀರಿ?
ಅವರ ತಲೀಮ್ಯಾಲೊಂದು ಟೊಪ್ಪಿಗೈತಿ
ಟೊಪ್ಪಿಗೈತಿ
ಅದನ್ನ ಕಂಡರ ನನಗ ಆಗಾಣಿಲ್ಲ ತಗಿ
ಆಗಾಣಿಲ್ಲ ತಗಿ
ಅದನ್ನ ಎಲ್ಲರೂ ನೋಡಲೆಂತ ತಲೀ ಕಡೆ ನೋಡತಾರ
ತಲೀ ಕಡೆ ನೋಡತಾರ
ಮುಂದ ಇದ್ದವರಿಗಿ ಡಿಕ್ಕೀ ಹೊಡೀತಾರ
ಡಿಕ್ಕೀ ಹೊಡೀತಾರ
ಸುಳ್ಳಲ್ಲ ಟೊಪ್ಪಿಗಿ ಚಂದ ಐತೀ ಖರೆ!
ಚಂದ ಐತೀ ಖರೆ!
ಅದರ ಕಂಡವರಿಗೆಲ್ಲಾ ಡಿಕ್ಕೀ ಯಾಕ ಹೊಡೀಬೇಕು?
ಡಿಕ್ಕೀ ಯಾಕ ಹೊಡೀಬೇಕು?

ಹೊಡಿಸಿಕೊಂಡಿವಿ ಡಿಕ್ಕೀ ಹೊಡಿಸಿಕೊಂಡಿವಿ
ಅಥವಾ ಇನ್ನೇನ ಹೊಡಿಸಿಕೊಬೇಕಂತ ನಿಂತೀವಿ?
ತಿಳೀಧಾಂಗ ಆಗೇತಿ ಯಾರು ತಿಳಸ್ತೀರಿ?
ಯಾರು ತಿಳಸ್ತೀರಿ?

**(ಜೈಸಿದನಾಯಕಾ)**

## ಕುದರೀಸಿದ್ಧ

೧
ಕೇಳಿರೇನರಿ ಕತಿಯ ಕೇಳೀರೇನು|
ಕುದರೀ ಸಿದ್ಧನ ಕತಿಯ ಕೇಳೀರೇನು ||

ಒಂದಾನೊಂದೂರಾಗ ಸರದಾರ ಇದ್ದಾ
ಅವನ ನಾಮಾಂಕಿತ ಕುದರೀಸಿದ್ಧಾ
ಕಣ್ಣಾಗ ಮಿಂಚೇನ ಚೂರಿ ಇಟಗೊಂಡಿದ್ದ
ಎದೆಯಾಗಿನ ದಯಮಾಯ ಒಣಗಿಸಿದ್ದ.

ಲೋಕಾ ಕಾಕು ಮಾಡಿ ಕೈ ತಟ್ಟುತ್ತಿದ್ದ
ಮೋಡ ಗುಡುಗಿದ ಹಾಂಗ ಮಾತಾಡತಿದ್ದ
ಚೆಗರ ಚಿವುಟುತಿದ್ದ ಹಸರ ತುಳಿಯುತಿದ್ದ
ಬರಸಿಡಿಲು ಜಡಿಧಾಂಗ ನಗತಿದ್ದ.

ಆಡೋ ಕಂದಮ್ಮಗಳ ಓಡ್ಯೋಡಿ ಒದ್ದಾಡಿ
ಚಂಡಾಟ ಚಕ್ಕಂದವಾಡಿದ್ದ
ಮುಳ್ಳಾಗಿ ಮಂದೀಗೆ ಕಲ್ಲಾಗಿ ಕರುಣೆಗೆ
ಕೈಮೀರಿ ಸೈಯಳತೆ ದಾಟಿದ್ದ.

ಮಿತಿಮೀರಿದತಿಶಯ ತಾಳsದ ಜನ ತಗಿ
ಛೇ ಬ್ಯಾಡ ನಮಗವನ ತಂಟೆ.
ಯಾಕಂತೆ ಕೇಳಿದರ ಹೇಳ್ಯಾರು ಹಣೆಕುಟ್ಟಿ
ರಾಜನ ಮಗಳಿಂದ ಹಿಂಗಾಯಿತೇಃ

ನಾಡೀನ ರಾಜನ ಮಗಳಿವನ ಮೆಚ್ಚಿದಳು
ಪ್ರೀತಿ ಮಾಡೋಣು ಬಾರೊ ಪೋರ,
ಏ ರಂಭೆ ನೀ ನನಗೆ ಸಹಚರಿಯಾಗೆಂಬೆ
ನಂಬಿದೆನೇ ನಿನ್ನ ಪೂರ.

ರಚನೆಯ ವಚನsವ ಆಡಿಕೊಂಡಾಡುತ
ಸೂರೆಗೊಂಡಳು ಸುಖದ ಸಾರ
ಕಡಿಕೊಮ್ಮೆ ಕಪಟವ ಪ್ರಕಟಿಸಿ ಓಡಿದಳು
ಛೀ ಸರಿಯೊ ಬೇಬರಿಸಿ ದೂರ.

ಅಂದಿನಿಂದಲಿ ಸಿದ್ಧ ಹಿಂಗಟಿ ಒರಟಾಗಿದ್ದ
ಮುಂದಿನ ಗತಿ ಶಿವನೆ ಬಲ್ಲ
ಹಿಂಗs ಸಾಗಿರಲಾಗಿ ಮುಂದೀನ ಕತಿ ಕೇಳ್ರಿ
ತಿಳಿಯsದು ದೈವದ ಗೂಢ ||

೨
ಮಂದೀಯ ಮೈತ್ರೀಗೆ ಎರವಾಗಿ ಒಂದಿನ
ಒಬ್ಬಂಟಿ ಕಾಡಿನಾಗಿದ್ದ
ಸದ್ದಿಲ್ಲ ಸರಿರಾತ್ರಿ ನಿದ್ದಿ ಬಂದಿರಲಿಲ್ಲ
ಕುದರಿ ಸದ್ದಿಗೆ ಬೆಚ್ಚಿ ಬಿದ್ದ.

ಗಡಬಡಿಸಿ ನಿಂತ ಸುತ್ತ ಕಣ್ಣಾಡಿಸಿದ
ಮೂಡಣದ ಗುಡ್ಡsದಲಿ ಹೊಯ್ಕ!

ಅರನಿದ್ದಿಯೊಳಗೆದ್ದು ಕಾಡು ಕಣ್ದೆರೆಧಾಂಗ
ಶಿಖರದ ನೆತ್ತ್ಯಾಗ ಬೆಳಕ!

ಕರಿಯ ಕುದುರಿಯನೇರಿ ಭರದಿಂದ ಬರತಿದ್ದ
ಕಾವೀಯ ಧರಿಸಿದ್ದ ಬಾವಾ
ಕತ್ತsಲ ಬೆನ್ನೇರಿ ಹೋ ಬಂದ ಬೆಳಕೇನ
ಇಳಿಧಾಂಗ ಮುಗಿಲೀನ ದೈವಾ!

ಕಾಡನ್ನೆ ಮಡಿಮಾಡಿ ಮುಡಗಿ ಸುತ್ತಿದ ಹಾಂಗ
ಹೆಡಗಿ ರುಂಬಾಲೇನ ಹಸರಾ!
ಕತ್ತೀಗಿ ಶಮನಾಸ ಸುತ್ತ್ಯಾನ ನೆತ್ತ್ಯಾಗ
ಹಾರ್ಯಾಡೊ ಚುಂಗsದ ದಿಗರಾ!

ಬರೆದ ಕಾಡಿಗಿಯೊಳಗ ಹರಿದಾಡೊ ಮಿಂಚುಗಳ
ಸೆರೆಹಿಡಿದ ಕಣ್ಣೀನ ಗತ್ತಾ
ಮಾರುದ್ಧ ಜಡೆಯಿತ್ತು ಮೊಳದುದ್ದ ಬಿಳಿಗಡ್ಡ
ಗುದ್ದಿಮೊಳದಷ್ಟುದ್ದ ನಗತಾ.

ಗುಡ್ಡsದ ಮ್ಯಾಗಿಂದ ಕೆಂಡsದ ಉಂಡೀಯ
ಉರುಳೀಸಿಧಾಂಗೋಡಿ ಬಂದಾ.
ಹೆಜ್ಜಿಹೆಜ್ಜಿಗಿ ಒಮ್ಮೆ ಉದ್ಗಾರವೆತ್ತೂತ
ಹೈ ಅಂತ ಹಯವೇರಿ ಬಂದಾ.

ಕಲ್ಲುಬಂಡೆಯ ಗುಟ್ಟ ಬಲ್ಲಂಥ ಬಾವಾ
ಕಲ್ಲಿನಂಥವನೆದುರು ಬಂದಾ.
ದೊಡ್ಡ ಬೆರಗುಗಳನ್ನು ಉಂಡಂಥ ಮುಖವೇನ
ಸಣ್ಣ ಸಿದ್ಧನ ಮುಂದ ಬಂದಾ.

ಬಂದಾ ಬಂದಾ ಮುಂದsನ ನಿಂದಾ
ಬಾರೋ ಸಿದ್ಧ್ಯಾ ಮಗನ ಅಂದಾ
ಸಲಿಗೀಲೆ ಹೆಗಲೀಗಿ ಕೈಹಾಕಿ ಚಿಲಮೀಗಿ
ಗಾಂಜಿ ಐತೇನಲೆ ಅಂದಾ.

ಇಲ್ಲಂತ ಹೇಳಿದರ ಜೊಲ್ಲುಕ್ಕಿ ನಕ್ಕಾನ
ಜೋಳಿಗ್ಯಾನ ಗಾಂಜಿಯ ತಗದಾ
ಕುಡಿಹುಬ್ಬ ಹಾರೀಸಿ ಹೆಣ್ಣೆಂದರೇನಂದಿ?
ಹೆಣ್ಣು ಕುದರಿಗಿ ಸಮನಂದಾ.

ಹುಡುಗೇರ ಮೈಚಂದ ತುಳುಕುವ ಹರೆ ಚಂದ
ಹರೆಯ ಮಾರುವ ನಗೆಯ ಚಂದ
ಸೊಂಟsದ ಬೆಂಕೀಗೆ ಬಿಡುಮುಡಿಯ ಹೊಗಿ ಚೆಂದ
ಜೋಲಾಡೋ ಜ್ವಾಲೀಯ ಅಂದ.

ಮುದುಕನ ಹುಡುಕಾಟಕೆದುರು ಆಡದ ಹುಡುಗ
ತೆರಬಾಯಿ ತೆರೆಕೊಂಡೆ ಇದ್ದಾ
ಸೇದೂವೆಯೇನಂತ ಕೇಳ್ಯಾನ ಮುದುಕ
ಒಲ್ಲೆಂತ ಹೇಳ್ಯಾನ ಸಿದ್ಧಾ.

ಖೊಕ್ಕಂತ ನಕ್ಕಾ ತಗದಿಟ್ಟ ಹುಕ್ಕಾ
ಮಕ್ಕಿಗೆ ಹೊಂಟೇನೋ ಮಗನ
ಮೂರು ತಿಂಗಳು ಮೂರಮಾಸೀಗಿ ಬರತೇನ
ಆ ತನಕ ಈ ಕುದರಿ ನಿನಗs.

ಮೇಸಿ ಸಾಕಿದ್ದಕ್ಕ ಕೈತುಂಬ ರೊಕ್ಕಾ
ಈ ಮಾತು ಪಕ್ಕಾ ಕೊಡೊ ಮಾತು ಹುಡುಗಾ
ಮೈದಡವಿ ಎದ್ದಾನ ಪಡುವಣದ ಕತ್ತsಲ
ಮಸಿಯೊಳಗ ತಾ ಮಾಯವಾದ.

೩
ಹತ್ಯಾನ ಕುದರಿ ಬಂದಾನ ಊರೀಗಿ
ಮಂದಿ ಕರೆದರು ಕುದರಿಸಿದ್ಧಾ
ಕುದರಿ ಒಡನಾಟಕ್ಕ ಹುಡುಗ ಬದಲಾಗ್ಯಾನ
ಎಲ್ಲಾರ ಬಾಯಾಗು ಸಿದ್ಧಾ.

ಏನಂಬೊ ಕುದರಿ! ಕಣ್ಣಾಗ ಚೂರಿ!
ಹುಡುಗನ ಮನದಾಗ ಆಡ್ಯಾವರಿ!
ಸಾಣೆ ಹಿಡಿದುಕ್ಕೀನ ಹಾಂಗ ಮಿರಿ ಮಿರಿ ಮಿಂಚಿ
ಝಳಪಿಸುವ ಖಡ್ಗಧಾಂಗಿದ್ದಾವರಿ.

ಒಡೆಯನ ದನಿ ಕೇಳಿ ಓಡ್ಯೋಡಿ ಬರತಿತ್ತು
ಮಾಡಿಕೊಂಡ ಮಡದೀಯ ಹಾಂಗ
ಬೆನ್ನೇರಿ ಕತ್ತೀನ ಕೂದsಲ ಹಿಡಿದರ
ಕರಿಯ ಹುಡುಗಿಯ ಕೂಡಿಧಾಂಗ.

ಹಿಂಗಾಲ ಮ್ಯಾಲ್ನಿಂತು ಸೊಂಟ ಬುಗುರಿಯನೆತ್ತಿ
ಒಡೆಯಾನ ತೊಡಿಗೊತ್ತಿ ಒತ್ತಿ

ಜೋರಾಗಿ ಓಡಿದರ ಬೆನ್ನ ಮ್ಯಾಲಿನ ಹುಡುಗ
ಹೌಹಾರಿ ಹಾ ಅಂದ ಬೆವರಿ.

ಗೆದ್ದಾನ ಯುದ್ಧಾ ಹೈ ಅಂತ ಸಿದ್ಧಾ
ಊರೀನ ರಕ್ಷಣೆ ಮಾಡಿ.
ಹೊಳೆಯೊ ಮಾತುಗಳಿಂದ ಹೊಗಳ್ಯಾರ ಮಂದಿ
ಸಿದ್ಧನ ಕುದರಿಯ ಜೋಡಿ.

ಹಾರದೆತ್ತರವಿಲ್ಲ ಜಿಗಿಯದ ತಗ್ಗಿಲ್ಲ
ಮುಟ್ಟದ ಗುರಿ ಉಳಿಯಲಿಲ್ಲ
ಲಹರಿ ಲಹರಿಯೊಳಗ ಕುದರಿ ಹರಿದಾಡಿದರ
ಕಂಡಲ್ಲಿ ಹಸಿರೊಡೆದವನಲ್ಲ!

೪
ರಾಜನ ಜೋಡಿ ಮಾಡಿ ಸವಾರಿ
ಜಿದ್ದಿಲೆ ಗೆದ್ದಾನ ಗುರಿಯ
ಈ ವಾಜಿ ತೇಜಿಯ ಮುಂದೆಲ್ಲ ಮಂದ
ಯಾರು ಬಲ್ಲರು ಇದರ ಪರಿಯ.

ಗಂಡಗಂಡರ ರಾಜ ಮಂಡಿಯೂರುತ ಬಂದ
ತಗೊ ಮಗಳ ಕೊಡೊ ಕುದರಿ ಅಂದ,
ಹೆಂಡೀರ ಕೊಟ್ಟರು ಕೊಡೆನೆಂದ ಸಿದ್ಧ
ಛೇ ರಾಜ ಮುಖ ಮುಚ್ಚಿಕೊಂಡ.

ಬಡನಡುವಿನೊಯ್ಯಾರಿ ಅವಳೆ ರಾಜಕುಮಾರಿ
ಸಿದ್ಧನ ಬಳಿಬಂದು ಖುದ್ದ.
ಏನೊ ಕುದುರೀಜಾಣ ಎಲ್ಲೇತ್ಯೊ ನಿನ ಗ್ಯಾನ
ಎದಿಯೊಳಗ ಹೊಕ್ಕೀಯೊ ಕದ್ದ.

ಕುದರೀಯ ಕಾಣುತ ಚೆದುರಿ ಚಪ್ಪಾಳಿಕ್ಕಿ
ಮಧುರ ನುಡಿದಳು ಹಲವು ಅಂದ.
ಕುದುರೀಯ ವೃತ್ತಾಂತ ಕೆದಕೆದರಿ ಕೇಳಿದಳು
ಒಂದು ಬಿಡದಲೆ ಹೇಳು ಚಂದ.

ಅರಸನ ಮಗಳೆ ನೀ ಅರಶೀನ ಸೀರೆವಳೆ
ಐವತ್ತು ನೆರಿಗೆಯ ಹಾಸಿ
ಹೊಳ್ಯಾಡಿ ಬತ್ತಲೆ ನೆತ್ತರು ಕಾರಿದರು
ದಕ್ಕದು ನಿನಗಿಂಥ ಕುದರಿ.

ಸಿದ್ಧಽನ ಸೊಕ್ಕ್ಯಾಯ್ತು ಹಮ್ಮು ಬಿಮ್ಮುಗಳಾಯ್ತು
ಸರ್ವಸ್ವವಾಗಿತ್ತು ಕುದರಿ.
ಜಗದ ಸವಾರರ ಹೊಟ್ಟೀಗಿ ಕಿಚ್ಚಾಯ್ತು
ಕಣ್ಣ ಕಣ್ಣೀರಾಯ್ತು ಕುದರಿ.

* * *

ಹಿಂಗಽ ಸಾಗಿರಲಾಗಿ ಮುಂದೀನ ಕತಿ ಕೇಳ್ರಿ
ತಿಳಿಯಽದು ದೈವದ ಗೂಢ
ಸೊಕ್ಕ್ಯಾವ ಕುದರಿ ಸೊರಗ್ಯಾನ ಹುಡುಗಾ
ಕರಗ್ಯಾನ ಚಿಂತೀಯ ಒಳಗ.

ಮೂರು ತಿಂಗಳು ಮೂರಮಾಸೀಯ ಅವಧಿ
ಹಾ ಬಂತೊ ಇನ್ನೊಂದ ದಿನಕ
ಬಂಗಾರದಂಥಾ ಈ ಸಿಂಗಾರ ಕುದರೀಯ
ಹೆಂಗಾರೆ ಬಿಟ್ಟಿರಲಿ ಅಂದಾ.

ಅಪ್ಪಾ ಏ ಗುರುಸ್ವಾಮಿ ಒಪ್ಪುಳ್ಳ ದೇವರೊ
ಭೂಮೀಗೂ ಆರೊರಸ ಹಿರಿಯಾ
ದಿಂಡರಿಕಿ ಉರುಳೇನೊ ದಾರೀಗೆ ಬರಬ್ಯಾಡೊ
ಕುದರಿ ಬಿಟ್ಟಿರಲಾರೆನಯ್ಯಾ.

ಯಾರಿಲ್ಲದಲ್ಲೀಗೆ ಬಂದಾನೊ ಮೆಲ್ಲಽಗ
ಚಂಚಲವಾದವು ಚಿತ್ತ!
ಹಾ ಬಂದ ಹೋ ಬಂದ ಬಂದಽ ಬಿಟ್ಟನು ಬಾವಾ
ಗಾಳ್ಯಾಗ ಬಗವಾ ಹಾರಿಸುತ.

ಋ
ಎದ್ದೋಡಿ ಎದುರಾಗಿ ಪೊಡಮಟ್ಟು ಪಾದಕ್ಕ
ಹಣೆಯೊಳಗ ಮೂಡ್ಯಾವ ತಿಲಕ
ಏ ವಚನವಂತಾ ಘನಮಾನವಂತಾ
ಕೊಡೊ ಕುದರಿ ನಮಗ ಸನಮಂತಾ.

ಏನ ಹೇಳಲಿ ಗುರುವೆ ಊನವಾದವು ಮಾತು
ಯಾ ಮಾಯವಾದವು ಕುದರಿ,
ಹುಲ್ಲು ಮೇಯಲು ಹೋಗಿ ಎಲ್ಲೂ ಕಾಣಲೆ ಇಲ್ಲ
ಹೋದಾವು ಕಾವಲ ಮೀರಿ.

ಸುಳ್ಳು ಹೇಳಲಿ ಬ್ಯಾಡ ಒಳ್ಳೇದಲ್ಲೋ ತಮ್ಮಾ
ಖರೆ ಕೊಸರಿ ಬಂದಾವೊ ಹೊರಗ.
ಸುಳ್ಯಾಕೆ ಹೇಳೇನು ಒಳ್ಳೆಯ ಗುರುವೀಗೆ
ಉಳಿದಾವೆ ಖರೆ ಸೆರೆಯ ಒಳಗ?

ತಪ್ಪು ಮಾಡಿದ್ದುಂಟು ದಂಡ ತಪ್ಪಿಗೆ ಉಂಟು
ಕಳೆದ ಕುದರಿಯನೊಂದ ಬಿಟ್ಟು
ಬೇಕಾಗಿದ್ದ ಕೇಳಿರಿ ಸಾಕಷ್ಟು ಕೊಟ್ಟೇನು
ನನ್ನ ಜೀವನಾ ಒಂದ ಬಿಟ್ಟು.

ಮಾತನ್ನೆ ಮರೆತವನು ಮತ್ತೇನ ಕೊಟ್ಟೀಯೊ?
ನಡಿ ನೋಡತೇನಂದ ಬಾವಾ
ಗುರುವಿನ ಕರಕೊಂಡು ಒಳಬಂದ ಒಳಗೊಳಗ
ಮುಳು ಮುಳು ಅಂದಾವ ಜೀವಾ.

ಎಲ್ಲಾ ಬಲ್ಲವರಿಗೆ ಬದಲೆಂಗ ಹೇಳೇನು?
ತಗಲಾಡಬೇಡೆಲವೋ ಮಗನೆ
ಸುಣ್ಣ ಬೆಣ್ಣೆಯ ಗುರತ ಹಿಡಿದು ನುಡಿಯಿರಿ ಸ್ವಾಮಿ
ಯಾತಕೆನ್ನಲಿ ಕೋಪ ನಿಮಗೆ?

ಸುಣ್ಣ ಬೆಣ್ಣೆಯ ಬಲ್ಲೆ ಬಿಳಿದು ಕರಿದನು ಬಲ್ಲೆ
ಮನದಾನ ಅಭಿಮತ ಬಲ್ಲೆ.
ಸಮಯಕ್ಕೆ ಹೇಳುವ ಸಲ್ಲಲಿತ ವಚನದಲಿ
ಸುಳ್ಳು ಬೆರಸಿದ್ದನ್ನ ಬಲ್ಲೆ.

ಪರಿಪರಿ ಕೇಳಿದರು ಬಚ್ಚಿಟ್ಟ ಬಾತಮಿಯ
ಬಿಚ್ಚಿ ಹೇಳಲೆ ಇಲ್ಲ ಸಿದ್ಧ.
ಮಗನ್ಹಾಂಗ ರಮಿಸಿದರು ಗದರಿದರು ಕುದರಿಯ
ಕದ್ದೆನೆನ್ನಲೆ ಇಲ್ಲ ಸಿದ್ಧ.

ಹಿಡಿ ಹಿಡಿ ಹಿಡಿ ಅಂತ ಜೋಳಗ್ಯಾನ ಹಿಡಿಬೂದಿ
ಹಾರಿಸಿ ಹೋದಾನ ಬಾವಾ
ಹುದುಗಿದ್ದ ದಿಗಿಲುಗಳು ಭುಗಿಲೆದ್ದು ಹೋದಾವು
ಕಣ್ಮರೆಯಾದವು ಬಗವಾ.

೬

ಅಕ್ಕಕ್ಕು ಕರಿಗುದರಿ ತನಗss ದಕ್ಕಿತು ಎಂದು
ಓಡೋಡಿ ನೆಲಮನೆ ಹೊಕ್ಕ.

ಚಿತ್ರಚಮತ್ಕಾರವಾಗಿತ್ತು ತುದಿಬುಡ
ತಪ್ಪಿ ಹೋಗಿದೆ ಎಲ್ಲ ಲೆಕ್ಕ.

ಹಾ ಕುದರಿ ಇರಲಿಲ್ಲ ಹಾ ಕುಸಿದಾನೊ
ಯಾಸಿ ತಿರುಗ್ಯಾವಣ್ಣ ಮೋಸ.
ಅಚ್ಚುಮೆಚ್ಚಿನ  ಕುದರಿ ಎತ್ತ ಹೋದಾವೆಂದು
ಹುಡುಕ್ಯಾನು ಹೊಕ್ಕು ವನವಾಸ.

ಕಂಡ ದೇವರಿಗೆಲ್ಲ ದಿಂಡಿರಿಕಿ ಉರುಳ್ಯಾನು
ಹರಕೀಗಿ ತೋರಿಸಿರಿ ಕುದರಿ
ಎಲ್ಲಿ ಹೋದಾವೆಂದು ಎಲ್ಲಾ ಕಡೆ ಹುಡುಕ್ಯಾನು
ಎಲ್ಲಿಯೂ ಸಿಗಲಿಲ್ಲ ಕುದರಿ.

ಕಂಡೀರೇನರಿ ನೀವು ಮಂಡ ಬಾವಾನೆಂದು
ಕಂಡವರ ಅಂಗಲಾಚ್ಯಾನು.
ಆ ಪಾಪಿ ಮುಂಗೋಪಿ ಶಾಪೀಸಿ ಹೋದಾನು
ಕಂಡರೆ ಹೇಳಿರೆಂದಾನು.

ರಾಜsನ ಪಾಗಾದ ಒಳಹೊರಗ ಹುಡಕ್ಯಾನು
ಕಾಡೀನ ತುದಿಬುಡ ತದಕಿ.
ದಿಕ್ಕುದಿಕ್ಕೆಂದರೆ ದಿಕ್ಕೇನ ದೊಡ್ಡsದೋ
ಹುಡಿಕ್ಯಾನ ಬುಡ ಗದಬಡಿಸಿ.

೭
ಹಿಂಗs ಸಾಗಿರಲಾಗಿ ಮುಂದೀನ ಕತಿ ಕೇಳ್ರಿ
ತಿಳಿಯದು ದೈವದ ಗೂಢ.
ಕಡಿಕೊಮ್ಮೆ ಕಂಡಾನು ದೂರsದ ಊರಿನ
ಸಂತ್ಯಾಗ ಕುದುರಿಯ ಹಿಂಡ.

ಸಾಲು ಕುದರಿಯ ಒಳಗ ಜೋಲು ಮಾರಿಯ ಮಾಡಿ
ಕರಿಗುದರಿ ನಿಂತಿದ್ದ ಕಂಡಾ
ಹೋ ಒಂದ ಉಸಿರಿನಲಿ ದೌಡಾಸಿ ಬಂದಾನ
ಕುದುರಿಯ ಬಾಚಿ ಹಿಡಕೊಂಡಾ.

ತಿಕ್ಯಾನ ತೀಡ್ಯಾನ ತೆಕಿಮುಕ್ಕಿ ಬಿದ್ದಾನ
ಮೂಸಿ ಮುತ್ತಿಟ್ಟಾನ ಕುದರಿ.
ಕುದುರೆ ಕುದುರೇ ಅಂತ ಮುದಿಕೇರ ಹಾಂಗತ್ತ
ಕಣ್ಣೀರ ಸುರಿಸ್ಯಾನ ಧಾರಿ.

ಸಾಬಣ್ಣ ಈ ಕುದರಿ ಹೆಂಗ ಸಿಕ್ಕಿತು ನಿಮಗ
ಹೇಳಬೇಕೆಂದಾನ ಸಿದ್ಧಾ.
ಸೇರ ಬಂಗಾರಕ್ಕ ಮಾರಿ ಹೋದಾನೊಬ್ಬ
ಮಾರು ಜಡೆ ದಾಡಿಯ ಬಾವಾ.

ಸೇರಿಗಿ ಸವ್ವಾಸೇರ ಬಂಗಾರ ಕೊಟ್ಟಾನ
ಹಿಂದಿರುಗಿ ಹೊಡಕೊಂಡು ಬಂದಾ.
ಸುಣ್ಣಬೆಣ್ಣೆಯ ಗುರುತ ಹಿಡಿಯಲಾರದ ಹುಡುಗ
ಕುದರೀಯ ನಗಿ ನಕ್ಕು ಬಂದಾ.

ಉ

ಒಡೆಯ ಕರೆದರೆ ಕುದುರೆ ಓಡೋಡಿ ಬರಲಿಲ್ಲ
ನಿದ್ದಿ ಮಾಡುತಲಿತ್ತು ಜಾಸ್ತಿ.
ಕಣ್ಣು ಸಣ್ಣವು ಚೂರಿ ಇರಲಿಲ್ಲ, ಯಾವತ್ತು
ನೆತ್ತಿಗೇರಿದ ಹಾಂಗ ಮಸ್ತಿ.

ಮೊದಲಿನ ಕುದುರಿ ಇದಲ್ಲಽವೆ ಅಲ್ಲಂದ
ತಲಿಚೆಲ್ಲಿ ಹುಲ್ಲೂನಂತಾದ.
ಅದಕಿದೆ ಎಲ್ಲೀಯ ಹೋಲಿಕೆ ಅಲ್ಲ ತಗಿ
ಇದೆ ಬ್ಯಾರೆ ಕುದರಿ ಎನುತಿದ್ದ.

ಏರಿದ್ದ ಶಿಖರಗಳ ಮತ್ತೇರ ಹೋದರ
ಹಿಂದಿರುಗಿ ನಿಂತಾವು ಕುದರಿ
ಹಾರಿದ್ದ ತಗ್ಗುಗಳ ಹಾರಹೋದರ ಮತ್ತ
ಹಿಂದಕ್ಕೆ ನೆಗೆದಾವು ಕುದರಿ.

ಯಾರಿಲ್ಲದಲ್ಲಿಗೆ ಕುದರಿಯ ಕರೆದೊಯ್ದು
ವಿವರವ ಪರಿಕಿಸುತಿದ್ದ
ಅಲ್ಲಂತ ಹೌದಂತ ಹಣಗಲಕ ಬಿದ್ದಾಗ
ತಂತಾನ ವಾದಿಸುತಿದ್ದ.

ಕೊಂದ ಒಗಿಬೇಕಂತ ಬಂದೂಕ ತರತಿದ್ದ
ಕೊಲ್ಲದ ಹಿಂದಿರುಗುತಿದ್ದ.
ಘಾತ ಭಾವಾ ಬಂದು ಬೇತ ಮಾಡ್ಯಾನಯ್ಯೊ
ಇದಽ ಬ್ಯಾರೆ ಜಾತಿ ಎನುತಿದ್ದ.

ಕಂದೀದ ಮಾರಿಯ ಮಂದಿಗೆ ತೋರಟಿದೆ
ಒಳೊಗೊಳಗ ಮುಳು ಮುಳು ಅತ್ತ.

ರಾಜಽನ ಜೋಡಿ ಮಾಡಿ ಸವಾರಿ
ಗುರಿಯ ಗೆಲ್ಲಲು ಹೋಗಿ ಸೋತ.

ಮೊದಲಿಟಿನ ಕುದರಿಯನ್ಯಾರಿಗೆ ಮಾರಿದೆ
ರಾಜಕುಮಾರಿ ಅಂದಾಗ
ಆ ಕ್ಷಣವೆ ಸಿದ್ದಾ ಮನಸು ಮಾಡೆದ್ದಾ
ಅನುಮಾನವಿನ್ನ್ಯಾತಕೆಂದಾ.

೯

ಹೈ ಅಂತ ಕುದರಿಯನೇರ್ಯಾನ ಸಿದ್ಧಾ
ಸೈ ಅಂತ ಹಿಡದಾನ ಮರ್ಮ,
ಕತ್ತೀನ ಕೂದಲಿಗಿ ಕೈಹಾಕಿ ಜಗ್ಯಾನ
ಜೋರೀಗಿ ಜೋತಾವ ಚರ್ಮ.

ಹಿಂಗಾತ ಮ್ಯಾಲ್ನಿಂತು ಹಿಂಭಾರ ಹಾಕಿದರ
ಮದ್ದು ಸ್ಫೋಟಿಸಿಧಾಂಗ ಓಡಿ
ನೋಡುವ ಮಂದಿಗೆ ಕಾಣುತಲಿದ್ದರು
ವೈರಿಗಳಿಬ್ಬರ ಜೋಡಿ,

ಸಿದ್ಧ ಸವಾರನಂತಿರಲಿಲ್ಲ ಆ ಕುದರಿ
ಕುದರಿಯ ಹಾಂಗಿರಲಿಲ್ಲ.
ಕುಸ್ತೀ ಹಿಡಿದಿಬ್ಬರು ಒಬ್ಬರನೊಬ್ಬರು
ಘಾಸಿಸುವಂತಿದ್ದರಲ್ಲ!

ನಂಬಿಸಿ ಓಡಿಸಿ ಹಾರಿಸಿ ಕೊಳ್ಳದಲಿ
ಕೆಡವಿ ಕೊಂದೇನೆಂಬ ಸಿದ್ಧಾ!
ಓಡ್ಯೋಡಿ ಹೌಹಾರಿ ಕೊಳ್ಳಕೀತನ ತೂರಿ
ತೀರಿಸುವೆನೆಂಬುವ ಕುದರಿ!

ಕಾಡಿನಲ್ಲಿಬ್ಬಽರು ಕಣ್ಮರೆಯಾದರು
ಗೊರಸಿನ ದನಿ ದಿಕ್ಕ ತುಂಬಿ
ಕಾಣಕಾಣುತ ಆಹಾ ಕಾಣದಾಯಿತು ಜೋಡಿ
ಮಂದಿ ನಿಂತರು ಕಣ್ಣ ತುಂಬಿ.

* * *

ಹೋದವರು ಹಿಂದಿರುಗಿ ಬರಲಿಲ್ಲ ಯಾರ್ಯಾರ
ಕಣ್ಣೀಗು ಬೀಳಲಿಲ್ಲವರು.

ಆಗೀಗ ಗೊರಸಿನ ದನಿ ಕೇಳಿಸುವದುಂಟು
ಜನರಾಗ ಬೆಚ್ಚಿ ಬೀಳುವರು.

ಒಮ್ಮೊಮ್ಮೆ ರಾತ್ರಿಯಲಿ ಕಟ್ಟೇದಿಟ್ಟಿಗೆ ಬಿದ್ದು
ಪೇರಿಸಿದ ಅಡಕಲಗಡಿಗೆ,
ವಸ್ತುಗಳಾಧಾರ ತಪ್ಪಿದರ, ಬಿಚ್ಚಿದರ
ಸಂಬಂಧ ಸಲಿಗೆಯ ಬೆಸುಗೆ

ಕುದರೀಸಿದ್ಧರ ಜೋಡಿ ತುಳಿದಾಡಿ ಹೋಯ್ತೆಂದು
ಮಾತಾಡಿಕೊಳ್ಳುವರು ಮಂದಿ
ಕಾಡಿಗಿ ಎಡಿಮಾಡಿ ನೈವೇದ್ಯ ನೀಡುವರು
ಕುದರೀಸಿದ್ಧರ ಕತಿಯ ಹಾಡಿ !!

## ನಿನ್ನ ಕಣ್ಣು

ಕಣ್ಣ ಬಣ್ಣಿಸು ಕವಿಯೆ
ಅಂತ ಹೇಳಿದೆಯಲ್ಲ ಪ್ರಿಯೆ,
ಅತಿರೇಕದ ಹಿತಕಾರಿ ಮಾತು ಸುಲಿದು
ನಿಜ ಹೇಳುತ್ತೇನೆ, ಕೇಳು:

ಕಾಡಿನೊಳಗಿನ ಎರಡು ತಿಳಿಗೊಳಗಳು
ನಿನ್ನೆರಡು ಕಾಡೀಗಿಗಣ್ಣುಗಳು
ಏಳು ಹೊರಸಿನ ನುಲಿಗು ನಿಲುಕಲಾರದ ಆಳ
ಭಾರೀ ನಿರಾಳ;

ರೆಪ್ಪೆಗಳ ಸಾಲುಮರ, ಅದರ ಹಿಂದಿನ ಕಾಡು
ಮತ್ತು ನಮ್ಮೀ ನಾಡು ಹ್ಯಾಗೆ ಮೂಡಿವೆ ನೋಡು - ತಲೆಕೆಳಗಾಗಿ,
ಮುಟ್ಟಿದರೆ ಮುಟ್ಟಿದ್ದನ್ನ ಒಳಗವಚಿ ಹೀರಿ ಹುಟ್ಟಿಲ್ಲೆನಿಸಿ
ಚಿಗುರುವ ಬಳ್ಳಿ,
ಮ್ಯಾಲೆ ಹಾ ಅರಳ್ಯಾವು ಕಮಲ ನೀಲಿ!

ಕ್ಷಣಕೊಂದು ಚಂದಗಳ ಮೆರೆದು
ಮಳೆಬಿಲ್ಲುಗಳ ಕೊರೆದು,
ಮೂಡುವುದುಂಟು ಇಲ್ಲಿ ಮುಗಿಲು.
ಸೂರ್ಯಚಂದಿರ ಚಿಕ್ಕಿ, ಅಕಾ ಹಾರುವ ಹಕ್ಕಿ
ಖುಶಿಯುಕ್ಕಿ ಇಂಬಾಗಿ ಬಿಂಬಿಸುವ ದಿಗಿಲು.

ಮೊನ್ನೆ ಅಂಬಿಗರ ಹುಡುಗ ಈ ಕೊಳದೊಳಕ್ಕೆ
ಬಲೆಬೀಸಿ ಎಳೆದಾಗ ಬಲೆತುಂಬ ಸಿಕ್ಕಿದ್ದು - ನಿನಗೂ ಗೊತ್ತಲ್ಲ ?
ಚಿಳಿಮಿಳಿ ಮೀನಲ್ಲ -
ಈಜು ಬಾರದೆ ಜಾರಿ ಬಿದ್ದವರ ಹೃದಯಗಳು -
ಇದು ಹಳೆಯ ವರದಿ ಬಿಡು.

ಬಲ್ಲೆಯಾ ಚಿನ್ನಾ,
ನಿನ್ನ ಕಣ್ಣಲ್ಲಿ ಮೂಡುವ ಸೂರ್ಯನ ಹಾದರಕ್ಕೆ
ಹರಿಕಥೆ ಹುಟ್ಟುತ್ತವೆ:
ಸೂರ್ಯನ್ನ ಕುಡಿದು ಸಚರಾಚರದ ಹೊಕ್ಕಳ ಬಳ್ಳಿ
ಫಕ್ಕನೆ ಅರಳುತ್ತದೆ.
ಕೊಳೆತ ಬೇರಿನ ಮೇಲೆ ಚಿಗುರಿನ ಪವಾಡ
ನಡೆಯುತ್ತದೆ.

ಆದರೆ ಗೊತ್ತ ಪ್ರಿಯೆ,
ಈ ಪ್ರಕೃತಿಗೆ ಬೇಕು ನಿನ್ನ ದಯೆ.

ಮೂಡಿರುವ ಸೂರ್ಯನ್ನ ನಡುಗಿಸಲೇನು ಬೇಕು ?
ಈ ಕೊಳದ ಮರಿ ಮೀನೊಂದು ಸಾಕು.
ಅದು ತುಳುಕಿದರೆ ಅನಾಯಾಸ
ಮೂಡಿರುವ ಸೂರ್ಯ ಮುಗಿಲು ಸಮೇತ
ಗಡಗಡ ನಡುಗಿ ಆಕಾಶದಾಧಾರ ಧಸಕ್ಕನೆ
ಕುಸಿಯುತ್ತದೆ.
ಹೋಗಲಿ, ಈ ಶೀತೋಷ್ಣವಲಯದ
ಅಸ್ತಿತ್ವ ಎಲ್ಲಿಯತನಕ ?
ನೀನು ರೆಪ್ಪೆಯ ಹೊಡೆಯುವ ತನಕ.
ಹೊಡೆದೆಯೋ ಖೇಲ್ ಖಲಾಸ್
ಮೂಡಿದ್ದೆಲ್ಲ ಅದೃಶ್ಯ
ಕಣ್ಣು ತೆರೆದಾಗ ಇನ್ನೊಂದು ದೃಶ್ಯ !

ಆದರೂ ಹುಸಿಯೂದಿ ಉಬ್ಬಿಸಿದ ಹೌಸಿಯ ಬಲೂನಿಗೆ
ರೆಪ್ಪೆಯ ಸೂಜಿಮನೆ ತಗುಲಿಸದಂತೆ
ನೋಡಿಕೊಂಬ ಜಾಣೆ ನೀನು.

ಈ ಒಪ್ಪಂದ ಇಂದು ನಿನ್ನಿನದಲ್ಲ
ನಾನು ಸುಳ್ಳು ಹೇಳುತ್ತಿಲ್ಲ, ಯಾಕೆ ಗೊತ್ತಲ್ಲ ?

ಸಟೆದಿಟದ ಮಧ್ಯೆ ಸೇತುವೆಯಾದ
ನಮ್ಮ ಪ್ರೀತಿಗೆ ಬೇರೆ ದಾಖಲೆಯಿಲ್ಲ!

## ಈ ಮಾಯೆ

ನಾವೆಲ್ಲ ಇರಲಿ, ಹ್ಯಾಗೇ ಇರಲಿ ತಕ್ಷಣವೆ
ಹಸಿರು ಕನಸಿನದೊಂದು ಬ್ರಿಜ್ಜು ಮಾಡಿ
ಆಚೆ ಎಜ್ಜಿನ ನಮ್ಮ ಸೆಳೆದು ದಾರಿ ಸರಾಗ
ಸರಬರಾಜಿಗೆ ಸುಗಮಗೊಳಿಸುವಾಕೆ.

ಋತುಮಾನವಾಗಿ ಹಗಲಾಗಿ ಹೊಂಬಿಸಿಲಾಗಿ
ಚಿಗುರಿನಂಚಿಗೆ ಮಿಂಚು ಹೊಳೆಸುವಾಕೆ,
ಇರುಳ ಹೆರಳಿನ ತುಂಬ ಮುಡಿದು ಚಂದಿರ ಚಿಕ್ಕೆ
ಸುಖದ ಬೆಳ್ದಿಂಗಳಲಿ ಬೀಗುವಾಕೆ.

ಹುಚ್ಚೆಬ್ಬಿಸುವ ಮೈಯ ಅಕ್ಷಿ ತುಂಬಾ ಸೆಕ್ಸು
ರೇಪು ಮಾಡೋ ಇಲ್ಲ ಮಾಡಿಸಿಕೊ,
ಕೊನೆಗೊಮ್ಮೆ ತಂತಾನೆ ಮಾಡಿಕೊಂಬಳು ರೇಪು
ಹದಿಹರೆಯದೆದೆಗಳಿಗೆ ನೋವ ಕೊಟ್ಟು.

ಹೊಸಹೊಸದಾಗುವಳು ಹೊಳೆದಾಗಲೊಮ್ಮೊಮ್ಮೆ
ಹೊಸಜನ್ಮ ಕೊಡುವಾಕೆ ಪಡೆಯುವಾಕೆ.
ಮಲಗಿ ಎದ್ದಾಗೊಮ್ಮೆ ಮರುಜನ್ಮ ಕೊಡುವಾಕೆ
ಕಣ್ಣು ತೆರೆದಾಗೊಮ್ಮೆ ಹೊಸಲೋಕವೆ.

ನೆಲೆ ಇರದ ನದಿಯಾಗಿ ಬೆಟ್ಟಗಳ ಎದೆ ಸೀಳಿ
ನೆಲದ ತಳದೊಳಗಾಡಿ ಹರಿಯುವಾಕೆ.
ಗುಡ್ಡದಾಳದ ಒರತೆ ಗುಂಭದೊಳಗಡೆ ಒಡೆದು
ಲಿಂಗದೇವರಿಗಾಗಿ ಕಾಯುವಾಕೆ.

ಹರಿವ ಹಾವನ್ನೆಳೆದು ಮೈಯ ತುಂಬಾ ಸುತ್ತಿ
ಮಜಬೂತು ಮಜಮಾಡಿ ಎಸೆಯುವಾಕೆ,
ಹಾವಲ್ಲ ಅದು ಹಗ್ಗ ಎನ್ನುವರು ಕೆಲಮಂದಿ
ಹಗ್ಗದಲ್ಲೂ ಹರ್ಷ ಚಿಮ್ಮುವಾಕೆ.

ಹಸಿರೆಲೆ ಉದುರಿಸಿ ಬರಿ ಬತ್ತಲಾಗಿಸಿ
ಮೈಪರಚಿಕೊಂಬಳು ಬೇಸಿಗೆಗೆ.
ಮತ್ತೆ ಚೈತ್ರದ ಚಿಗುರು ಹಸಿರೇರಿ ಹೂವಾಗಿ
ಮೈನೆರೆದು ಹೂಕಂಪು ಗಿಡಕೆ ಮರಕೆ.

ನೆತ್ತರಲ್ಲಿವಳಂತೆ ಸುಖವ ಪಟ್ಟವರಿಲ್ಲ
ಯುಗಯುಗಾಂತರ ಪುಳಕ ಮೈಯ ತುಂಬ.
ನಾವು ಬರಿ ಮಾನವರು ಬಲಿಯ ಪಶುಗಳು, ರಕ್ತ
ಕಾರುವೆವು ಈ ಮಾಯೆ ದಾಹಕಾಗಿ.

## ದಿಲ್ಲಿಯೆಂಬ ಕ್ಯಾಬರಿ

ದಿಲ್ಲಿಯ ನೋಡಿರೇ,
ಬಾರಿನ ಏರಿಯ ಮೇಲೆ ಹಾರಿಹಾರಿ ಕುಣಿವ
ದಿಲ್ಲಿಯೆಂಬ ಕ್ಯಾಬರಿಯ ನೋಡಿರೇ,
ಭಾರತ ಭಾಗ್ಯವಿಧಾತನ
ಸೌಭಾಗ್ಯವತಿಯ ನೋಡಿರೇ!

ವಿದೇಶದ ದೀಬೆಸ್ತಿನಿಂದ ಮೈಮುದಿ
ಮುಚ್ಚಿಕೊಂಡು, ಹದಿ ಹರೆಯದ
ಬೆದೆ ಅಭಿನಯಿಸುವ ಗೋಲಮಾಲಿಯ ನೋಡಿರೇ,

ಬೆಲೆಯುಳ್ಳ ನಕಲಿ ನಗೆಯನ್ನ
ವಿದೇಶಿ ವಿನಿಮಯದ ಸರಬರಾಜಿನಲ್ಲಿ
ಹರಾಜು ಮಾಡುವ
ಗಾಂಧೀ ಬಜಾರಿಯ ನೋಡಿರೇ,

ಜಗತ್ತಿನೆಲ್ಲ ಕೆಮೆರಾಗಳಿಗೆ
ಮೋಜಿನ ಪೋಜು ಕೊಟ್ಟು
ಪೋಲಿಕಥೆ ಪಾರ್ಟಿ ಜೋಕಿನಲ್ಲಿ
ತಾಜಾಬಿಸಿ ಮಾರುವ ಹೊಯ್ಕಾಲಿಯ ನೋಡಿರೇ,

ಗಾಯದಂಥ ಬಾಯಿ ತೆಗೆದು
ಹಾಯೆಂದು ಹಾಡುತ್ತ
ಹ್ಯಾಗೆಂದರೆ ಹಾಗೆ ತತ್ವ ಜಡಿಯುತ್ತ
ನಾಲಗೆಯ ರೀಲು ಬಿಡುತ್ತ

ಅತ್ತ ಸ್ಲಮ್ಮಿಗರಿಗೂ ಇತ್ತ ಬಿಲ್ಡರಿಗೂ
ಕೈತಟ್ಟಿ ಅಂಗೈಯೊಳಗೆ,
ಒಬ್ಬೊಬ್ಬರಿಗೊಂದೊಂದು ಕೈಲಾಸ ತೋರುವ
ಬಾಜಾ ಬಜಂತ್ರಿಯ ನೋಡಿರೇ,

ನಕ್ಕರೆ ನಗುತ್ತ ಇಲ್ಲವೆ ಕುಣಿಯುತ್ತ
ಹಾಗಾದರೊಂದು ಪರಿ ಹೀಗಾದರೊಂದು ಪರಿ
ತುರಿಸಿ ಕೆರೆದದ್ದನ್ನ, ಲಾಗ ಹಾಕದ್ದನ್ನ
ಚರಿತ್ರೆ ಮಾಡುತ್ತ ಮೊಗಲಾಯಿ ದರ್ಬಾರು
ಮೆರೆವ ಮಾರಾಣಿಯ ನೋಡಿರೇ,

ಹೀಗೆಯೇ ಕುಣಿಯುತ್ತ ಕುಣಿಯುತ್ತ
ಪಿಟ್ಟೆನ್ನಿಸಿ ಕಟ್ಟಿದ ಕಾಚದ
ಸೊಂಟದ ಸೊನ್ನೆಯನೆತ್ತಿ
V ಆಕಾರದಲ್ಲಿ ಕಾಲೆತ್ತಿ
"ಋಷಿಗಳ ಪಂಪು ಮಾಡುತ್ತೇನೆ ಬಾ ರಾಜಾ
ಕಿಡಿ ತಾಗಿಸಿ ನೋಡು ಸಿಡಿಯುವ ಮಜಾ"
ಎಂದು ಕೂತವರ ಕರೆದರೆ, ಅರೆ ಅರೇ
ಎಲ್ಲರೂ ಸುಮ್ಮನಾಗಿದಾಗೊಬ್ಬ ಒರಟು ಆಸಾಮಿ
ಬಂದು ಉರಿವ ಸಿಗರೇಟನ್ನ ಹೊಕ್ಕುಳಲ್ಲೂರಿದರೆ,
ಹೊಟ್ಟೆ ಧಡಾರನೆ ಸಿಡಿದು, ಕರುಳು ಹೊರಬಂದು
ಒದ್ದಾಡುತ್ತಿದ್ದರೆ ಕೂತವರ್ಯಾರೂ ಸಮೀಪ ಬರದೆ
ಉಧೋ ಉಧೋ ತಾಯಿ ಭಾರತಾಂಬಿಯ
ಗತಿ ಏನಾಯ್ತು ನೋಡಿರೇ. . . . .

## ಕಾಯುತ್ತೇವೆ

ನಾವು ಹುಂಬರು,
ಕಣ್ಣು ತುಂಬಿದ ಕನಸುಗಳಿಗೆ
ಸೂರ್ಯನ ಫಳ ಫಳ ಬೆಳಕನ್ನ ಸಿಂಪಡಿಸಿ
ರಂಗೇರಿಸಿ ರಂಗಪಂಚಮಿಯಾಡುತ್ತಾ ಆಡುತ್ತಾ
ಈ ಸಿಟಿಗೆ ಬಂದಾಗ -

ನಮ್ಮ ಜೊತೆ ಬಂದ ಸೂರ್ಯ ತಪ್ಪಿಸಿಕೊಂಡ.
ಅತ್ತಿತ್ತ ನೋಡುತ್ತ ಎತ್ತೆತ್ತರ ಹಾರಿ
ಮಿತ್ರಾ ಎನ್ನುತ್ತಾ ಕೂಗಿ, ಕರೆದು ಹುಡುಕುತ್ತಾ

ಸಿಕ್ಕದ್ದಕ್ಕೆ ಸತ್ತನೋ ಎಂದು
ಆತನ ಗುಣಗಾನ ಮಾಡಿ ಅತ್ತೆವು.

ನಮ್ಮ ಹುಂಬುತನಕ್ಕೆ ಇಡೀ ಸಿಟಿ ಹಲ್ಲು ಕಿರಿದಂತೆ
ಸಾಲುದೀಪ ಝಗ್ಗಂತ ಉರಿದವು.

ಅಷ್ಟರಲ್ಲಿ ಯಾರೋ - ಸಿಟಿಯವನಂತೆ -
ಧಡೂತಿ ಕುಳ ಬಂದು ನಿಂತ.
ಹೇಳಕೇಳುವ ದಿಕ್ಕಿಲ್ಲದ ಕಕವಾಗಳೆಂದು
ಕಾಕುಮಾಡಿ ಪಕಪಕ ನಕ್ಕ.
ನಾವು ಹುಂಬರು ಹೆದರಿ ಫಕ್ಕನೆ ತಕ್ಕೈಸಿದೆವು,
ತಪ್ಪು ಮಾಡಿದೆವೆಂದು ಒಪ್ಪಿಕೋ ಎಂದು
ಗಕ್ಕನೆ ಹಿಡಿದ.

ಒದರುವ ನಮ್ಮ ಬಾಯಿ ಕಿತ್ತ
ಖೆಕ್ಕರಿಸುವ ಕಣ್ಣು ಕಿತ್ತ
ಒದ್ದಾಡುವ ನರ ಕಿತ್ತ
ಕಿತ್ತು ಒತ್ತೊತ್ತಿ ಹಿಸುಕಿದ;
ಕಚಪಚ ತುಳಿದು ತೆಳ್ಳಗೆ ಕಾಗದ ಮಾಡಿದ.

ತನ್ನ ಗಂಜಲದಿಂದ ಥರಾವರಿ ನೋಟುಗಳ
ಚಿತ್ರ ಬರೆದು
ಅಚಿತ್ರೋ ವಿಚಿತ್ರ
ಪೋಸ್ಟರ್ ಮಾಡಿ
ಎತ್ತರದ ಗೋಡೆಗಂಟಿಸಿದ.
ಮಳೆಗಾಳಿ ಬೀಸಿ, ಪೋಸ್ಟರಿನ ಅಂಚು ಹರಿದಾಗ
ಅಗೀಗ ನಮ್ಮೊಳಗಿನ ಹಳದಿ ಆತ್ಮ
ಕಾಣಿಸಿಕೊಳ್ಳುವುದುಂಟು, ಕಳೆದ ಸೂರ್ಯನ್ನ
ಹುಡುಕುವುದುಂಟು.
ಗೋಡೆಯಂಚಿನ ಕಪ್ಪು ಕಿಟಕಿಗಪ್ಪಳಿಸಿ
ತಡಕಾಡವುದುಂಟು ಉಸಿರಿಗಾಗಿ.
ಆಗ ಆ ಧಡೂತಿ ಸಿಟಿಯವ
ಬಂದು ತಿರುಗಾ ನಮ್ಮ ಅಂಟಿಸುವ.

ಮತ್ತೆ ಮಳೆಗಾಳಿ ಬಂದೀತಂತ
ಕಾಯುತ್ತ ಕಾಯುತ್ತ,
ಕಾಯುತ್ತೇವೆ.

# ಕುಲದ ಸ್ವಾಮಿ ದೇವರು

ಈಸುರನ ಮಗ ಮಾದೇಸುರ
ಮಾದೇಸುರನ ಮನೆ ಗಲ್ಲಿಗಟಾರ.
ಆ ಗಲ್ಲಿಗೆ ಇವನೊಬ್ಬನೇ ಕನಸುಗಾರ.

ಈ ದಿನವು ಕನಸಾಯಿತು ಇದೇ ಬೇರೆ ತಂದೆ,
ಆಹಾ ಏನೆಂಬೆ:

"ಈ ನಗರದ ಗಗನಚುಂಬಿ ಕಟ್ಟಡಗಳ ಅಂಚಿಗೆ
ಬೇರೆ ತರದ ಕ್ಷಿತಿಜ ಕಂಡೆ
ಚಿನ್ನದ ಗೆರೆ ಮೇಲೆ!
ಕೆಂಪಗಿತ್ತು ಕೆಳಗೆ
ಕೆಂಪು ಹಳದಿ ಬಣ್ಣದೊಂದು ನದಿಯು ಹರಿದ ಹಾಗೆ."

"ಕೆಂಪಿಗೇನು ಹಳದಿಗೇನು, ವ್ಯರ್ಥಗಳಿಗೆ ಅರ್ಥವುಂಟೆ
ಸುಮ್ಮನಿರೋ ಪೋಕರಿ.
ಚಿನ್ನದ ಗೆರೆ ಕನಸಬೇಡ ನೀ ಗಟಾರವಾಸಿ."

"ಕೇಳು ತಂದೆ ಕೆಂಪಿನೊಳಗೆ ಒಂದು ಸಣ್ಣ ಜೀವ
ಸೊಳ್ಳೆ ಅಥವ ಸೊಳ್ಳೆಯಂಥ ಹುಳು ಅಥವಾ ಮಾನವ
ಮುಳುಗುತಿತ್ತು, ಏಳುತಿತ್ತು ಒದ್ದಾಡುತಲಿತ್ತು!
ನೋಡುವವರು ನೂರು ಮಂದಿ
ಅದರ ಏಳು ಬೀಳುಗಳಿಗೆ
ಬೆಟ್ಟು ಕಟ್ಟಿ ಕೈಯ ತಟ್ಟಿ ನಲಿದಾಡುತ್ತಿದ್ದರು."

"ಸೊಳ್ಳೆಯೆಂದೆಯಲ್ಲ ಮಗ, ಫ್ಯಾನಿಗಂಜಲಿಲ್ಲವೆ?
ಕೈ ಕೈ ಕೈ ಚಪ್ಪಾಳೆಗೆ ಸಿಕ್ಕು ಸಾಯಲಿಲ್ಲವೆ?"

"ಇಲ್ಲ ತಂದೆ ತೆವಳಿಕೊಂಡು
ದಡಕೆ ಬಂದು ನಿಂತು
ನದಿಯ ತಳದ ದೊಡ್ಡದೊಂದು ಮೂಳೆ ಎತ್ತಿಕೊಂಡು
ಗದೆಯ ಹಾಗೆ ಹಿಡಿದುಕೊಂಡು
ನಿಂತು ಎಲ್ಲರೆದುರಿಗೇ
ಬೆಳೆಯಿತಕೋ ತಂದೆಯೇ!

ನೆಲ ಮುಗಿಲಿನ ಬಡ್ಡಿ ಬೇರು
ಗಟ್ಟಿ ಹಿಡಿದು ಮೆಟ್ಟಿ ನಿಂತು ಝಾಲಾಡಿಸಲಾಗಿ
ಸೂರ್ಯಚಂದ್ರರಿಬ್ಬರೂ
ನಡುಗಿ ನದಿಯ ಕೆಂಪು ತಳಕೆ
ತೊಟ್ಟು ಕಳಚಿ ಬಿದ್ದರು.
ತಂಪಗಿದ್ದ ಕೆಂಪುನದಿಯ ತಳಬುಡಗಳು ಕುದಿದುವಣ್ಣ
ಮ್ಯಾಲೆ ಇದ್ದ ಚಿನ್ನದ ಗೆರೆ ಕರಗತೊಡಗಿತಣ್ಣ."

"ಸೊಳ್ಳೆ ಜೀವ ಬೆಳೆಯಿತಲ್ಲ, ಮುಂದೇನಾಯಿತಣ್ಣ?"

"ತೆರದುಕ್ಕಿನ ಕಣ್ಣ,
ನೋಡುತ್ತಿದೆ ನನ್ನ
ಬಾರೊ ನನ್ನ ಜೊತೆಗೆ
ಬೊಗಸೆ ತುಂಬ ಬದುಕ ಕೊಡುವೆ
ಸೂರ್ಯ ಬೇಕೆ ನಿನಗೆ ಎಂದು ಕರೆಯುತ್ತಿದೆ ತಂದೆ
ಮಾಡಲೇನು ಮುಂದೆ?"

"ಹೌದೋ ಏನೋ ಈತ ನಮ್ಮ ಕುಲದ ಸ್ವಾಮಿ ದೇವರು
ಹೋಗಿ ಅವನ ಬಂಟನಾಗಿ ಸೇವೆ ಮಾಡಿಕೊಂಡಿರು
ಕೇಳಿದ ಬಲಿ ಕೊಡು ಇದೆಲ್ಲ ಯಜ್ಞ ಬೇಗ ಮುಗಿದು
ತಿಳಿಯಾಗಲಿ ನದಿ ಮೀನಿಗೆ, ಜೀವಕಾದಿಯಾಗಲಿ."

## ನಮಗೆ ಸ್ವಾತಂತ್ರ್ಯವೇ ಇಲ್ಲ

ಅಪರೂಪಕ್ಕೆ ಹಳೆಗೆಳತಿ ಸಿಕ್ಕಾಗ
ಎದೆ ಭಗ್ಗೆನಲಿಲ್ಲ, ಕೆನ್ನೆ ಕಣ್ಣುಗಳಲ್ಲಿ
ಬೆಳಕಾಡಲಿಲ್ಲ. ಸುತ್ತ ಯಾರಿರಲಿಲ್ಲ
ವಾದರೂ ಮೈಸವರಲಿಲ್ಲ. ತೋಳು ಹೆಣೆಯಲಿಲ್ಲ
ಮುದ್ದಿನಲ್ಲಿ ಮಾತಾಡಲಿಲ್ಲ.

ರೆಕ್ಕೆಯಳಗಿನ ಹಕ್ಕಿಯ ಥರ
ನಮ್ಮ ನೆರಳುಗಳನ್ನೆ ಮೈಗು ಮನಸಿಗು ಸುತ್ತಿಕೊಂಡು
ಉರಿವ ಬೆಂಕಿಯ ಬಳಿ ಕೂತೆವು.

ಅವಳ ಮೈ ತೀಡಿದ ಗಾಳಿ
ನನ್ನ ಕಡೆ ಸುಳಿಯಲಿಲ್ಲ
ಎದೆಮಿಡಿತ ತಿಳಿಸಲಿಲ್ಲ.

ತುಕ್ಕು ಹಿಡಿದ ಚಿಕ್ಕೆ ಚಂದಿರ ಸೂರ್ಯ
ಅವಳ ಕಣ್ಣೊಳಗೆ ಹಾದು ಹೋದರೂ
ಯಾವುದೂ ನಿಲ್ಲಿಲಿಲ್ಲ
ನಾನು ಮೂಡಲೇ ಇಲ್ಲ.

ನೆನಪಿನ ಹಾಳುಗಳಲ್ಲಿ ಅಲೆದಾಡಿದಳು ಗೆಳತಿ
ಜೊತೆಯಲ್ಲಿ ನಾನಿರಲಿಲ್ಲ.
ಅವಳ ತುಟಿಗಂಟಿದ ಹೆಸರು ಅಳಿಸಿ ಹೋಗಿದ್ದವು,
ನನ್ನದು ಕೂಡ.

ಕೋಶದಲ್ಲಿ ಶಬ್ದಾರ್ಥ ಹುಡುಕುವರಂತೆ
ಕಣ್ಣತ್ತ ನೋಡುತ್ತಾ ಕೂತೆ,
ಅವಳು ಕೂಡ.

ಮನುಷ್ಯನಿಗೆ ಸ್ವಾತಂತ್ರವೇ ಇಲ್ಲ.
ಗೊತ್ತ ಇವಳ್ಯಾರೆಂದು, ಗುರುತು ಹಿಡಿಯೆಂದು
ನಮ್ಮಿಬ್ಬರ ಹಳೆಯ ಫೋಟೊ ತೋರಿಸಿದೆ.
ಹೋ ಉರಿದ ಸಂಭ್ರಮ ಹಾ ಕಳೆದ ಹಂಗಾಮ
"ಗೆಳೆಯಾ, ನಾವೀಗ ಬೇರೆ ದೇಶದಲ್ಲಿದ್ದಂತೆ
ಅನ್ನಿಸೋದಿಲ್ಲವೆ?"

ಅದೂ ನಿಜವೆ. ಫೋಟೋದೊಳಗಿನ ಅವಳ
ಉಡುಪನ್ನು ಬದಲಿಸಿ ರಂಭೆಯ ಮಾಡುವುದು
ಎಷ್ಟೊಂದು ಸುಲಭವಿತ್ತು!
ಆಗ ಇಬ್ಬರಿಗೂ ಅವಸರ, ಹೊತ್ತಿಸಿ ಪರಸ್ಪರ
ನಿಂತಲ್ಲಿ ನಿಲ್ಲದೆ ಕೂತಲ್ಲಿ ಕೂರದೇ
ಏನೋ ಮಹಾ ಒಗಟು ಬಿಡಿಸುವರಂತೆ
ಸೂರ್ಯನ್ನ ತರುವವರಂತೆ
ಸರಸರ ಧುಮುಕಿದೆವು. ಅಲ್ಲ
ಧುಮುಕಲ್ಪಟ್ಟೆವು.

ಮೈ ಸ್ವಯಂ ಬೆಂಕಿಯಾಗಿದ್ದಾಗ ನೆರಳಿನ ಭಯವಿರಲಿಲ್ಲ.
ನೋಡೀಗ ಆರಿದ ಮೈಗೆ ಮೂಡಿದ ನೆರಳು
ಬೆಂಕಿಯ ಕೇಕೆಗೆ ಥೈ ಥೈ ಕುಣಿಯುತ್ತವೆ.

ಅಂದಿನ ರಂಭೆ ಇಂದಿನ ಒಣಮರದ ರೆಂಬೆಯಾದಳು
ಹೆಂಗೆ? ಇನ್ನು ನಾ ಹೆಂಗಿರುವೆ?

“ಹೇಳು ಗೆಳತೀ ಒಳಗಿದ್ದ ಧಗಧಗ ಬೆಂಕಿ
ಹೊರಬಂತು ಯಾವಾಗ? ಹ್ಯಾಗೆ ಹ್ಯಾಗೆ?”

“ನಿಜ ಗೆಳೆಯಾ ನಮಗೆ ಸ್ವಾತಂತ್ರ್ಯವೇ ಇಲ್ಲ”.

## ರಾಮಾಯಣವೂ ಗೋದೂ ತಾಯಿಯೂ

ಗೋದೂ ತಾಯಿ, ಸ್ವಲ್ಪ ವಿಸ್ತಾರ ಬಾಯಿ, ಸದಾ
ಹರಿರಾಮಾ, ಅಯ್ಯಮ್ಮಾ ಐವತ್ತರ ಈಯಮ್ಮ
ನ ಬಲಗೈ ಸವರಿದರೆ ರಾಮಾಯಣವ
ದೇಹದ ಎಲ್ಲೆಲ್ಲೆಲ್ಲೋ ರೋಮಾಂಚನದನುಭವ!

ಈಕೆಯ ಎದುರಿಗಿರಲೇಬೇಕು ರಾಮಾಯಣ, ಬತ್ತಿ
ಹೊಸೆವಾಗಲೂ, ಮಗನ ಬೈವಾಗಲೂ, ತರಕಾರಿಯ
ಪೈಪೈಸೆ ಚೌಕಾಶಿಗೂ, ತರಾಟೆಗೆ ತಗೊಂಡು ಸೊಸೆಯ
ಮಾಡಿ ತರಲೆಯ ‘ಮದುವೆಯಾಗಿ ಮಗನ
ಹೆರುವ ತನಕ ನೋಡಿರಲಿಲ್ಲವೇ ನಾನವರ ಮುಸುಡಿಯ’
ಎಂದು ಹೇಳುವಾಗಲೂ, ಅಥವಾ ಯಾವಾಗಲೂ.

ಕಸಗುಡಿಸುತ್ತ ಸೊಸೆ ಮುಟ್ಟಿದರೆ, ಶರ್ಟು ಕಳಚುತ್ತ
ಮಗ ಕಣ್ಣಾಡಿದರೆ, ಪಕ್ಕದ ಮನೆಯ ಸೊಕ್ಕಿನ ಹುಡುಗರು
ಆಟದ ಗತ್ತಿನಲ್ಲಿ ತಟ್ಟಿದರೆ - ಏನು? ರಾಮಾಯಣವ, –
ಗೊತ್ತಲ್ಲ ಗೋದೂ ತಾಯಿಗೆ ಸ್ವಲ್ಪ ವಿಸ್ತಾರ ಬಾಯಂತ,
ತೆರೆಬಾಯಿಂದ ಬೈಗುಳದ ಹೂಹೂಹೂ ಪೇರಿಸಿ,
ಸ್ವರ್ಗ ನರಕ ತಿಥಿಗತಿ ಪಿಂಡ, ಸತ್ತ ಗಂಡ
ಕಾಶಿ ಹರಿದ್ವಾರದ ಹೆಸರಿನಿಂದ ಹೆದರಿಸಿಯಾಳು.

ಇಲ್ಲಾ ಒಮ್ಮೊಮ್ಮೆ ಯಾರಿಲ್ಲದಾಗ ತಂತಾನೆ ಬೆರಳೆಣಿಸಿ
ತೂರಿ ರಾಮಾಯಣದಲ್ಲಿ ಮಾತಾಡಿಕೊಳ್ಳುತ್ತಾಳೆ ವಟವಟ.
ವಾದಿಸಿ ಜಗಳಾಡಿ ಅಳುತ್ತಾಳೆ ಸಹ! ಬಹುಶಃ
ವ್ಯರ್ಥಗಳ ಸಮರ್ಥಿಸಿಕೊಳ್ಳುತ್ತ, ಅಪಾರ್ಥದಲ್ಲಿ
ಅರ್ಥಗಳ ಸೃಷ್ಟಿಸುತ್ತ, ಇಲ್ಲಾ
ರಾಮಾಯಣದ ಮಹಿಮೆ ಜಪಿಸುತ್ತ.

ಈಗೆಲ್ಲಿಯಾದರೂ ಅಪ್ಪಿತಪ್ಪಿ ಸೊಸೆಯ ನೆರಳು
ಗೋಚರಿಸಲಿ - ಗೊತ್ತಲ್ಲ ಗೋದೂ ತಾಯಿಗೆ
ಸ್ವಲ್ಪ ವಿಸ್ತಾರ ಬಾಯಂತ -
'ಲೇ ಹಾದರಗಿತ್ತಿ, ನೋಡು ರಾಮಾಯಣದ ಸೀತೆ
ನಿನ್ನಂತಲ್ಲ, ಅತ್ತೆಯ ಉಗುಳು ದಾಟಿದವಳಲ್ಲ
ಗರತಿ, ಪತಿವರತಿ'. . . . . ಇತ್ಯಾದಿ.

ಹಾಗಂತ ರಾಕ್ಷಸಿಯಲ್ಲ, ಮಗ ಸ್ನಾನಕ್ಕಿಳಿಯಲಿ
ಬೆನ್ನಿಗೆ ಸೋಪುಜ್ಜುತ್ತ, ಊಟಕ್ಕೆ ಕೂರಲಿ
ತೆರೆದೆದೆ ಗಮನಿಸದೆ ಸೀರೆ ಸೆರಗಿಂದ
ಗಾಳಿ ಬೀಸುತ್ತ ಹೇಳುತ್ತಾಳೆ: ಮಗಾ ಕಂಡೆಯಾ
ನಿನ್ನ ಹೆಂಡತಿಯ ಮೊಂಡು ಮೋಟು ಜಡೆಯ?
ಸೊಟ್ಟ ಸೌಟೆದೆಯಾ; ಆಗಿನಕಾಲ; ಈಗೆಲ್ಲಿದೆ ಎಲ್ಲಾ:

ಚಿಕ್ಕಂದಿನಲ್ಲಿ, ಯಾಕೆ, ದೊಡ್ಡವನಾದರು ಈಗ -
ಮದುವೆಯಾದರೂ
ಮಗ ಮಲಗಬೇಕು ತನ್ನೆದರಲ್ಲೆ, ಸೊಸೆ ಅಡಿಗೆಮನೆಯಲ್ಲಿ.

ಮೊದಮೊದಲು ಅಕುಂಚನವಾಗಿ ಸಂಕೋಚದಲ್ಲಿ
ಆಮೇಲೆ ಅಡ್ಡಾದಿಡ್ಡಿ ದೊಡ್ಡ ದೇಹದಲ್ಲಿ ಗೊರಕೆಯ

ತುರೀಯಾವಸ್ಥೆಗೆ ತಲುಪಿದನೋ -
ಗೊದು ತಾಯಿ, ವಿಸ್ತಾರ ಬಾಯಿಮುಚ್ಚಿ, ಮೈಯೆಲ್ಲ ಕಣ್ಣಾಗಿ
ಕಣ್ಣೆಲ್ಲ ಕೈಯಾಗಿ, ರಾಮಾಯಣದ ರಹಸ್ಯ ಪುಟದಲ್ಲಾಡಿಸುತ್ತ
ಆಡುತ್ತ ಆಡಿಸುತ್ತ ಬೆರಳ,
ಕಂಪಿಸುವ ಮೂಗಿನ ಕೆಂಪು ಮುಖದಲ್ಲಿ
ತಿಳಿ ಬೆವರೊಡೆದು ಮಲಗುತ್ತಾಳೆ. ಬೆಳಿಗ್ಗೆದ್ದು
ಹೇಳುತ್ತಾಳೆ: ಮಗಾ,
ಕನಸಿನಲ್ಲಿ ನಿಮ್ಮಪ್ಪ ಬಂದಿದ್ದ
ರಾಮಾಯಣವೇನು ಸಾಮಾನ್ಯವೇನೊ?

ನಿಜ ಹೇಳಲೆ? ಅವಳಿಗೆ ರಾಮಾಯಣ ತಿಳಿಯುವುದಿಲ್ಲ
ಯಾಕೆಂದರೆ ಓದು ಬರಹ ಬಲ್ಲವಳಲ್ಲ.
ಇದ್ದಿರಬಹುದು ಅಭಿಮಾನ
ಯಾಕೆಂದರೆ ಅದು ಗಂಡನ ರಾಮಾಯಣ.

ದಡ್ಡಮಗ ಇಂದ್ರಿಯದ ಕಳವಳಕೆ ಹಳಹಳಿಸಿ
ಹೆಂಡತಿಯ ಬೆನ್ನ ಹಿಂದೆ ಕದ್ದು ಸುಳಿದಾಡಿದನೊ -

ಈ ತಾಯಿಗೆ ಮಹಾಮಾಯಿಗೆ ಹ್ಯಾಗೆ ತಿಳಿಯುತ್ತದೋ?
ಹಂಗಾಮಿಗೆ ಹದವಾಗಿ ಸೊಸೆಯ ಮೈ ಬಾರಿಸಿ ಚರ್ಮ
ಸುಲಿದು ಮಡಿಬಟ್ಟೆಯ ಹಾಗೆ ಒಣಗು ಹಾಕುತ್ತಾಳೆ.

ಚರ್ಮ ಹೀಗೆ ಒಣಗುತ್ತಿದ್ದಾಗಲೇ
ಮೊದಲಿನಿಬ್ಬರು ಸೊಸೆಯಂದಿರು ಗೊಟಕ್ಕೆಂದದ್ದು
ಗೋದೂ ತಾಯಿ ಬಕೆಟ್ಟು ಕಣ್ಣೀರು ಸುರಿಸಿದ್ದು
ಬಿಡು ಮಗಾ ಸಾವಿರ ಹೆಣ್ಣ ತಂದೇನಂದದ್ದು
ಮಗ ಯಾಕೆ ಊರಿಗೂರೇ ಮೂಗಿನಮೇಲೆ ಬೆರಳಿಟ್ಟದ್ದು
ಈಗಿದ್ದ ಸೊಸೆಗೆ ಬಿದ್ದ ಕನಸಿನ ಪ್ರಕಾರ - ಸುಳ್ಳೆಷ್ಟೋ ಖರೆ ಎಷ್ಟೋ!

ತನ್ನ ಗಂಡನ್ನ ಹೆಣ್ಣು ಹುಲಿಯೊಂದು ಅರ್ಧ ನುಂಗಿದ ಹಾಗೆ
ಕನಸಾಗಿ ಕರುಬಿದಳಂತೆ

ಕಿವಿಕಿವಿಗೆ ಹಬ್ಬಿ ಒಬ್ಬೊಬ್ಬರು ಒಂದೊಂದು ಥರ,
ಅವರವರ ಶಕ್ತ್ಯಾನುಸಾರ, ಸೊಸೆಯಂದಿರ ಸಾವಿಗೆ
ಭಾಷ್ಯ ಬರೆದು ತೃಪ್ತಿಪಟ್ಟರಂತೆ.

ವಯಸ್ಸಾದಂತೆ ಬುದ್ಧಿ ಬರುವುದಂತೆ
ಕತ್ತೆಯಂಥ ಕತ್ತೆಗೂ. ಬಂತು ಮಗನಿಗೂ,
ತಾಯಿ ಹೋಗಿದ್ದಳು ಮಡಿನೀರಿಗೆ, ಹೊಳೆಗೆ.
ಬಂದ ಬುದ್ಧಿ ಸರಿಯಿದ್ದರೆ ರಾಮನ ಭಾಗ ಬರಲಿ,
ಇಲ್ಲಾ, ರಾವಳನ ಭಾಗ ಬರಲೆಂದು ಅವಸರವಸರವಾಗಿ
ರಾಮಾಯಣದಲ್ಲಿ ಬೆರಳು ಸೇರಿಸಿದ್ದ - ಕೈಗೆ
ಮಿದು ಮಿದು ಉದ್ದುದ್ದ ಹತ್ತಿ, ಪುಟತೆಗದ,
ಬಿಳಿ ಬಿಳಿ ಗರಿ ಗರಿಯ ನಿರೋಧ ನೋಡಿ
ಬಿಸಿಯೇರಿ, ತಣ್ಣಗಾಗಿ, ಅಬ್ಬಬ್ಬಾ ಎಂದು
ಪುಟ ಮುಚ್ಚಿದ.

ಅದು ರಾಮನದೇ? ರಾವಳನದೆ? ಅಂತ ಶಾಸ್ತ್ರಿಗಳಲ್ಲಿ
ಹೊತ್ತಿಗೆ ತೆಗೆಸಿದರೆ - ಭೂತಬಾಧೆ ಮಗಾ, ಮನೆ
ಬಿಡೂಂತ ಬಂತು. ಮನೆಗೆ ಬಂದು
ಹೆಂಡತಿಯೊಂದಿಗೆ
ಮನೆ ಬಿಡುವುದಾಗಿ ಹೇಳಿದ. ಯಾರಿಗೆ? ತಾಯಿಗೆ.
ಗೋದೂ ತಾಯಿ ವಿಸ್ತಾರ ಬಾಯಿಂದ ಹೇಳಿದಳು:
ಆಯ್ತಲ್ಲ, ಈಗ ಯಮಗಂಡ ಕಾಲ ನಾಳೆ ಹೋದೀಯಂತೆ ಬಿಡು ಮಗಾ.
ಬೆಳಗ್ಗೆದ್ದು ಹೆಂಡತಿಯ ತಟ್ಟಿದ. ಹೆಣವಿತ್ತು; ಜೀವವಿಲ್ಲ.

ಬೆದರಿ ಬೆಕ್ಕಸ ಬೆರಗಾಗಿ ಹೊರಗೆ ಬಂದರೆ
ಗೋದೂ ತಾಯಿ - ಬಿಡು ಮಗಾ ಸಾವಿರ ಹೆಣ್ಣ ತಂದೇನೆಂದು
ವಿಸ್ತಾರ ಬಾಯಿ ತೆರೆದಾಗ - ಮಗ
ಅಯ್ಯಯ್ಯೋ ಹುಲಿ ಹುಲಿ ಎಂದು

ತಲೆಯ ಬುದ್ಧಿಯನ್ನು ಕಾಲಿಗೆ ಹೇಳಿದ.
ಈ ಕಥೆಯ ನೀತಿಯಿಷ್ಟೆ - ನಿಮ್ಮ ಮಗಳಿಗೆ
ಗೋದೂತಾಯಿ ಅಂತ ಹೆಸರಿಡಬೇಡಿ.

## ಹಳದಿ ಆಶೀರ್ವಾದ

ಹಿಮದಾಚೆ ಸೀಮೆಯಿಂದೀಗ ತಾನೇ ಬಂದೆ
ತಂದೆ ಹಬ್ಬದ ಸುದ್ದಿ; ಶರಣು ಸ್ವಾಮಿ.
ಆ ಕಡೆಯ ಜನ ಕುಶಲ, ಕ್ಷೇಮ, ಮಳೆ ಬೆಳೆ ಚೆನ್ನ
ಇನ್ನು ಪರವಾಯಿಲ್ಲ; ಖುಶಿಯಿಂದಿರಿ.

ಅಲ್ಲಿರುವ ನೆಲ, ನೀರು ಹಳದಿ, ಮುಗಿಲೂ ಹಳದಿ,
ಜನ ನಕ್ಕರೂ ಹಳದಿ, ಏನು ಮಂದಿ!
ಸುಳ್ಯಾಕೆ ಹೇಳೇನು, ಅವರು ನಕ್ಕಾಗೊಮ್ಮೆ
ಕಣ್ಣು ತುಳುಕುವ ನೀರು, ಅದೂ ಹಳದಿ!

ಕಂಡೆ ಮಾವರ ಮಾವ ಮಾವೋತ್ಸೆ-ತುಂಗರನು
ಕ್ಯಾಲೆಂಡರಿನ ಶಿವನ ಹಾಗೆ ತೇಜ!
ತೆರೆದ ಪುಸ್ತಕದೊಳಗೆ ಮುಖ ಹುಗಿದ ಧ್ಯಾನಸ್ಥ:
ಹಿನ್ನೆಲೆಗೆ ಹಳದಿ ಪ್ರಭೆ - ಎಷ್ಟು ಸಹಜ!

ಹರಿದ ಹುಬ್ಬಿನ ಕೆಳಗೆ ಹೊಳೆವ ನೀಲೀ ಕಣ್ಣು;
ಒಂದು ನಕ್ಕರೆ, ಒಂದು ಸುಮ್ಮನಿತ್ತು.
ಕೆನ್ನೆಗಳ ವಿನ್ಯಾಸ ಖರೆ ಹೇಳಲೇ ಸ್ವಾಮಿ? –
ನಮ್ಮ ಗ್ಲೋಬುಗಳೆಲ್ಲ ಯಃಕಶ್ಚಿತ!

ಮುಂದೊಡೆಯ ಮೇಲೊಂದು ಚೆಂದೊಳ್ಳೆ ಪಾರಿವಾಳ
ಬೆನ್ನಲಾಡುವ ದೊರೆಯ ಒರಟು ಬೆರಳು,
ಈಗಲೋ ಆಗಲೋ ಸೋ ಎನ್ನಲೋ, ಇಲ್ಲ
ಅದರ ಕಣ್ಣೊಳಗಿತ್ತು ನನ್ನ ನೆರಳು.

ತಲೆ ತುರಿಸಿ ಕಾಲಿಂದ ನೆಲ ಗೀಚಿ ಕೆಮ್ಮಿದೆನು
ಮೈಯೆಲ್ಲ ಕೈಯಾಗಿ ಮುಗಿದು ನಿಂತೆ.
ಏನ ಏವಚವೇದಗಾಂಧಿ ಸಂಸ್ಕೃತಿ ಅಂತ
ಭಾರತದ ಹರಿಕಥೆಯ ಹಾಡಿಬಿಟ್ಟೆ.

ಇಡೀ ಗ್ಲೋಬು ನಕ್ಕಂತೆ ಸೂಸಿದರು ಸ್ವಾಮಿ
ಬಲಹುಬ್ಬು ಹಣೆಗೇರಿ ಗಂಟಾಯಿತು.
ಕೆನ್ನೆ ಮುಷ್ಟಿಯ ಮೇಲೆ ಊರಿದರು, ನೋಡುತ್ತ
ಇಡಿ ಏಶಿಯಾ ಖಂಡ ಮುದುಡಿಯಾಯ್ತು.

ಪಾರಿವಾಲದ ಮೈಯ ತಟ್ಟಿ ನಕ್ಕರು ಸ್ವಾಮಿ
ಹಿಕ್ಕೆ ಹಾಕಿತು ಒಂದು ಎರಡು ಮೂರು,
ಇತ್ತ ಎಸೆದರು, ಸ್ವಾಮಿ ಹೈಹೈ ಹಸಾದವೆಂ-
ದುಡಿಯೊಡ್ಡಿ ಹಿಡಕೊಂಡೆ; ಹಿಕ್ಕೆಯೂ ಹಳದಿ!

ಹಿಕ್ಕೆ ಕೊಟ್ಟರು ನೋಡಿ; ಹೆಚ್ಚು ಬೆಳೆ ಗ್ಯಾರಂಟಿ
ಬೆಳ್ಳಿ ಬಟ್ಟಲ ಭಾಗ್ಯವುಂಟು ಖಾತ್ರಿ.
ತೂಗು ತೊಟ್ಟಿಲ ಭಾಗ್ಯ ಮೂರು ಮೀರುವುದುಂಟು
ಇನ್ನು ಪರಾವಯಿಲ್ಲ; ಖುಶಿಯಿಂದಿರಿ.

## ಸಾವಿರದ ಶರಣವ್ವ ಕರಿಮಾಯಿ ತಾಯೇ

ಮುಂಗೋಳಿ ಕೂಗ್ಯಾವು ಮೂಡsಣ ಬೆಳಗಿ
ತಂಗ್ಯಾಳಿ ಬೀಸ್ಯಾವು ತವರಿ ಹೂವರಳಿ
ಹೂಹೂವಿನೊಳಗೊಂದು ಕೈಲಾಸವರಳ್ಯಾವು
ಕೈಲಾಸ ಕೈಮುಗಿದು ಭೂಲೋಕಕಿಳಿದಾವು
ಸಾವಿರದ ಶರಣವ್ವ ಕರಿಮಾಯಿ ತಾಯೆ ||

ಬಂಡಾರ ಮೈಯವಳೆ ಬಂಗಾರ ಮುಖದವಳೆ
ಸೂಸುನಗೆಯಲಿ ಜಗದ ಲೇಸ ತುಳುಕಿಸಿದವಳೆ
ಒಲೆದು ಕೂಡಿದಿ ತಾಯಿ ಕುಲದಾಚೆಯವನ
ಬಸಿರಾಗಿ ಎದುರಿಸಿದಿ ದೇವ ದಾನವರನ್ನ
ಈರೇಳು ಭುಜದವರ ಏಳೇಳು ಶಿರ ತರಿದು
ಕೊರಳೀಗಿ ಹೂಹಾರ ಧರಿಸಿಕೊಂಡವಳೇ
ಸಾವಿರದ ಶರಣವ್ವ ಕರಿಮಾಯಿ ತಾಯೆ ||

ಮೂರು ಲೋಕಕ ಅಧಿಕ ನಿನ್ನ ಕಾರಣಿಕ
ಮುಖ್ಯರ ಶಿಖಿ ಹಿಡಿದು ಹಾಕಿದಿ ನೆಲಕ
ಗುಂಡ ತೇಲಿಸಿದೆವ್ವ ಬೆಂಡ ಮುಳುಗಿಸಿದಿ
ಗಂಡಗಂಡರನೆಲ್ಲ ಹೆಂಡಿರ ಮಾಡಿ
ಹೆಂಡೀರ ಭಂಡಾಟಕೆದುರಾಗಿ ನಿಲ್ಲಽದೆ
ರಂಡೀ ಹುಣಿವೀ ದಿನ ಮಿಂಡ್ಯಾದೆ ತಾಯೇ
ಸಾವಿರದ ಶರಣವ್ವ ಕರಿಮಾಯಿ ತಾಯೆ ||

ಬಾಗೀದ ಭಕ್ತರಿಗಿ ಬೇಡಿದ್ದ ಕೊಟ್ಟವಳೆ
ಗೆಜ್ಜೀಕಾಲಿನ ಮಗನ ಬಂಜೀ ಉಡಿಗಿಟ್ಟವಳೆ
ಕಲ್ಲೀನ ಎದೆಯೊಳಗ ಹುಲ್ಲು ಚಿಗುರಿಸಿದವಳೆ
ಬೇಲೀಯ ಮುಳ್ಳೀಗೆ ನೀಲೀ ಹೂ ಕೊಟ್ಟವಳೆ
ಬೆಣ್ಣೆ ಸುಣ್ಣದ ಗುರುತ ತೋರೀಸಿಕೊಟ್ಟವಳೆ
ಸುಣ್ಣಽದ ನೀರಾಗ ಜೀವಾ ಕೊಟ್ಟವಳೆ
ಸಾವಿರದ ಶರಣವ್ವ ಕರಿಮಾಯಿ ತಾಯೆ ||

**(ಕರಿಮಾಯಿ)**

# ಒಂದಾನೊಂದು ಕಾಲದಲ್ಲಿ

*ಒಂದನೆಯ ಚೌಕ*
ಒಂದಾನೊಂದು ಕಾಲದಾಗ ಏಸೊಂದ ಮುದವಿತ್ತ
ಏಸೊಂದ ಮುದವಿತ್ತ
ಮುದಕೊಂದ ಹದವಿತ್ತ
ಹದಕ ಹಂಗಾಮಿತ್ತ | ಅದಕೊಂದ
ಶಿವನ ಲಗಾಮಿತ್ತ ||

ಏ ಒಂದಕೆಂಟ ಸಂಭವಿಸುತ್ತಿದ್ದವೋ
ಕುರುಹುಗೊಂಡವೆಲ್ಲ ಹೆಸರುಗೊಂಡವೋ
ಆಳದ ಹಳಿಗವಿ ಬೆಳಕನುಟ್ಟವೋ
ಹಾಳ ಬಾವಿಗೂ ಕಣ್ಣ ಬಂದವೋ
ಬೇಲಿಯ ಮ್ಯಾಲೆ ನೀಲಿಯ ಹೂವೋ
ಬೀಳುನೆಲದ ಎದಿ ಕಲ್ಲ ಕರಗಿ ಸೆಲಿ
ಚೆಲ್ಲನೆ ಚಿಮ್ಮಿತ್ತ |
ಬೆಲ್ಲದ ಕೆಸರಿಗಿ ಸಕ್ಕರಿ ಮಳಲಯ್ಯ

ಹಾಲಿನ ಹೊಳಿಯಿತ್ತ | ಹೊಳಿ ನೋಡ
ಭರ್ತಿ ಹರಿಯತಿತ್ತ ||

*ಎರಡನೆಯ ಚೌಕ*
ಏನ ಹೇಳಲಿ ಕಾಲದ ಮಹಿಮಾ ತಪ್ಪಿದಾವ ತಾಳ
ಗಾಳಿಗಿ ಬೆದಿ ಬಂದ ಬೀಸ್ಯಾವ ಬಿರುಗಾಳಿ
ಉಸರ ಹಾಕತಾಳ | ಕೇಳವ
ರಿಲ್ಲ ನೆಲದ ಗೋಳಾ ||

ಇದ್ದುದೆಲ್ಲ ಹೋಗಿ ಇತ್ತೋ ಇಲ್ಲೊ ಆಗಿ
ಕರುಹುಗೆಟ್ಟುದಕ ಹೆಸರೇನಿಟ್ಟಿ?
ಸೀಮೆಯ ಕಲ್ಲಿಗಿ ಬೇಲಿಯ ಸಾಕ್ಷಿ
ಬೇಲಿ ಹೂವಿನಾಗ ಹನಿ ಹನಿ ಇಬ್ಬನಿ
ರಗತ ತಟಕತಾವ ಇಬ್ಬನಿ ಹನಿಗಿ
ಸಂಜಿ ಮುಂಜಾನೆ ಮಂಜು ಮೂಡಿದರ
ಮಂಜು ಕೆಂಪಗಿತ್ತು |
ಹಾಲಿನ ಹೊಳಿಗಿ ರಗತ ಬೆರಸಿದರ
ಎಳಿ ಮೀನಿಗಿ ಕುತ್ತು | ಹದ್ದಿನ
ನೆರಳು ಸುಳಿಯುತಿತ್ತು ||

*ಮೂರನೆಯ ಚೌಕ*
ಏನಕೇನ ಸಂಭವಿಸದವಯ್ಯಾ ತಿಳಿಯಲಿಲ್ಲ ಮಾಯಾ
ಎಲ್ಲಿ ನೋಡಿದಲ್ಲಿ ವೀರಗಲ್ಲುಗಳು
ಕಲ್ಲಿಗೊಂದು ಕಥೆಯ | ಹೇಳ್ಯಾವ
ನೆನಪಿನ ಲಾವಣಿಯಾ ||

ಒಂದ ಹೋಗಿ ಮತ್ತೊಂದು ಆದುವೋ
ಗುರುತಿನ ಹೆಸರು ಬದಲಿಯಾದವೋ
ಕಾರಮೋಡಗಳು ಕಿಡಿಸುರದಾವೋ
ಹಸನು ಮಾಡಿ ಹರಗಿದ್ದ ಹೊಲದಾಗ
ಬಗಸಿಲೆ ಬಿತ್ತಿ ಸನಿಕಿಲೆ ಎಳದಾರ
ಎಲುವಿನ ಫಲರಾಶಿ |
ಹರಿಯುವ ಹೊಳಿಯಾಗ ವಿಷ ಹರಿಯತಾವ
ಜೀವರಸದ ಬದಲಿ | ಕಣ್ಣಾಗ
ಬಸದಾವ ರಗತ ಹನಿ ||

**(ಒಂದಾನೊಂದು ಕಾಲದಲ್ಲಿ)**

# ಕಾಡುಕುದುರೆ

ಕಾಡುಕುದರಿ ಓಡಿ ಬಂದಿತ್ತ ||

ಊರಿನಾಚೆ ದೂರ ದಾರಿ
ಸುರುವಾಗೊ ಜಾಗದಲ್ಲಿ |
ಮೂಡಬೆಟ್ಟ ಸೂರ್ಯಹುಟ್ಟಿ
ಹಸರಿನ ಗುಟ್ಟ ಒಡೆವಲ್ಲಿ |
ಮುಗಿವೇ ಇಲ್ಲದ |
ಮುಗಿಲಿನಿಂದ |
ಜಾರಿಬಿದ್ದ ಉಲ್ಕೀ ಹಾಂಗ |
ಕಾಡಿನಿಂದ ಚಂಗನೆ ನೆಗೆದಿತ್ತ ||

ಮೈಯಬೆಂಕಿ ಮಿರಗತಿತ್ತ
ಬ್ಯಾಸ್ಗಿ ಬಿಸಿಲ ಉಸಿರಾಡಿತ್ತ |
ಹೊತ್ತಿ ಉರಿಯೋ ಕೇಶರಾಶಿ
ಕತ್ತಿನಾಗ ಕುಣೀತಿತ್ತ |
ಧೂಮಕೇತು |
ಹಿಂಬಾಲಿತ್ತ |
ಹೌಹಾರಿತ್ತ ಹರಿದಾಡಿತ್ತ |
ಹೈಹೈ ಅಂತ ಹಾರಿ ಬಂದಿತ್ತ ||

ಕಣ್ಣಿನಾಗ ಸಣ್ಣ ಖಡ್ಗ
ಆಸುಪಾಸು ಝುಳಪಿಸಿತ್ತ |
ಬೆನ್ನ ಹುರಿ ಬಿಗಿದಿತ್ತಣ್ಣ
ಸೊಂಟದ ಬುಗುರಿ ತಿರಗತಿತ್ತ |
ಬಿಗಿದ ಕಾಡ |
ಬಿಲ್ಲಿನಿಂದ |
ಬಿಟ್ಟ ಬಾಣಧಾಂಗ ಚಿಮ್ಮಿ |
ಹದ್ದ ಮೀರಿ ಹಾರಿ ಬಂದಿತ್ತ ||

ನೆಲ ಒದ್ದು ಗುದ್ದ ತೋಡಿ
ಗುದ್ದಿನ ಬುದ್ಧ ಒದ್ದಿಯಾಗಿ
ಒರತಿ ನೀರು ಭರ್ತಿಯಾಗಿ
ಹರಿಯೋಹಾಂಗ ಹೆಜ್ಜೀ ಹಾಕಿ |
ಹತ್ತಿದವರ |
ಎತ್ತಿಕೊಂಡು |

ಏಳಕೊಳ್ಳ ತಿಳ್ಳೀ ಆಡಿ |
ಕಳ್ಳೆಮಳ್ಳೆ ಆಡಿಸಿ ಕೆಡವಿತ್ತ ||

**(ಕಾಡುಕುದುರೆ)**

## ಬಿಚ್ಚಗತ್ತಿಯ ಬಂಟನ ಕತಿಯ

ಬಿಚ್ಚಗತ್ತಿಯ ಬಂಟನ ಕತಿಯ
ಬಲ್ಲಿರೇನ ಯಾರಾ ?
ಸುತ್ತ ದೈವದಾಗ ನಿಂತ ಕೇಳಿದರ
ಆದಾರ ಬೇಖಬರಾ
ಹೆಂಗರೆ | ತಿಳಿದಾವು ಮಜಕೂರಾ ||

ಅಡಗೂಲಜ್ಜಿಗಳ ಹಿಡದ ಕೇಳಿದರ
ತುಟೀ ಬಿಕ್ಕನಮುಕಿ
ಹಾಕ್ಯಾರ | ಹುಬ್ಬಿನ ತುದಿ ಕುಣಿಕಿ
ಹರೇ ಅಂಬುವ ಹಾಲಿನ ಗಡಿಗಿ
ಒಡೆದನೇನೊ ಬೆರಿಕಿ
ಹೇಳಾಕ ಒಲ್ಲರವನ ಖ್ಯಾತಿ
ನೆನದರ | ಬಾಡತಾವ ಮೋತಿ ||

ಬಯಲಿನ ಕಣ್ಣಿಗಿ ಬಣ್ಣ ಬರೆದವನ
ಕತಿಗಿ ಸಾಕ್ಷಿ ಯಾರಾ ?
ವೀರನ | ಕತಿಗಿ ಸಾಕ್ಷಿ ಯಾರಾ ?
ಕದನವಾಡಿದ ಬಟಾಬಯಲಿನಾಗ
ಕಾಡ ಬೆಳೆದಿತಲ್ಲ,
ಬಯಲಿನ | ಹೆಸರು ತಿಳಿಯದಲ್ಲಾ ||

ಕರುಳು ಇಲ್ಲದ ಕಲ್ಲೇನ ಬಲ್ಲುದೊ
ಕಲ್ಲಿಗಿ ಬಾಯಿಲ್ಲಾ
ಶಾಸನ | ಕಲ್ಲಿಗಿ ಬಾಯಿಲ್ಲಾ
ಕಾಲನ ಕಾಲಿನ ತೊತ್ತಳದುಳಿತಕ
ಪುಡಿಪುಡಿಯಾಯ್ತಲ್ಲಾ
ಶಾಸನ | ಧೂಳಿಯಾಯಿತಲ್ಲಾ ||

ಹಾದಿಹೋಕರ ಹಾದೀ ತಿರುವಿನಾಗ
ಭೂತವಾಗಿ ಕಂಡ

ಬಂಟ | ಭೂತವಾಗಿ ಕಂಡ
ಅಳೋ ಮಕ್ಕಳ ಗದರಿಸಿ ಕರದಾರ
ಅವನ ಹೆಸರುಗೊಂಡಾ
ಮಂದಿ | ಅವನ ಹೆಸರುಗೊಂಡಾ ||

ಹಳೀ ಹೆಳವರ ಹರಕ ದಪ್ತರಾ ಹಾಕತಾವ ಉಸರಾः
ಬಿಚ್ಚಗತ್ತಿಯ ಬಂಟನ ಕತಿಯ
ಬಲ್ಲಿರೇನ ಯಾರಾ ?
ಹೆಂಗರೆ | ತಿಳದಾವು ಮಜಕೂರಾ ||

**(ಒಂದಾನೊಂದು ಕಾಲದಲ್ಲಿ)**

## ಬ್ಯಾಟಿ ಬ್ಯಾಟಿಯನಾಡಿದಾ

ಬ್ಯಾಟಿ ಬ್ಯಾಟಿಯನಾಡಿದಾ |
ಬ್ಯಾಡರ ಹುಡುಗ |
ಕಾಡ ಬ್ಯಾಟಿಯನಾಡಿದಾ ||

ಕಾಡೀನ ಮೈಸವರಿ
ಸೂಸ್ಯಾವ ಬಿಸಿಗಾಳಿ
ತುಳುಕ್ಯಾವ ಖುಶಿ ಪುರಮಾಸಿ |
ಹವ್ವಲ್ಲೆ ಅಂದರ
ಅವ್ ನೋಡ ಹೂಚಿಗುರ
ಗಂಧ ಸೂಸ್ಯಾವ ಮಲ್ಲೀಗಿ | ಹಾ ಎವ್ವಾ |
ಬಾಯಿ ಬಂದಾವ ಸಂದಿಗೊಂದೀಗಿ ಹಾ ತಾಯಿ ||

ನದರ ನದರಿಗಿ ತಳಕ
ಹಾಕಿದರ ಮೈಪುಳಕ
ಒಳಗ ಒಡದಾವ ತಿಳಿಬೆವರಾ |
ಹಿಂಡನಗಲಿದ ಜಿಂಕಿ
ಹೌಹಾರಿ ಯಾಕ ನಿಂತಿ
ಹಾರಿ ಬಂದಾನ ಹುಲಿರಾಯಾः ಹಾ ಎವ್ವಾ
ಎಲ್ಲಿ ಹೋದೀಯೆ ನನ್ನ ಹುಲ್ಲೇಯ ಮರಿಯೆಂದಾ ||

ಮಾತನಾಡುತ ಬಂದಾ
ಮೈಮ್ಯಾಲ ಕೈ ತಂದಾ
ಬಸವಳಿದಾವ ಹಸಿ ದಿಗರಾ |

ಜೋಲಿ ತಪ್ಪಿದ ಪೋರಿ
ಬಿದ್ದಾಳ ತೆಕ್ಕೀಗಿ
ಕರಗಿ ಹರಿದಾವ ನಾಚೀಕಿ | ಹಾ ಎವ್ವಾ |
ಸಂದ ಉಳಿಯದ ಹಾಂಗ ಒಂದಾಗಿ ಮೈಮುರಿದಾ ||

**(ಕರಿಮಾಯಿ)**

# ಹಾರಿ ಹಾರೈಸುತ

ಹಾರಿ ಹಾರೈಸುತ ಹಲವ ಹಂಬಲಿಸುತ
ಒಲವಿನಾಸರೆ ಬೇಡುತ | ಬಂದೆ
ನಿನ್ನ ಸ್ವಾಗತವಿಲ್ಲ ನಗೆಯ ಹೂ ಬಿಸಿಲಿಲ್ಲ
ಬೆಂಕಿ ಬಿದ್ದವು ಕನಸಿಗೆ ||

ಹೇಗೆ ಹೇಳಲಿ ಹೇಗೆ ಹೇಳಲಾರದೆ ಇರಲಿ
ಬತ್ತಿ ಹೋಗಿದೆ ನಾಲಿಗೆ
ಸಿಂಬೆ ಬಿಚ್ಚುವ ನೆನಪು ಬುಸುಗುಡುವ ಬಿಸಿಯುಸುರು
ಸಂದೇಹ ಸುಳಿದಾಡಿದೆ | ಒಳಗೆ
ಭಗ್ನ ಮಂದಿರ ಮೂಕ ಗೋರಿಯಾಗಿದೆ ಲೋಕ
ಹೀಗೇಕೆ ಬದಲಾಗಿದೆ ||

ಕಾಲನ ಗಡಿ ಮೀರಿ ಕಾಯುವೆ ನಿನಗಾಗಿ
ನನ್ನ ಬಿಡುಗಡೆ ಎಂದಿಗೆ
ಹರುಷ ಹಿಂದಿರುಗಿಸು ಜಡಕೆ ಚೇತನ ನೀಡು
ಸಫಲವಾಗಲಿ ಸಾಧನೆ |
ನನ್ನೆದೆಯ ಬಾನೊಳಗೆ ಮಳೆಬಲ್ಲ ಬರೆದವಳೆ
ಕನಸುಗಳ ಕೊಡುವವಳೆ
ತೋರಿಸು ದಯೆ ಕರುಣೆ ||

**(ಉಡುಗೊರೆ)**

# ಹಾಡು

ಆಳ ಆಳ ಪಾತಾಳದಾಗಿನ
ಮೋಸದಾಗಿನ ಕಸಾ ಸೋಸಿ ನಾ
ಅಸಲ ಹಾಡ ಹೇಳಿದರೂ
ನಂಬಾಣಿಲ್ಲ ನನ್ನ ನಚ್ಚಾಣಿಲ್ಲ ಹುಸಿ
ಹುಸೀ ಎಂಬರವರು.

ದೊಡ್ಡದಲ್ಲ ಘನಸಣ್ಣದಲ್ಲ ಹಾ-
ಡಿತ್ತು ಒಡಲಿನಷ್ಟ.
ಬಣ್ಣ ಇಲ್ಲ ಖರೆ, ಕರ್ರಗಿತ್ತು ಅಮ-
ವಾಸೆ ರಾತ್ರಿಯಷ್ಟ.
ತಣ್ಣಗಲ್ಲ ಬಿಸಿಯಲ್ಲ ಇತ್ತು ಶೀ-
ತೋಷ್ಣ ರಕ್ತದಷ್ಟ.
ನಂಬಲಿಲ್ಲವರು ನೆಚ್ಚಲಿಲ್ಲವರು ತಮ
ತುದೀ ಮೂಗಿನಷ್ಟ.

ಸಹಜವಾಗಿತ್ತು ಹಾಡು ಮರದ ಗಂಟಲಿನ ಚಿಗುರಿನಂತೆ
ಮೂರ್ತವಿತ್ತು ಮುದಿಸೂಳೆ ಆಳುವ ಮೈಮನದ ನೋವಿನಂತೆ
ನಾಡಿಬಡಿತಗಳ ಪ್ರಾಸವಿತ್ತು ನಿಜವಿತ್ತು ನಿಜದ ಹಾಗೆ
ಹೊಟ್ಟೆಕಿಚ್ಚಿನಲಿ ಸುಟ್ಟ ಹಸಿವೆಯ ಕಪ್ಪು ತರ್ಕದಂತೆ
ಕಾರಮೋಡ ಭೋರ್ಗರೆದು ಗುಡುಗುವ ಮಿಂಚಿನೆಳೆಯ ಹೋಲಿದರೂ
ನಂಬಲಿಲ್ಲವರು ನಚ್ಚಲಿಲ್ಲ ಹುಸೀ ಹುಸೀ ಎಂದು ಕೂಗಿದರು.

ಕರುಳಿನಾಳದ ಖರೇದೊಳಗಿಂದ
ಹೊರಗ ಬರುವ ಅವಸರಕ
ತುಸ ರಕ್ತ ಬಂತು ಕಣ್ಣುರಿಯುತಿತ್ತು
ಕಡುನೀಲಿ ಫಾಸ್ಫರಸ್‌ಧಾಂಗ

ತುಟೀ ಕಚ್ಚಿ ನಿಂತಿತ್ತು ಉಕ್ಕುವ
ಬಿಕ್ಕ ತಡಿಯೊ ಹಾಂಗ
ಆದರೇನು ಅದ ಕಂಡ ಒಡನೆ
ಮೈ ಬಿಳಿಚಿ ಕಿರಿಚಿದರು
ಒದರಿ ಕೂಗಿದರು
ಹುಸೀ ಎಂದರವರು.

# ಆಮೇಲೆ ಮರುಗಬೇಡ

ನಡುನೀರಿನೊಳಗೆನ್ನ ಕೈಯ ಬಿಡಬೇಡ
ಆಮೇಲೆ ಮರುಗಬೇಡ ||

ಕಣ್ಣೊಳಗೆ ಬೆರಳಿಟ್ಟು ಸರಸವಾಡುವರೇನ?
ಸೋತವನ ತಿರುತಿರುಗಿ ಇರಿವರೇನ?
ಹುಲ್ಲು ನೆತ್ತಿಯಲಿಟ್ಟು ಶರಣಾಗಿ ಬಂದವನ;
ಕಲ್ಲದೆಯ ಶೂಲದಲಿ ಕೊಲುವರೇನ?

ನೀನಿರದ ಹಾಸಿಗೆ ಸುಡುಸುಡುವ ಬೇಸಿಗೆ
ತಾಳಲಾರೆ, ಹುಡುಗಿ ಬಾಳಲಾರೆ.
ಕಿಚ್ಚಿನೊಳಗಿನ ಕೀಡೆ ಹುರಪಳಿಸಿ ಸಾಯುವೆ;
ಬೂದಿಯಾಗುವ ಮುನ್ನ ಒದಗಿ ಬಾರೆ.

ಜೀವಜೀವದ ಜೊತೆಗೆ ಅದು ಯಾವ ಸರಸವೇ?
ನಿಂತೆ ಜೀವದ ಆಸೆ ಹಂಗ ಹರಿದು
ಬದುಕಿಸಲು ಆಗದಿರೆ ಜೀವ ಬೇಕೆ? ತಗೊಃ
ಸಾವಿನಲ್ಲೂ ನನಗೆ ನೀನೆ ಬೇಕು.

**(ಪ್ರೇಮ ಕಾಮು)**